# ರಾಷ್ಟ್ರೋತ್ಥಾನ ಪರಿಷತ್

ಸ್ವಯಂಸೇವಾ ಸಂಸ್ಥೆ

1965 ರಿಂದ

# ವಾರ್ಷಿಕ ವರದಿ: 2023–24





www.rashtrotthana.org


ರಾಷ್ಟ್ರೋತ್ಥಾನ ಪರಿಷತ್
ಲಕ್ಷ್ಯ
ಸ್ವಸ್ಥ-ಸುಸ್ಥಿರ ಸಮಾಜನಿರ್ಮಾಣ
ಧ್ಯೇಯ
• ಭಾರತೀಯ ಜೀವನಮೌಲ್ಯಗಳನ್ನು ಜನಮನದಲ್ಲಿ ಬೇರೂರಿಸುವ ಸಾಹಿತ್ಯ ನಿರ್ಮಾಣ ಮತ್ತು ಪ್ರಸಾರ.
• ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಸಂಸ್ಕಾರಯುಕ್ತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ.
• ಸಮಾಜದ ಅಗತ್ಯಗಳ ಪೂರ್ತಿಗಾಗಿ ಯೋಗ, ಆರೋಗ್ಯ ಮತ್ತು ವಿವಿಧ ಸೇವಾ ಚಟುವಟಿಕೆಗಳು.
• ಈ ಎಲ್ಲ ಚಟುವಟಿಕೆಗಳಲ್ಲೂ ಉತ್ಕೃಷ್ಟ ಕಾರ್ಯಮಾದರಿಗಳ ಸೃಷ್ಟಿ ಮತ್ತು ಅವುಗಳ ವ್ಯಾಪಕ ಅಳವಡಿಕೆಗೆ ಪ್ರೋತ್ಸಾಹ.
ಮೌಲ್ಯಗಳು
• ಆತ್ಮೀಯತೆ
• ಬದ್ಧತೆ
• ರಾಷ್ಟ್ರಭಕ್ತಿ
• ಸಮಗ್ರತೆ (Integrity)

# ರಾಷ್ಟ್ರೋತ್ಥಾನ ಪರಿಷತ್


## ವಾರ್ಷಿಕ ವರದಿ: 2023–24

# ರಾಷ್ಟ್ರೋತ್ಥಾನ ಪರಿಷತ್
## ಆಡಳಿತ ಮಂಡಳಿ



**ಅಧ್ಯಕ್ಷರು**

ಶ್ರೀ ಎಂ. ಪಿ. ಕುಮಾರ್




**ಉಪಾಧ್ಯಕ್ಷರು**

ಶ್ರೀ ಎ. ಆರ್. ದ್ವಾರಕನಾಥ್



**ಪ್ರಧಾನ ಕಾರ್ಯದರ್ಶಿ**

ಶ್ರೀ ನಾ. ದಿನೇಶ್ ಹೆಗ್ಡೆ




**ಖಜಾಂಚಿ**

ಶ್ರೀ ಕೆ. ಎಸ್. ನಾರಾಯಣ

### ಸದಸ್ಯರು




ಶ್ರೀ ಅಶೋಕ್ ಸೋನ್‌ಕರ್



ಶ್ರೀ ಬಿ. ಎಸ್. ರವಿಕುಮಾರ್



ಶ್ರೀ ಗಜಾನನ ಲೋಂಢೆ



ಶ್ರೀ ಗಣಪತಿ ಹೆಗಡೆ

# ರಾಷ್ಟ್ರೋತ್ಥಾನ ಪರಿಷತ್

## ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ

scan to watch video

ಅನನ್ಯ ರಾಷ್ಟ್ರಪ್ರೇಮವನ್ನು ಮೈಗೂಡಿಸಿಕೊಂಡ ಸಾವಿರಾರು ಸ್ವಯಂಸೇವಕರು ಬಿತ್ತಿದ ಬೀಜವೊಂದು ಇಂದು ಸೇವಾ ಕ್ಷೇತ್ರದ ಹೆಮ್ಮರವಾಗಿ ಬೆಳೆದು ನಿಂತಿದೆ!

ಶ್ರೀ ಯಾದವರಾವ್ ಜೋಷಿ, ಶ್ರೀ ಹೊ. ವೆ. ಶೇಷಾದ್ರಿ ಮೊದಲಾದ ಪ್ರಾಜ್ಞರ ಮಾರ್ಗದರ್ಶನದಲ್ಲಿ ರಾಷ್ಟ್ರೋತ್ಥಾನ ಪರಿಷತ್ ತನ್ನ ಸೇವಾ ಕಾರ್ಯವನ್ನು ಪ್ರಾರಂಭಿಸಿತು.

1965ರಲ್ಲಿ ಸ್ವಯಂಸೇವಾ ಸಂಸ್ಥೆಯಾಗಿ ರಾಷ್ಟ್ರೋತ್ಥಾನ ಪರಿಷತ್ 'ಜನಜಾಗೃತಿ–ಜನಶಿಕ್ಷಣ–ಜನಸೇವಾ' ಎನ್ನುವ ಮಾರ್ಗದರ್ಶಕ ಅಂಶಗಳೊಂದಿಗೆ ಪಯಣ ಆರಂಭಿಸಿ, ಈಗ 'ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ' ಎನ್ನುವ ಉನ್ನತ ಲಕ್ಷ್ಯವನ್ನಿಟ್ಟುಕೊಂಡು ಸಮಾಜಸೇವಾ ಕೈಂಕರ್ಯವನ್ನು ಮುನ್ನಡೆಸುತ್ತಿದೆ.

'ಭಾರತೀಯತೆಯ ಸಮಗ್ರ ಮನೋಭಾವ' ರಾಷ್ಟ್ರೋತ್ಥಾನ ಪರಿಷತ್ತಿನ ಆತ್ಮವಾಗಿದ್ದು, ಆತ್ಮೀಯತೆ, ಬದ್ಧತೆ, ರಾಷ್ಟ್ರಭಕ್ತಿ ಹಾಗೂ ಸಮಗ್ರತೆ ರಾಷ್ಟ್ರೋತ್ಥಾನ ಪರಿಷತ್‌ನ ಮೌಲ್ಯಗಳಾಗಿವೆ.

ತನ್ನ ಪ್ರಾರಂಭಿಕ ಹೆಜ್ಜೆಯಾಗಿ, ರಾಷ್ಟ್ರೀಯತೆಯ ಭಾವನೆಯನ್ನು ಜಾಗೃತಗೊಳಿಸುವ "ಉತ್ಥಾನ" ಮಾಸಪತ್ರಿಕೆಯನ್ನು ರಾಷ್ಟ್ರೋತ್ಥಾನ ಪರಿಷತ್ 1965ರಲ್ಲಿ ಹೊರತಂದಿತು. ನಂತರದ ದಿನಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ ಭಾರತೀಯ ಜೀವನ ಮೌಲ್ಯಗಳನ್ನು ಬೇರೂರಿಸುವ ಸಾಹಿತ್ಯ ಪ್ರಕಟಣೆಗಳ ಮೂಲಕ, ಅದರಲ್ಲೂ ಮುಖ್ಯವಾಗಿ ಭಾರತ–ಭಾರತಿ ಸರಣಿಯ ಪುಸ್ತಕಗಳ ಮೂಲಕ ಜನಮಾನಸವನ್ನು ತಲುಪಿತು. ಹಾಗೆಯೇ ತನ್ನ ಪಯಣವನ್ನು ಮುಂದುವರೆಸಿದ ಸಂಸ್ಥೆಯು 'ಅವಕಾಶಕ್ಕಾಗಿ ಕಾಯದೇ' ನಿರಂತರವಾಗಿ 'ಸೇವಾವಕಾಶಗಳನ್ನು ತಾನೇ ಹುಡುಕಿಕೊಂಡು', ತನ್ನ ಸೇವಾ ವಿಸ್ತಾರವನ್ನು ಹೆಚ್ಚಿಸುತ್ತಾ ಮುನ್ನಡೆಯಿತು. ದಿನಕಳೆದಂತೆ ಸಂಸ್ಥೆಯ ಕಾರ್ಯವ್ಯಾಪ್ತಿಯು ಆರೋಗ್ಯ, ಶಿಕ್ಷಣ, ಪ್ರಕೃತಿ ಸಂರಕ್ಷಣೆ ಹಾಗೂ ಸೇವಾ ವಸತಿಗಳ ಅಭಿವೃದ್ಧಿ ಮುಂತಾದ ಕ್ಷೇತ್ರಗಳಿಗೆ ಪಸರಿಸಿತು. ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಿಗೆ ರಾಷ್ಟ್ರೋತ್ಥಾನದ ಚಟುವಟಿಕೆಗಳು ತಲುಪಿದವು.

### ವಿಸ್ತಾರವಾಗಿ ಬೆಳೆದು ನಿಂತಿರುವ ರಾಷ್ಟ್ರೋತ್ಥಾನದ ಚಟುವಟಿಕೆಗಳು:

- 18ಕ್ಕೂ ಅಧಿಕ ಪ್ರಕಲ್ಪಗಳು
- 1100ಕ್ಕೂ ಹೆಚ್ಚು ಸಾಹಿತ್ಯ ಪ್ರಕಟಣೆಗಳು ಹಾಗೂ ಉತ್ಥಾನ ಮಾಸಪತ್ರಿಕೆ
- ಅತ್ಯಾಧುನಿಕ ಮುದ್ರಣ ಸಾಮರ್ಥ್ಯ ಹೊಂದಿರುವ ಮುದ್ರಣಾಲಯ
- ನಗರ ಮತ್ತು ಗ್ರಾಮೀಣ ಪ್ರದೇಶಗಳ ಹಿಂದುಳಿದ ಮಕ್ಕಳಿಗಾಗಿ ರಾಜ್ಯ ಪಠ್ಯಕ್ರಮದ 11 ಶಾಲೆಗಳು
- 'ಪಂಚಮುಖೀ ಶಿಕ್ಷಣ'ದ ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿರುವ 11 ಸಿ.ಬಿ.ಎಸ್.ಎ. ಪಠ್ಯಕ್ರಮದ ವಿದ್ಯಾಕೇಂದ್ರಗಳು

- 200ಕ್ಕೂ ಹೆಚ್ಚಿನ ಸೇವಾವಸತಿಗಳಲ್ಲಿ 350+ ಶಾಲಾ ನಂತರದ ಕಲಿಕಾ ತರಬೇತಿ ಕೇಂದ್ರಗಳು ಹಾಗೂ 20 ಸೇವಾವಸತಿಗಳ ಸಮಗ್ರ ಅಭಿವೃದ್ಧಿ
- ಯಾವುದೇ ಭೇದ–ಭಾವವಿಲ್ಲದೇ, ಅಗತ್ಯವಿರುವ ಎಲ್ಲ ರೋಗಿಗಳಿಗೂ ಸುರಕ್ಷಿತ ರಕ್ತವನ್ನು ನೀಡುವ 2 ರಕ್ತಕೇಂದ್ರಗಳು, ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ
- ತಲಸ್ಸೆಮಿಯಾ ಪೀಡಿತ ಮಕ್ಕಳಿಗೆ ಉಚಿತ ಆರೈಕಾ ಕೇಂದ್ರ
- ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಸಹಕರಿಸುವ 25+ ಯೋಗ ಕೇಂದ್ರಗಳು
- ದೇಶೀ ತಳಿಯ ಗೋವುಗಳ ಸಂರಕ್ಷಣೆ, ಪ್ರಚಾರ ಹಾಗೂ ಅಭಿವೃದ್ಧಿಗಾಗಿ ಗೋಶಾಲೆ
- 35 ಏಕರೆ ಭೂಮಿಯಲ್ಲಿ 15,000ಕ್ಕೂ ಅಧಿಕ ಸಸಿ ನೆಡುವಿಕೆ
- ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಪ್ರತಿಭಾನ್ವಿತ ಮತ್ತು ಅರ್ಹ ಬಡ ಮಕ್ಕಳಿಗೆ ಉಚಿತ ಪದವಿ ಪೂರ್ವ ಶಿಕ್ಷಣ ಹಾಗೂ ಉನ್ನತ ಶಿಕ್ಷಣದ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡುವ ತಪಸ್ ಮತ್ತು ಸಾಧನಾ ಯೋಜನೆಗಳು
- ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಳನ್ನೊಳಗೊಂಡ ಸಮಗ್ರ ಚಿಕಿತ್ಸೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರಿನಲ್ಲಿ

ಹೀಗೆ ರಾಷ್ಟ್ರೋತ್ಥಾನ ಪರಿಷತ್‌ನ ವೃಕ್ಷ, ಹಲವು ಆಯಾಮಗಳೊಡನೆ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ.

ಕಾರ್ಯಸಾಧನೆಯ ದೃಷ್ಟಿಯಿಂದ ರಾಷ್ಟ್ರೋತ್ಥಾನ ಪರಿಷತ್ ತನ್ನೆಲ್ಲ ಚಟುವಟಿಕೆಗಳನ್ನು ಸಾಹಿತ್ಯ, ಶಿಕ್ಷಣ, ಆರೋಗ್ಯ ಹಾಗೂ ಸೇವೆ ಎನ್ನುವ ಮೂರು ವಿಭಾಗಗಳಲ್ಲಿ ವಿಂಗಡಿಸಿ, ಅನುಷ್ಠಾನಗೊಳಿಸುತ್ತದೆ.

ಉದ್ದೇಶದಲ್ಲಿ ಸ್ಪಷ್ಟತೆ, ಕಾರ್ಯ ಮಾದರಿಯಲ್ಲಿ ಉತ್ಕೃಷ್ಟತೆ, ಕಾರ್ಯನಿರ್ವಹಣೆಯಲ್ಲಿ ನಿಖರತೆ, ವೃತ್ತಿಪರ ದಕ್ಷತೆ, ಸೇವಾ ಕೈಂಕರ್ಯದಲ್ಲಿ ಹಾರ್ದಿಕ ಭಾವ ಹಾಗೂ ಪ್ರತಿ ಹಂತದ ಚಿಕ್ಕಪುಟ್ಟ ಕೆಲಸಗಳನ್ನೂ ಸಹ ಅತ್ಯಂತ ಶ್ರದ್ಧೆಯಿಂದ, ಅಚ್ಚುಕಟ್ಟುತನದಿಂದ ಮಾಡುವುದು ಸಂಸ್ಥೆಯ ವಿಶೇಷತೆ. ಆದ್ದರಿಂದಲೇ ಇಂದು ರಾಷ್ಟ್ರೋತ್ಥಾನ ಪರಿಷತ್‌ನ ಯೋಜನೆಗಳು ಅತಿ ವೇಗವಾಗಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತಲುಪಿ, ಸಮಾಜದ ಮೇಲೆ ಪ್ರಭಾವ ಬೀರಿವೆ. ಸಮಾಜದ ವಿವಿಧ ಆಯಾಮಗಳಲ್ಲಿ ಗಮನಾರ್ಹ ಬದಲಾವಣೆಗೆ ಕಾರಣವಾಗಿವೆ.

**ರಾಷ್ಟ್ರೋತ್ಥಾನ ಪರಿಷತ್**

# 93/1, 'ಕೇಶವ ಶಿಲ್ಪ', ಕೆಂಪೇಗೌಡನಗರ, ಬೆಂಗಳೂರು – 560 004

ದೂರವಾಣಿ: 080-2661 2730/ 31/ 32/ 94482 84602
ಮಿಂಚಂಚೆ: info@rashtrotthana.org

**www.rashtrotthana.org**

FB & Instagram: rashtrotthanaparishath
Twitter: rashtrotthana_p
YouTube: Rashtrotthana
LinkedIn: rashtrotthana-parishat

# ರಾಷ್ಟ್ರೋತ್ಥಾನ ಪರಿಷತ್

## 18 ಸಮಾಜಸೇವಾ ಪ್ರಕಲ್ಪಗಳು 4 ಆಯಾಮಗಳಲ್ಲಿ

## ಸಾಹಿತ್ಯ • ಶಿಕ್ಷಣ • ಆರೋಗ್ಯ • ಸೇವೆ

---

**ಸತ್ ಚಿಂತನ ಜಾಗೃತಿಗೆ ಸಾಹಿತ್ಯ**

- ಉತ್ಥಾನ
- ಸಾಹಿತ್ಯ
- ಮುದ್ರಣಾಲಯ

-----

**ಪಂಚಮುಖೀ ಶಿಕ್ಷಣಕ್ಕಾಗಿ**

- ರಾಜ್ಯ ಪಠ್ಯಕ್ರಮ ಶಾಲೆಗಳು
- ಸಿ.ಬಿ.ಎಸ್.ಇ. ಶಾಲೆಗಳು
- ತಪಸ್–ಸಾಧನಾ
- ಪ್ರಶಿಕ್ಷಣಭಾರತಿ
- ಸಂವಿತ್ ರಿಸರ್ಚ್ ಫೌಂಡೇಷನ್


**ಆರೋಗ್ಯ ಸೇವೆಗಳು:**

- ಯೋಗ
- ರಕ್ತಕೇಂದ್ರ
- ಸಂರಕ್ಷಾ
- ಆಸ್ಪತ್ರೆ
- ಅಗ್ನಿವೇಶ ಆಯುರ್ವೇದ ಅನುಷ್ಠಾನ
- ಸ್ವಾಸ್ಥ್ಯಭಾರತೀ

-----

**ಜನ–ಜೀವ–ಜೀವನ ಸೇವೆಗಳು:**

- ಸೇವಾ ವಸತಿ
- ಮಾಧವ ಸೃಷ್ಟಿ



# ಮಾಗಿ ಫಲಬರುತ್ತಿರುವ ಕಾಲದೊಳಗೊಂದು ಧನ್ಯತೆಯ ಸಂದೇಶ

ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣ ಮಾಡುವ ನಿಟ್ಟಿನಲ್ಲಿ ಕಳೆದ 59 ವರ್ಷಗಳಿಂದ ರಾಷ್ಟ್ರೋತ್ಥಾನ ಪರಿಷತ್ ಸಮಾಜಸೇವಾ ಕೈಂಕರ್ಯದಲ್ಲಿ ಸಕ್ರಿಯವಾಗಿದೆ. ವ್ಯಕ್ತಿ ನಿರ್ಮಾಣ, ತನ್ಮೂಲಕ ಸಮಾಜದಲ್ಲಿ ಪರಿವರ್ತನೆ, ಈ ಹಿನ್ನೆಲೆಯಲ್ಲಿ ಪರಿಷತ್ ನಿರಂತರವಾಗಿ ತನ್ನ ಪ್ರಭಾವ ವಲಯವನ್ನು ವಿಸ್ತರಿಸುತ್ತಾ ಬಂದಿದೆ.

ಕೆಲ ಕಾಲದ ಹಿಂದೆ 'ನಮ್ಮ ಕೆಲಸದ ಗಾತ್ರವನ್ನು ನೋಡಬೇಡಿ, ಗುಣವಂತಿಕೆಯನ್ನು ಮಾತ್ರ ನೋಡಿ' ಎಂದು ಹೇಳುವ ಹಂತದಲ್ಲಿದ್ದೆವು. ಅದನ್ನು ದಾಟಿ ಕೆಲ ವರ್ಷಗಳೇ ಆಗಿವೆ. ಈಗ 'ನಮ್ಮ ಕೆಲಸದ ಗಾತ್ರವನ್ನೂ ನೋಡಿ' ಎನ್ನುವಲ್ಲಿಗೆ ಬಂದು ನಿಂತಿದ್ದೇವೆ ಎಂದು ಮತ್ತೆ ಜ್ಞಾಪಿಸಿಕೊಂಡು ನಿವೇದಿಸಲು ಹೆಮ್ಮೆಯಾಗುತ್ತದೆ. 'ನಮ್ಮ ಕೆಲಸದಲ್ಲಿ ಆಯಾಸಕ್ಕಾಗಲೀ, ನಿರುತ್ಸಾಹಕ್ಕಾಗಲೀ ಎಂದಿಗೂ ಅವಕಾಶವಿಲ್ಲ' ಎಂದು ಮಾನ್ಯ ಜಯದೇವ್ ಅವರು ಹೇಳುತ್ತಿದ್ದ ಕಾರ್ಯಸೂತ್ರ ಈಗ ನಮ್ಮಲ್ಲಿ ರಕ್ತಗತವಾಗಿಬಿಟ್ಟಿದೆ. ಆರಂಭದ ವರ್ಷಗಳಲ್ಲಿ 'ನಮ್ಮದು ದೀರ್ಘಕಾಲದ ನಂತರ ಫಲ ಕೊಡುವ ಕೆಲಸ' ಎಂದು ಹೇಳುತ್ತಿದ್ದೆವು. ಈಗ ಕೆಲಸದ ಸತ್ಫಲವನ್ನು ಕಾಣುವ ಸುಯೋಗ ನಮಗೆಲ್ಲ ಬಂದಿದೆ. ಶಾಲೆ–ಕಾಲೇಜುಗಳಾಗಲಿ, ರಕ್ತ ಕೇಂದ್ರಗಳಾಗಲಿ, ತಪಸ್–ಸಾಧನಾಗಳಾಗಲಿ, ಗೋಶಾಲೆಯಾಗಲಿ – ಒಂದೊಂದೂ ಅನನ್ಯ, ಅಸಾಮಾನ್ಯ ರೀತಿಯದಾದದ್ದು ಎಂಬುದು ಧನ್ಯತೆಯನ್ನು ತಂದುಕೊಡುವ ವಿಚಾರ.

ಲೆಕ್ಕಹಾಕಿ ಮಾಡಿ ಪುಟ್ಟಪುಟ್ಟ ಹೆಜ್ಜೆಗಳನ್ನು ಇಡಬೇಕಾಗಿದ್ದ ಸ್ಥಿತಿಯಿಂದ ಮುಂದೆ ಬಂದಿದ್ದು, ಈಗ ಸಮಾಜವೇ ನಮ್ಮ ಮುನ್ನಡೆಯ ವೇಗವನ್ನು ನಿರ್ಧರಿಸುತ್ತಿದೆ ಎಂದು ಹೇಳಬಹುದು. ಉನ್ನತ ಧ್ಯೇಯಕ್ಕೆ ಅಭಿಮುಖವಾದ ನಿರಂತರ ಕಾರ್ಯವಿಸ್ತಾರವನ್ನು ಸಮಾಜ ನಮ್ಮಿಂದ ಅಪೇಕ್ಷಿಸುತ್ತಿದೆ. ಸಮಾಜ ನಮ್ಮಲ್ಲಿ ಇರಿಸಿರುವ ವಿಶ್ವಾಸವೇ ನಮ್ಮ ನಿಜವಾದ ಬಂಡವಾಳವೂ ಆಗಿದೆ. ಅದಕ್ಕೆ ನಾವು ಸ್ಪಂದಿಸಲೇಬೇಕಾಗಿದೆ. ನಮ್ಮ ಗುರಿ ದೊಡ್ಡದಾಗಿರಲಿ. ಅಬ್ದುಲ್ ಕಲಾಂ ಹೇಳುತ್ತಿದ್ದಂತೆ ಯಾವಾಗಲೂ ದೊಡ್ಡ ಕನಸು ನಮ್ಮದಾಗಿರಲಿ. ದೃಢವಾದ ಹೆಜ್ಜೆಗಳನ್ನಿಡುತ್ತ ಪಯಣ ಸಾಗಿಸೋಣ. ಈ ಸಂದರ್ಭದಲ್ಲಿ ಹೇಳುವುದಾದರೆ, "ರಾಷ್ಟ್ರೋತ್ಥಾನ ಪರಿಷತ್ ಎಂದರೆ ಎಲ್ಲ ಕಾರ್ಯಕರ್ತರ, ಹಿತೈಷಿಗಳ ಮತ್ತು ಬೆಂಬಲಿಗರ ಉದ್ದನೆಯ ನೆರಳು".

ರಾಷ್ಟ್ರೋತ್ಥಾನ ಪರಿಷತ್ 2023–24ರ ಆರ್ಥಿಕ ವರ್ಷದಲ್ಲಿ ನಡೆಸಿದ ಪ್ರಮುಖ ಚಟುವಟಿಕೆಗಳ ಒಂದು ಹಿನ್ನೋಟ ಇಲ್ಲಿದೆ. ಈ ಚಟುವಟಿಕೆಗಳ ವರದಿಗಳು 'ಕಿಟಕಿಯ ಮೂಲಕ ಆಕಾಶ ನೋಡಿದ ಹಾಗೆ', ಆಕಾಶ ಎಷ್ಟು ದೊಡ್ಡದು ಅನ್ನುವುದು ಎಲ್ಲರಿಗೂ ಗೊತ್ತಿದೆ. ನಿರಂತರವಾಗಿ ಚಲಿಸುತ್ತಿರುವವನಿಗೇ ಫಲಗಳ–ಹಣ್ಣುಗಳ ರುಚಿಯ ಆನಂದ ಪ್ರಾಪ್ತವಾಗುತ್ತದೆ. ಸೂರ್ಯದೇವನು ಸತತವಾಗಿ ಚಲಿಸುತ್ತಲೇ

ಇರುತ್ತಾನೆ. ಕ್ಷಣಕಾಲವೂ ಸಹ ಆಲಸಿಯಾಗಿ ನಿಂತಿರುವುದಿಲ್ಲ. ಸನ್ಮಾರ್ಗದಲ್ಲಿ ಮಾನವನು ಯಾವಾಗಲೂ ಮುನ್ನಡೆಯುತ್ತಿರಬೇಕು. ಚರೈವೇತಿ ಚರೈವೇತಿ – ಇದೇ ಸದಾಚಾರದ ಶಾಶ್ವತ ಸಂದೇಶ. ಆ ಪುರಾತನ – ಚಿರನೂತನ ಸಂದೇಶವನ್ನು ಸದಾ ಮನಸ್ಸಿನಲ್ಲಿ ಧರಿಸಿ ಮುಂದೆ ಸಾಗೋಣ.

**ಬನ್ನಿ! ಜೊತೆಗೂಡಿ ಮುನ್ನಡೆಯೋಣ...**



**ನಾ. ದಿನೇಶ್ ಹೆಗ್ಡೆ**
ಪ್ರಧಾನ ಕಾರ್ಯದರ್ಶಿ
ರಾಷ್ಟ್ರೋತ್ಥಾನ ಪರಿಷತ್

# ರಾಷ್ಟ್ರೋತ್ಥಾನ ಪರಿಷತ್
## 2023–24ರ ವಾರ್ಷಿಕ ವರದಿ: ಪ್ರಕಲ್ಪಶಃ

# ಅನುಕ್ರಮಣಿಕೆ


| | |
|---|---|
| ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ | 1 |
| ರಾಷ್ಟ್ರೋತ್ಥಾನ ರಕ್ತಕೇಂದ್ರ – ಬೆಂಗಳೂರು | 11 |
| ರಾಷ್ಟ್ರೋತ್ಥಾನ ರಕ್ತಕೇಂದ್ರ – ಹುಬ್ಬಳ್ಳಿ | 15 |
| ಸಂರಕ್ಷಾ: ತಲಸ್ಸೆಮಿಯಾ ಆರೈಕೆ ಕೇಂದ್ರ | 20 |
| ಅಗ್ನಿವೇಶ ಆಯುರ್ವೇದ ಅನುಷ್ಠಾನ | 22 |
| ಸ್ವಾಸ್ಥ್ಯಭಾರತೀ | 27 |
| ಮಾಧವ ಸೃಷ್ಟಿ | 33 |
| ರಾಷ್ಟ್ರೋತ್ಥಾನ ವಿದ್ಯಾಲಯ: ರಾಜ್ಯ ಪಠ್ಯಕ್ರಮ ಶಾಲೆಗಳು | 40 |
| ರಾಷ್ಟ್ರೋತ್ಥಾನ ವಿದ್ಯಾಕೇಂದ್ರ: ಸಿ.ಬಿ.ಎಸ್.ಇ. ಶಾಲೆಗಳು | 52 |
| ಪ್ರಶಿಕ್ಷಣಭಾರತಿ: ಶಿಕ್ಷಕರ ಪ್ರಶಿಕ್ಷಣ ಪ್ರಕಲ್ಪ | 64 |
| ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪ | 69 |
| ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ | 74 |
| ತಪಸ್ | 81 |
| ಸಾಧನಾ | 86 |
| ಸೇವಾ ವಸತಿ ಪ್ರಕಲ್ಪ | 91 |
| ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆ | 98 |

# ರಾಷ್ಟ್ರೋತ್ಥಾನ ಯೋಗವಿಜ್ಞಾನ ಮತ್ತು ಸಂಶೋಧನ ಸಂಸ್ಥೆ

scan to watch video



ನೂತನ ಯೋಗಕೇಂದ್ರಗಳ ಲೋಕಾರ್ಪಣೆ: ಬೆಂಗಳೂರಿನ ಆರ್.ಬಿ.ಐ. ಬಡಾವಣೆ ಹಾಗೂ ವಿಜಯನಗರ

- ಕಳೆದ 52 ವರ್ಷಗಳಿಂದ ರಾಷ್ಟ್ರೋತ್ಥಾನ ಯೋಗಕೇಂದ್ರವು ಯೋಗಸಂಬಂಧಿತ ಚಟುವಟಿಕೆಗಳನ್ನು ನಡೆಸಿಕೊಂಡುಬರುತ್ತಿದೆ.
- ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಾದ ಶ್ರೀ ಅಜಿತ್‌ಕುಮಾರ್‌ಜೀ ಯೋಗಾಸನ ಕಲಿತು ಸಂಘದ ಚಟುವಟಿಕೆಗಳಲ್ಲಿ ಅದನ್ನು ರೂಢಿಗೆ ತಂದ ಬಳಿಕ ರಾಷ್ಟ್ರೋತ್ಥಾನದ ಯೋಗ ಸಂಬಂಧಿತ ಯೋಜನೆಗೆ ಮಾರ್ಗದರ್ಶಕರಾಗಿ ನಿಂತರು.
- ಜಯನಗರದಲ್ಲಿನ ಶಿಕ್ಷಾಕೇಂದ್ರದಲ್ಲಿ 1978ರಲ್ಲಿ ಅಂಗಸೌಷ್ಠವ ವಿಭಾಗವನ್ನು ಮತ್ತು ನಿಶ್ಶಸ್ತ್ರ ಕಲೆಯಾದ ತೆ–ಕ್ವಾಂಡೋ ಚಟುವಟಿಕೆಗಳನ್ನು ಆರಂಭಿಸಲಾಯಿತು.
- 1981ರಲ್ಲಿ ರಾಷ್ಟ್ರೋತ್ಥಾನ ಕೇಂದ್ರಕಛೇರಿಯಲ್ಲಿ ಎರಡನೇ ಯೋಗಕೇಂದ್ರವನ್ನು ಆರಂಭಿಸಲಾಯಿತು, ಪ್ರಸ್ತುತ 25 ಯೋಗಕೇಂದ್ರಗಳಿವೆ.

## ಉದ್ದೇಶ:



- ಯೋಗಾಭ್ಯಾಸಿಗಳಲ್ಲಿ ಉತ್ತಮ ಜೀವನಶೈಲಿಯನ್ನು ರೂಪಿಸಿ ಸರ್ವತೋಮುಖ ವಿಕಾಸದೊಡನೆ ಸಕಾರಾತ್ಮಕ ಚಿಂತನೆಯನ್ನು ತರುವುದು.
- ಯೋಗಾಭ್ಯಾಸಿಗಳಲ್ಲಿ ಸಂವೇದನಾಶೀಲತೆ, ಸೇವಾಭಾವನೆ ಮತ್ತು 'ದೇಶ ಮೊದಲು' ಎನ್ನುವ ಭಾವನೆಯನ್ನು ಮೂಡಿಸುವುದು.



- ಮಾನವೀಯ ಮೌಲ್ಯಗಳು, ಸಾಮಾಜಿಕ ಬದ್ಧತೆ, ರಾಷ್ಟ್ರಹಿತ ಹೊಂದಿರುವ ಆರೋಗ್ಯವಂತ ಯೋಗಾಭ್ಯಾಸಿಗಳಿಗೆ ಪೂರಕ ವಿಧಾನಗಳ ಅಳವಡಿಕೆ ಮತ್ತು ಅದರ ವ್ಯಾಪಕತೆ ಹೆಚ್ಚಿಸುವುದು.
- ಅಧ್ಯಯನ, ಅಭ್ಯಾಸ, ಕೌಶಲಯುಕ್ತ ಶಿಕ್ಷಕರ ತಂಡ ರಚನೆ.



- ಕ್ರಮಬದ್ಧ ಸಂಶೋಧನೆಯ ಮೂಲಕ ಯೋಗದ ಬಗ್ಗೆ ಸಮಾಜದಲ್ಲಿ ವಿಶ್ವಾಸವನ್ನು ಬೆಳೆಸುವುದು.

## ಚಟುವಟಿಕೆಗಳು:



### ಯೋಗ ಚಟುವಟಿಕೆಗಳು:

- ಪ್ರಸ್ತುತ ಬೆಂಗಳೂರಿನಲ್ಲಿ 23 ಕೇಂದ್ರಗಳು ನಡೆಯುತ್ತಿದ್ದು, ಮೈಸೂರು ಹಾಗೂ ದಾವಣಗೆರೆಯಲ್ಲಿ ತಲಾ 1 ಕೇಂದ್ರಗಳು ಸೇರಿ ಒಟ್ಟು 25 ಕೇಂದ್ರಗಳು ನಡೆಯುತ್ತಿವೆ.
- ಪ್ರತಿನಿತ್ಯ ಬೆಳಿಗ್ಗೆ 5:00 ರಿಂದ ಸಂಜೆ 8:00ರ ವರೆಗೆ ಬೇರೆ ಬೇರೆ ಅವಧಿಗಳಲ್ಲಿ, ಬೇರೆ ಬೇರೆ ಸ್ತರಗಳಲ್ಲಿ (ಪ್ರವೇಶ, ಅಭ್ಯಾಸ, ಪ್ರಗತ, ಯೋಗ ಚಿಕಿತ್ಸೆ, ವಾರಾಂತ್ಯದ ಯೋಗ ತರಗತಿ, ಮಕ್ಕಳ ಯೋಗ ತರಗತಿಗಳು) ಒಟ್ಟು 194 ಯೋಗ ತರಗತಿಗಳು ನಡೆಯುತ್ತಿವೆ.
- ಸುಮಾರು 3549 ಯೋಗಾಭ್ಯಾಸಿಗಳು ಪ್ರತಿನಿತ್ಯ ಯೋಗ ತರಗತಿಗಳಲ್ಲಿ ಭಾಗವಹಿಸುತ್ತಿದ್ದಾರೆ. ಸುಮಾರು 198 ಶಿಕ್ಷಕರು ತರಬೇತಿ ನೀಡುತ್ತಿದ್ದಾರೆ.

**ಫಿಟ್‌ನೆಸ್ ಸೆಂಟರ್:**

- ಆಧುನಿಕ ಜೀವನಶೈಲಿಗೆ ಸರಿ ಹೊಂದುವಂತಹ ಫಿಟ್ನೆಸ್ ಸೆಂಟರನ್ನು ಜಯನಗರ, ಸದಾಶಿವನಗರದಲ್ಲಿ ನಡೆಸಲಾಗುತ್ತಿದೆ. ಎಲ್ಲ ವಯೋಮಾನದವರೂ ಸೇರಿ ಒಟ್ಟು 312 ಜನರು ಅಭ್ಯಾಸ ಮಾಡುತ್ತಿದ್ದಾರೆ.

**ಕರಾಟೆ ಹಾಗೂ ಕಳರಿಪಯಟ್ಟು ತರಗತಿಗಳು:**

- ಆತ್ಮರಕ್ಷಣೆ ಕಲೆಯಾದ ಕರಾಟೆಯ ತರಗತಿಗಳು ಜಯನಗರ, ನಾಗರಭಾವಿ, ವಿಜಯನಗರ, ಗಾಯಿತ್ರೀನಗರ, ಕುಂದಲಹಳ್ಳಿ ಹಾಗೂ ಸುಂಕೇನಹಳ್ಳಿ, ಒಟ್ಟು 6 ಕೇಂದ್ರಗಳಲ್ಲಿ ಪ್ರತಿನಿತ್ಯ ನಡೆಯುತ್ತಿವೆ. 326 ಮಂದಿ ಅಭ್ಯಾಸ ಮಾಡುತ್ತಿದ್ದಾರೆ.
- ಮತ್ತೊಂದು ಆತ್ಮರಕ್ಷಣೆಯ ಕಲೆಯಾದ ಕಳರಿಪಯಟ್ಟು ತರಗತಿಯನ್ನು ಕುಂದಲಹಳ್ಳಿ ಕೇಂದ್ರದಲ್ಲಿ ನಡೆಸಲಾಗುತ್ತಿದೆ. ಇಲ್ಲಿ ಸುಮಾರು 35 ಅಭ್ಯಾಸಿಗಳು ಇದ್ದಾರೆ.







**ರಾಷ್ಟ್ರೋತ್ಥಾನ ಅಂಗಮರ್ದನ ಚಿಕಿತ್ಸೆ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರ:**

- ಜಯನಗರದಲ್ಲಿ ಕಳೆದ 20 ವರ್ಷಗಳಿಂದ ರಾಷ್ಟ್ರೋತ್ಥಾನ ಅಂಗಮರ್ದನ ಮತ್ತು ಉಗಿಸ್ನಾನ ಚಿಕಿತ್ಸಾ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ.
- ಪಾರ್ಶ್ವವಾಯು, ಪಾರ್ಕಿನ್ಸನ್, ಬೆನ್ನುನೋವು, ಗಂಟುನೋವು, ರಕ್ತದೊತ್ತಡ ಮುಂತಾದ ತೊಂದರೆಗಳಿಂದ ನರಳುತ್ತಿರುವವರು ಇದರ ಲಾಭ ಪಡೆದು ತಮ್ಮ ದೈಹಿಕ ಬದಲಾವಣೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.





**ಚೆಸ್ ಮತ್ತು ಟೇಬಲ್ ಟೆನಿಸ್:**

- ಈ ವರ್ಷ ಒಳಾಂಗಣ ಕ್ರೀಡೆಗಳಾದ ಚೆಸ್, ಟೇಬಲ್ ಟೆನಿಸ್ ಅನ್ನು ಕುಂದಲಹಳ್ಳಿ ಆರೋಗ್ಯ ಸಂಕೀರ್ಣದಲ್ಲಿ ಆರಂಭಿಸಲಾಗಿದ್ದು, ಒಟ್ಟು 200 ಜನರು ಪಾಲ್ಗೊಳ್ಳುತ್ತಿದ್ದಾರೆ.




**ಈಜುಕೊಳ:**

- 2022 ನವೆಂಬರ್ ತಿಂಗಳಿನಲ್ಲಿ ಕುಂದಲಹಳ್ಳಿ ಒಳಾಂಗಣ ಈಜುಕೊಳವನ್ನು ಪ್ರಾರಂಭಿಸಲಾಗಿದ್ದು, ಪ್ರತಿದಿನ 713ಕ್ಕೂ ಹೆಚ್ಚು ಅಭ್ಯಾಸಿಗಳು ಬರುತ್ತಿದ್ದಾರೆ.



**ಸಂಗೀತ ಮತ್ತು ನೃತ್ಯ ಕೇಂದ್ರ:**

- ಸಂಗೀತಾಸಕ್ತರಿಗೆ ತರಬೇತಿ ನೀಡುವ ಉದ್ದೇಶದಿಂದ ಜಯನಗರ, ಸದಾಶಿವನಗರ, ಸುಂಕೇನಹಳ್ಳಿ, ನಾಗರಭಾವಿ, ಕುಂದಲಹಳ್ಳಿ, ಗಾಯತ್ರೀನಗರ (6) ಕೇಂದ್ರಗಳಲ್ಲಿ ನೃತ್ಯ–ಸಂಗೀತ ಕೇಂದ್ರಗಳನ್ನು ಆರಂಭಿಸಲಾಗಿದೆ.



- ಪ್ರತಿದಿನ ತಬಲಾ, ವೀಣೆ, ಮೃದಂಗ, ಭರತನಾಟ್ಯ, ಸುಗಮಸಂಗೀತ, ಕರ್ನಾಟಕ ಸಂಗೀತ, ಕಥಕ್ ತರಗತಿಗಳು ನಡೆಯುತ್ತಿದ್ದು, 360ಕ್ಕೂ ಹೆಚ್ಚಿನ ಮಂದಿ ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ.



**ಭಗವದ್ಗೀತಾ ತರಗತಿಗಳು:**

- ಯೋಗಾಭ್ಯಾಸಿಗಳಿಗೆ ಭಗವದ್ಗೀತಾ ಪಠಣ ಹಾಗೂ ಪ್ರವಚನ ತರಗತಿಯನ್ನು ಸುಂಕೇನಹಳ್ಳಿ ಕೇಂದ್ರದಲ್ಲಿ ಏಪ್ರಿಲ್ 15ರಿಂದ ಪ್ರತಿ ಶನಿವಾರ ಸಂಜೆ 6:30 ಗಂಟೆಗೆ ನಡೆಸಲಾಗುತ್ತಿದೆ.

**ಕೌನ್ಸೆಲಿಂಗ್ ಕೇಂದ್ರಗಳು:**

- ಒಟ್ಟು 4 ಸೆಂಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ.

**ಮಕ್ಕಳ ಯೋಗ ತರಗತಿ:**

- ಮಕ್ಕಳ ದೈಹಿಕ ಹಾಗೂ ಮಾನಸಿಕ ವಿಕಾಸಕ್ಕಾಗಿ ಪ್ರತಿ ಭಾನುವಾರ ಎಲ್ಲ ಯೋಗ ಕೇಂದ್ರಗಳಲ್ಲಿ ಮಕ್ಕಳ ವಾರಾಂತ್ಯದ ತರಗತಿಗಳನ್ನು ನಡೆಸಲಾಗುತ್ತಿದೆ.

**ಬಾಲ ಸಂಸ್ಕಾರ ಕೇಂದ್ರ:**

- ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕೇಶವಶಿಲ್ಪ, ನಾಗರಭಾವಿ, ಸದಾಶಿವನಗರ, ಕುಂದಲಹಳ್ಳಿ ಕೇಂದ್ರಗಳಲ್ಲಿ ಬಾಲಸಂಸ್ಕಾರ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ವರ್ಗದಲ್ಲಿ ಮಕ್ಕಳಿಗೆ ಶ್ಲೋಕ, ಜೀವನಶೈಲಿ, ಭಜನೆ, ಕಥೆಗಳು, ಆಟಗಳು, ಚಿತ್ರಕಲೆ, ಕರಕುಶಲ ಕಲೆ ಮೊದಲಾದವುಗಳನ್ನು ಹೇಳಿಕೊಡಲಾಗುವುದು.






**ಸಂಸ್ಕೃತ ಬಾಲಕೇಂದ್ರ:**

- ದೇವಭಾಷೆಯಾದ ಸಂಸ್ಕೃತದ ಅಭಿರುಚಿಯು ಬಾಲ್ಯದಿಂದಲೇ ಸಿಗಬೇಕೆಂಬ ಉದ್ದೇಶದಿಂದ ಮಕ್ಕಳಿಗೆ ವಾರಕ್ಕೊಮ್ಮೆ ಸಂಸ್ಕೃತ ಬಾಲಕೇಂದ್ರವನ್ನು ನಡೆಸಲಾಗುತ್ತಿದೆ. ಈ ಶಿಬಿರದಲ್ಲಿ ಸಂಸ್ಕೃತ ಸಂಭಾಷಣೆ, ಸಂಸ್ಕೃತ ಲಿಪಿ ಮುಂತಾದುವುಗಳ ಅಭ್ಯಾಸ ಮಾಡಿಸಲಾಗುತ್ತಿದೆ.



## ಕ್ರಮಿಸಿರುವ ಮೈಲುಗಲ್ಲುಗಳು:

- ಸಂಸ್ಥೆಯ ಯೋಗಕೇಂದ್ರದಲ್ಲಿ ಹಲವು ವರ್ಷಗಳಿಂದ ಯೋಗಾಭ್ಯಾಸ ಮಾಡುತ್ತಿರುವ ಯೋಗಾಭ್ಯಾಸಿಗಳನ್ನು ಗುರುತಿಸಿ, ಅವರಿಗೆ ವಿಶೇಷ ತರಬೇತಿ ನೀಡಿ ಅವರನ್ನು ಯೋಗ ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ.
- ಪ್ರಸ್ತುತ 130 ಮಂದಿ ಗೌರವ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.



• ಪೂರ್ಣಾವಧಿ ಕಾರ್ಯಕರ್ತರನ್ನು ಗುರುತಿಸಿ ಅವರನ್ನೂ ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ.
• ಒಟ್ಟು 25 ಮಂದಿ ಪೂರ್ಣಾವಧಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ.
• ಯೋಗ ಮತ್ತು ನೃತ್ಯ ಸಲಹಾಮಂಡಳಿಯನ್ನು ರಚಿಸಲಾಗಿದೆ.
• ಪ್ರಕಲ್ಪದ ಪ್ರಭಾವವನ್ನು ಅಳೆಯಲು ಮಾನದಂಡಗಳನ್ನು ನಿಶ್ಚಯಿಸಲಾಗಿದೆ.

## ಕಾರ್ಯಕ್ರಮಗಳು:

• **ವಿವಿಧ ಉತ್ಸವಗಳ ಆಚರಣೆ:** ರಥಸಪ್ತಮಿ ಪ್ರಯುಕ್ತ ಸಾಮೂಹಿಕ ಸೂರ್ಯನಮಸ್ಕಾರ, ರಕ್ಷಾಬಂಧನ ಉತ್ಸವ, ಗುರುಪೂರ್ಣಿಮಯ ನಿಮಿತ್ತ ಪತಂಜಲಿ ನಮನ, ಆಯುಧ ಪೂಜೆ, ಅಂತರಾಷ್ಟ್ರೀಯ ಯೋಗದಿನಾಚರಣೆ ಮುಂತಾದ ಉತ್ಸವಗಳನ್ನು ಆಚರಿಸಲಾಯಿತು.
• ವಿವಿಧ ಕೇಂದ್ರಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಡಾ॥ ಸುಬ್ರಮಣ್ಯ ಭಟ್, ರಾಮಕೃಷ್ಣ ಮಠದ ಸೌಖ್ಯಾನಂದ ಸ್ವಾಮಿಜೀ, ಡಾ॥ ವಿ. ಬಿ. ಆರತಿ, ಶ್ರೀ ನಾ. ವೆಂಕಟೇಶ ಹೆಗ್ಡೆ, ಆಚಾರ್ಯ ಮಹಿದಾಸ್ ಮುಂತಾದವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.
• **ಕುಟುಂಬ ಮಿಲನ ಕಾರ್ಯಕ್ರಮ:** ಜಯನಗರ ಕೇಂದ್ರದಲ್ಲಿ ಕುಟುಂಬ ಮಿಲನ ಕಾರ್ಯಕ್ರಮವನ್ನು ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಾಯಿತು. ಮುಖ್ಯ ಅತಿಥಿಗಳಾಗಿ ಸಾಮಾಜಿಕ ಕಾರ್ಯಕರ್ತರಾದ ಶ್ರೀ ವೆಂಕಟೇಶ್ ಮೂರ್ತಿಯವರು ಆಗಮಿಸಿದ್ದರು. ಕೊನೆಯಲ್ಲಿ ಯೋಗಾಭ್ಯಾಸಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ಜರುಗಿತು.
• **ಸುಗ್ಗಿ ಸಂಭ್ರಮ:** ಗಾಯತ್ರೀನಗರ ಕೇಂದ್ರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಸುಗ್ಗಿ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸಾಮಾಜಿಕ ಕಾರ್ಯಕರ್ತರಾದ ಶ್ರೀ ಮಾ. ಚಂ. ನಾಗರಾಜ್ ಅವರು ಭಾರತೀಯ ಸಂಸ್ಕೃತಿ, ಪರಂಪರೆ, ಇತಿಹಾಸದ ಕುರಿತು ಮಾತನಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕೇಂದ್ರದ ಅಭ್ಯಾಸಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.
• **ಸಂಕ್ರಾಂತಿ ಪ್ರಯುಕ್ತ ಕೋಲಾಟ ಕಾರ್ಯಕ್ರಮ:** ಜನವರಿ 6ರಂದು ಕೇಶವಶಿಲ್ಪ ಯೋಗಕೇಂದ್ರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಕೋಲಾಟವನ್ನು ಆಯೋಜಿಸಲಾಯಿತು. ಕೇಶವಶಿಲ್ಪ ಹಾಗೂ ಸುಂಕೇನಹಳ್ಳಿ ಕೇಂದ್ರದ 200ಕ್ಕೂ ಹೆಚ್ಚು ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡರು. ಸಾಮಾಜಿಕ ಕಾರ್ಯಕರ್ತರಾದ ಶ್ರೀ ಪ್ರಮೋದ್‌ರವರು ಸಂಕ್ರಾಂತಿ ಹಬ್ಬದ ವೈಶಿಷ್ಟ್ಯ ಹಾಗೂ ಜನವರಿ 22ರಂದು ಅಯೋಧ್ಯೆಯಲ್ಲಿ ನಡೆಯುವ ಶ್ರೀರಾಮ ವಿಗ್ರಹದ ಪ್ರತಿಷ್ಠಾಪನೆ ಕುರಿತು ಮಾತನಾಡಿದರು.
• **ದಾಂಡಿಯಾ ಉತ್ಸವ:** ನವರಾತ್ರಿ ಹಬ್ಬದ ಪ್ರಯುಕ್ತ ಸದಾಶಿವನಗರ ಹಾಗೂ ಜಯನಗರ ಯೋಗ ಮತ್ತು ಫಿಟ್ನೆಸ್ ಕೇಂದ್ರಗಳಲ್ಲಿ ದಾಂಡಿಯಾವನ್ನು ಆಯೋಜಿಸಲಾಯಿತು. ಎರಡೂ ಕೇಂದ್ರಗಳಿಂದ 400ಕ್ಕೂ ಹೆಚ್ಚು ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

- **ಗೋಪೂಜೆ:** ಬೆಂಗಳೂರಿನಲ್ಲಿರುವ ರಾಷ್ಟ್ರೋತ್ಥಾನ ಯೋಗ, ಫಿಟ್ನೆಸ್, ಕರಾಟೆ, ನೃತ್ಯ–ಸಂಗೀತ ಕೇಂದ್ರದಲ್ಲಿ ಜನವರಿ 7ರಂದು ಬೆಳಗ್ಗೆ 8ರಿಂದ ಸಂಜೆ 5ರ ವರೆಗೆ ಗೋಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಜೆ 6ರಿಂದ ಡಾ॥ ನಾ. ಸೋಮೇಶ್ವರ್ ಅವರು ಗೋ ಉತ್ಪನ್ನದ ವೈಜ್ಞಾನಿಕ ಮಹತ್ತ್ವದ ಕುರಿತು ಉಪನ್ಯಾಸ ನೀಡಿದರು. ಗೋ ಆರತಿಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

- **ಆರಾಧನಾ ಮಹೋತ್ಸವ:** ಬೆಂಗಳೂರಿನ ಕುಂದಲಹಳ್ಳಿಯಲ್ಲಿರುವ ರಾಷ್ಟ್ರೋತ್ಥಾನ ನೃತ್ಯ–ಸಂಗೀತ ಕೇಂದ್ರದಲ್ಲಿ ಸಂಗೀತದ ತ್ರಿಮೂರ್ತಿಗಳಾದ ಶ್ರೀ ತ್ಯಾಗರಾಜರು, ಶ್ರೀ ಮುತ್ತುಸ್ವಾಮಿ ದೀಕ್ಷಿತರ್, ಶ್ಯಾಮಾ ಶಾಸ್ತ್ರಿ ಹಾಗೂ ಕರ್ನಾಟಕ ಸಂಗೀತ ಪಿತಾಮಹರಾದ ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವವನ್ನು ಆಚರಿಸಲಾಯಿತು. ಈ ಆರಾಧನಾ ಮಹೋತ್ಸವದಲ್ಲಿ ನೃತ್ಯ–ಸಂಗೀತ ಕೇಂದ್ರದ ವಿದ್ಯಾರ್ಥಿಗಳು ತಾವು ಕಲಿತ ಕಲೆಯ ಪ್ರದರ್ಶನವನ್ನು ಮಾಡಿದರು. ಭಾಗವಹಿಸಿದವರೆಲ್ಲರಿಗೂ ಪ್ರಮಾಣ ಪತ್ರವನ್ನು ನೀಡಲಾಯಿತು.

- **ಮಕ್ಕಳ ಬೇಸಿಗೆ ಶಿಬಿರ:** ಏಪ್ರಿಲ್ ತಿಂಗಳಿನಲ್ಲಿ ಬೇಸಿಗೆ ಶಿಬಿರವನ್ನು ನಾಗರಭಾವಿ, ಜಯನಗರ, ಕೇಶವಶಿಲ್ಪ, ಕುಂದಲಹಳ್ಳಿ ಹಾಗೂ ಸದಾಶಿವನಗರ ಕೇಂದ್ರಗಳಲ್ಲಿ ಆಯೋಜಿಸಲಾಯಿತು. ಒಟ್ಟು 450 ಮಕ್ಕಳು ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ಯೋಗ, ಚಿತ್ರಕಲೆ, ಆಟಗಳು, ಶ್ಲೋಕ, ಭಜನೆ, ಮೌಲ್ಯಯುಕ್ತ ಕಥೆಗಳನ್ನು ಹೇಳಿಕೊಡಲಾಯಿತು.







- **ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ವಿಶೇಷ ಕಾರ್ಯಕ್ರಮ ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣ, ಕುಂದಲಹಳ್ಳಿಯಲ್ಲಿ:** ಈ ಕಾರ್ಯಕ್ರಮದಲ್ಲಿ ವಿಭು ಅಕಾಡೆಮಿಯ ಸಂಸ್ಥಾಪಕಿಯಾದ ಡಾ॥ ವಿ. ಬಿ. ಆರತಿಯವರು ರಾಮಾಯಣ, ಮಹಾಭಾರತದಲ್ಲಿನ ಆಯ್ದ ಮೌಲ್ಯಾಧಾರಿತ ಕಥೆಗಳನ್ನು ಹೇಳಿದರು. ತದನಂತರ ಬೆಂಗಳೂರಿನ ಪ್ರತಿಷ್ಠಿತ ಧಾತು ಗೊಂಬೆಯಾಟ ರಂಗಭೂಮಿ ತಂಡದವರಿಂದ 'ಅಷ್ಟಾವಕ್ರ' ಎನ್ನುವ ಬೊಂಬೆಯಾಟ ಪ್ರದರ್ಶನವು ಜರುಗಿತು.

- **ಸೈಕಲ್ ಟು ಮೈಸೂರು:** ಫಿಟ್ನೆಸ್ ಸೆಂಟರ್ ಜಯನಗರ ಹಾಗೂ ಸದಾಶಿವನಗರ ಶಾಖೆಯ ಫಿಟ್‌ನೆಸ್ ಕೇಂದ್ರದ 40 ಅಭ್ಯಾಸಿಗಳಿಗಾಗಿ ಸೈಕಲ್ ಟು ಮೈಸೂರು ಕಾರ್ಯಕ್ರಮವನ್ನು ಹಮ್ಮಿಕೊಂಡಿತು. 12 ವಾರಗಳ ಕಠಿಣ ತರಬೇತಿಯ ಬಳಿಕ ಡಿಸೆಂಬರ್ 2ರಂದು ಬೆಳಗ್ಗೆ 4:15ಕ್ಕೆ ಅಭ್ಯಾಸಿಗಳು ಬೆಂಗಳೂರಿನಿಂದ ಮೈಸೂರಿಗೆ ಸೈಕಲ್ ಮೂಲಕ ತೆರಳಿದರು.

## ತರಬೇತಿ ಕಾರ್ಯಾಗಾರಗಳು:

ಯೋಗ ಶಿಕ್ಷಕರ ಸಾಮರ್ಥ್ಯವರ್ಧನೆಗಾಗಿ ಯೋಗ ಶಿಕ್ಷಕರ **ಪ್ರಶಿಕ್ಷಣ ವರ್ಗ**ವನ್ನು ಫೆಬ್ರವರಿ 4ರಂದು ಜಯನಗರ ಯೋಗ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

- ಖ್ಯಾತ ಪ್ರವಚಕಾರರಾದ ಶ್ರೀ ಭೀಮಸೇನ್ ಆಚಾರ್ಯ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಎಸ್. ಎಸ್. ಗೋಪಾಲ್‌ರವರು ಶಿಕ್ಷಕರನ್ನುದ್ದೇಶಿಸಿ ಮಾತನಾಡಿದರು.
- ಪ್ರಶಿಕ್ಷಣ ವರ್ಗದಲ್ಲಿ ಪ್ರಾಣಾಯಾಮ, ಧ್ಯಾನದ ಅಭ್ಯಾಸವನ್ನು ಮಾಡಿಸಲಾಯಿತು. ಒಟ್ಟು 120 ಶಿಕ್ಷಕರು ಪಾಲ್ಗೊಂಡಿದ್ದರು.

## ವರ್ಷಾವಧೀ ಕಾರ್ಯಕಲಾಪಗಳು:

**ಉಪನ್ಯಾಸ ಕಾರ್ಯಕ್ರಮಗಳು:**

- ಯೋಗಾಭ್ಯಾಸದ ಜೊತೆಗೆ ಒಳ್ಳೆಯ ಆರೋಗ್ಯ, ನಡವಳಿಕೆ, ಸುಸಂಸ್ಕೃತ ಜೀವನದ ಬಗ್ಗೆ ಜಾಗೃತಿ ಮೂಡಿಸಲು ಅನೇಕ ಉಪನ್ಯಾಸಗಳನ್ನು ಆಯೋಜಿಸಲಾಯಿತು.
- ಡಾ॥ ದೀಪಶ್ರೀ (ಚರ್ಮದ ಹಾಗೂ ಕೂದಲಿನ ಸೌಂದರ್ಯ ರಕ್ಷಣೆ), ಡಾ॥ ಪ್ರಮೋದ್ ಎಸ್. ಚಿಂದರ್ (ಹೆಲ್ತ್ ಇನ್ $360^0$), ಡಾ॥ ನಾ. ಸೋಮೇಶ್ವರ್ (ಹೊಟ್ಟೆಯಲ್ಲೊಂದು ಮೆದುಳು), ಡಾ॥ ಶ್ರೀ ಲಕ್ಷ್ಮೀ (ಮಹಿಳೆಯರ ಆರೋಗ್ಯ ರಕ್ಷಣೆ), ಡಾ॥ ವಸುಧಾರಾವ್ (ಉತ್ತಮ ಆರೋಗ್ಯಕ್ಕಾಗಿ ಆಹಾರ) ಮುಂತಾದವರು ಬೆಂಗಳೂರಿನ ವಿವಿಧ ಕೇಂದ್ರಗಳಲ್ಲಿ ಉಪನ್ಯಾಸವನ್ನು ನೀಡಿದರು.

**ಸಹಲ್:**

- ಯೋಗ ಬಂಧುಗಳಲ್ಲಿ ಕೌಟುಂಬಿಕ ಭಾವನೆ ಮೂಡಿಸುವ ಸಲುವಾಗಿ ಶಿಕ್ಷಕರಿಗೆ ಹಾಗೂ ಅಭ್ಯಾಸಿಗಳಿಗೆ ಪ್ರತ್ಯೇಕವಾಗಿ ಸಹಲ್–ಅನ್ನು (ಪ್ರವಾಸ) ಆಯೋಜಿಸಲಾಯಿತು.
- **ಶಿಕ್ಷಕರಿಗೆ:** ಬಿಳಿಗಿರಿರಂಗನ ಬೆಟ್ಟಕ್ಕೆ ಒಂದು ದಿನದ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದ್ದು 140 ಶಿಕ್ಷಕರು ಪಾಲ್ಗೊಂಡಿದ್ದರು.
- **ಅಭ್ಯಾಸಿಗಳಿಗೆ:** ನಂದಿಗ್ರಾಮ, ಚಿಕ್ಕಬಳ್ಳಾಪುರದಲ್ಲಿರುವ ಆದಿಯೋಗಿ ಹಾಗೂ ವಿದುರಾಶ್ವತ್ಥ ಸ್ಥಳಗಳಿಗೆ ಒಂದು ದಿನದ ಪ್ರವಾಸವನ್ನು ಹಮ್ಮಿಕೊಳ್ಳಲಾಯಿತು. ಒಟ್ಟು 650 ಜನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಸೇವಾ ಪ್ರಕಲ್ಪಗಳ ವೀಕ್ಷಣೆ:**

- ಆನೇಕಲ್ ಹಾಗೂ ಗಾಯತ್ರೀನಗರ ಕೇಂದ್ರದ 70 ವಿದ್ಯಾರ್ಥಿಗಳು ನವೆಂಬರ್ ತಿಂಗಳಿನಲ್ಲಿ ಸೇವಾ ಪ್ರಕಲ್ಪವಾದ ರಾಷ್ಟ್ರೋತ್ಥಾನ ಗೋಶಾಲೆಗೆ ಭೇಟಿ ನೀಡಿದರು.

**ಮತದಾನ ಜಾಗೃತಿ ಅಭಿಯಾನ:**

ಮತದಾನ ಎಲ್ಲರ ಹಕ್ಕು. 100% ಪ್ರತಿಶತ ಮತದಾನ, ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಉತ್ತಮ ಆಡಳಿತಗಾರನ ಅಗತ್ಯತೆಯ ಕುರಿತು ಎಲ್ಲಾ ಯೋಗಕೇಂದ್ರಗಳಲ್ಲಿ ಮತದಾನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಪ್ರತಿ ತರಗತಿಯಲ್ಲಿ ಅಭ್ಯಾಸಿಗಳು ತಮ್ಮ ಪರಿಸರ, ಪಾರ್ಕ್ ಮುಂತಾದೆಡೆ ಹೋಗಿ ಅಲ್ಲಿ ಸಮಾಜ ಬಾಂಧವರೊಂದಿಗೆ ಅನೌಪಚಾರಿಕವಾಗಿ ಮಾತುಕತೆ ಮಾಡಬೇಕೆಂದು ತಿಳಿಸಲಾಯಿತು. ಶ್ರೀ ರಾಜೇಶ್ ಪದ್ಮಾರ್, ಶ್ರೀ ಕರುಣಾಕರ ರೈ, ಶ್ರೀ ರಾಧಾಕೃಷ್ಣ ಹೊಳ್ಳ, ಶ್ರೀಮತಿ ವಂದನಾ ಶಾಸ್ತ್ರೀ ಮುಂತಾದವರು ಬಂದು ಮತದಾನದ ಅವಶ್ಯಕತೆ ಮತ್ತು ಜವಾಬ್ದಾರಿ ಇದರ ಕುರಿತಾಗಿ ವಿಸ್ತ್ರತವಾಗಿ ಮಾತನಾಡಿದರು.

**ಕನ್ನಡ ಕಲಿಕಾ ಕೇಂದ್ರ:**

ಕುಂದಲಹಳ್ಳಿ ಯೋಗಕೇಂದ್ರದ ಪ್ರದೇಶದಲ್ಲಿ ಬೇರೆ ರಾಜ್ಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುತ್ತಾರೆ. ಅವರಿಗೆ ಕನ್ನಡ ಪರಿಚಯ ಹಾಗೂ ಮಾತನಾಡಲು ಬರಬೇಕೆಂಬ ಉದ್ದೇಶದಿಂದ 3 ತಿಂಗಳ ತರಗತಿಗಳನ್ನು 2 ಬಾರಿ ನಡೆಸಲಾಯಿತು. 80 ಜನರು ಈ ತರಗತಿಗಳ ಲಾಭವನ್ನು ಪಡೆದುಕೊಂಡಿದ್ದಾರೆ.

**ನೃತ್ಯ-ಸಂಗೀತ ಕೇಂದ್ರದ ವಾರ್ಷಿಕೋತ್ಸವ:**

2021ರಲ್ಲಿ ಬೆಂಗಳೂರಿನ ಕುಂದಲಹಳ್ಳಿಯಲ್ಲಿರುವ ರಾಷ್ಟ್ರೋತ್ಥಾನ ಆರೋಗ್ಯ ಸಂಕೀರ್ಣದಲ್ಲಿ ಆರಂಭವಾದ ನೃತ್ಯ-ಸಂಗೀತ ಕೇಂದ್ರವು 2 ವರ್ಷ ಪೂರ್ಣಗೊಳಿಸಿದ ನೆನಪಿಗಾಗಿ ವಾರ್ಷಿಕೋತ್ಸವವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಾವು ಕಲಿತ ವಿದ್ಯೆಯ ಪ್ರದರ್ಶನ ಮಾಡಿದರು.

## ಸೇವಾ ಚಟುವಟಿಕೆಗಳು:

**ತಲಸ್ಸೆಮಿಯಾ ಆರೈಕೆ ಕೇಂದ್ರದಲ್ಲಿ ಯೋಗ ತರಗತಿಗಳು ಆರಂಭ:**

ತಲಸ್ಸೆಮಿಯಾ ಕೇಂದ್ರಕ್ಕೆ ಬರುವ ತಲಸ್ಸೆಮಿಯಾ ಕಾಯಿಲೆಯಿಂದ ಬಳಲುವ ಮಕ್ಕಳಿಗಾಗಿ ದೈಹಿಕ, ಮಾನಸಿಕ ಸ್ವಾಸ್ಥ್ಯ ವೃದ್ಧಿಸುವ ದೃಷ್ಟಿಯಿಂದ ಪ್ರತಿದಿನ ಯೋಗ ತರಗತಿಯನ್ನು ಪ್ರಾರಂಭಿಸಲಾಗಿದೆ.

**ರಕ್ತದಾನ ಶಿಬಿರ:**

- ಯೋಗ ಬಂಧುಗಳಲ್ಲಿ ಸಾಮಾಜಿಕ ಕಳಕಳಿ ಮೂಡಿಸುವ ಉದ್ದೇಶದಿಂದ ಕಳೆದ ಹಲವಾರು ವರ್ಷಗಳಿಂದ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- ಬೆಂಗಳೂರಿನಲ್ಲಿರುವ ಕೇಶವಶಿಲ್ಪ ಕೇಂದ್ರದಲ್ಲಿ 134, ಜಯನಗರ ಕೇಂದ್ರದಲ್ಲಿ 190, ಸದಾಶಿವನಗರ ಕೇಂದ್ರದಲ್ಲಿ 111, ಕುಂದಲಹಳ್ಳಿ ಕೇಂದ್ರದಲ್ಲಿ 171, ನಾಗರಭಾವಿ ಕೇಂದ್ರದಲ್ಲಿ 64, ಕಲ್ಯಾಣನಗರ ಕೇಂದ್ರದಲ್ಲಿ 31, ಕಾಮಾಕ್ಷಿಪಾಳ್ಯ ಕೇಂದ್ರದಲ್ಲಿ 84, ಗಾಯತ್ರೀನಗರ ಕೇಂದ್ರದಲ್ಲಿ 39 ರಕ್ತದಾನಿಗಳು ಸೇರಿ ಒಟ್ಟು 824 ಮಂದಿ ರಕ್ತದಾನವನ್ನು ಮಾಡಿದರು.

## ವರ್ಷದ ಸಾಧನೆ:

### ಹೊಸ ಯೋಗಕೇಂದ್ರ ಕಟ್ಟಡದ ಲೋಕಾರ್ಪಣೆ:

ಬೆಂಗಳೂರಿನ ವಿಜಯನಗರ ಹಾಗೂ ಆರ್.ಬಿ.ಐ. ಲೇಔಟ್‌ನಲ್ಲಿ ಯೋಗ, ನೃತ್ಯ–ಸಂಗೀತ, ಕರಾಟೆ ತರಗತಿಗಳನ್ನು ನಡೆಸಲು ಮೂರು ಅಂತಸ್ತಿನ ಕಟ್ಟಡವನ್ನು ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾ. ದಿನೇಶ್ ಹೆಗ್ಡೆಯವರು ಲೋಕಾರ್ಪಣೆ ಮಾಡಿದರು.

## ಉಲ್ಲೇಖನೀಯ ಸಂಗತಿಗಳು:

**ಕನ್ನಡ ಪುಸ್ತಕ ಹಬ್ಬದಲ್ಲಿ ನೃತ್ಯ–ಸಂಗೀತ ಕೇಂದ್ರದ ಅಭ್ಯಾಸಿಗಳಿಂದ ಪ್ರದರ್ಶನ:** ನವೆಂಬರ್ 1 ರಿಂದ ಕೇಶವಶಿಲ್ಪದಲ್ಲಿ ನಡೆದ ಕನ್ನಡ ಪುಸ್ತಕ ಹಬ್ಬ ಕಾರ್ಯಕ್ರಮದಲ್ಲಿ ಬೆಂಗಳೂರಿನಲ್ಲಿರುವ ರಾಷ್ಟ್ರೋತ್ಥಾನ ನೃತ್ಯ–ಸಂಗೀತ ಕೇಂದ್ರಗಳ ಆಯ್ದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು 11 ದಿನಗಳ ಕಾಲ ತಮ್ಮ ಕಲೆಗಳ (ಭರತನಾಟ್ಯ, ತಬಲಾ, ಸುಗಮಸಂಗೀತ, ಕರ್ನಾಟಕ ಸಂಗೀತ, ಕೊಳಲು, ಮೃದಂಗಮ್, ಕೀ ಬೋರ್ಡ್, ವೀಣೆ ಇತ್ಯಾದಿ) ಪ್ರದರ್ಶನವನ್ನು ಮಾಡಿದರು.

## ಮುಂದಿನ ಕಾರ್ಯವಿಸ್ತಾರ:

- ಮುಂಬರುವ ದಿನಗಳಲ್ಲಿ ಒಟ್ಟು 34 ಯೋಗಕೇಂದ್ರಗಳನ್ನು, 8 ಕರಾಟೆ ಕೇಂದ್ರಗಳನ್ನು, 3 ಫಿಟ್ನೆಸ್ ಸೆಂಟರ್, 8 ಸಾಂಸ್ಕೃತಿಕ ಕೇಂದ್ರ, 5 ಆಪ್ತಸಲಹಾ ಕೇಂದ್ರ ತೆರೆಯುವ ಗುರಿ ಹೊಂದಲಾಗಿದೆ.
- ಸದ್ಯ ಇರುವ ಮತ್ತು ಹೊಸದಾಗಿ ಬರುವ ಶಿಕ್ಷಕರಿಗೆ ಪಠ್ಯಕ್ರಮ ರಚನೆ ಮತ್ತು ತರಬೇತಿ ಅನುಸಾರ ಪ್ರಶಿಕ್ಷಣ ಹಾಗೂ ಪ್ರತಿ ವಾರ 2 ವಾರಕ್ಕೊಮ್ಮೆ ಕೇಂದ್ರಶಃ ಶಿಕ್ಷಕರಿಗೆ ಹಾಗೂ ವರ್ಷಕ್ಕೆ 2 ಪ್ರಶಿಕ್ಷಣ ವರ್ಗವನ್ನು ನಡೆಸುವ ಯೋಜನೆಯಿದೆ.
- ಸೀನಿಯರ್, ಜನರಲ್ ಪಠ್ಯಕ್ರಮ ರಚನೆ ಹಾಗೂ ತರಗತಿಯಲ್ಲಿ ಅಳವಡಿಸುವುದು.
- ಸಂಶೋಧನೆಯಲ್ಲಿ ಪಿಸಿಒಡಿ, ಒತ್ತಡ ನಿವಾರಣೆ, ಡಯಾಬಿಟೀಸ್ 5 ಕೇಂದ್ರ ತೆರೆಯುವುದು.

# ರಾಷ್ಟ್ರೋತ್ಥಾನ ರಕ್ತಕೇಂದ್ರ ಬೆಂಗಳೂರು

scan to watch video



ಬೆಂಗಳೂರಿನ ಕೆಂಪೇಗೌಡ ಮೆಟ್ರೋ ನಿಲ್ದಾಣದಲ್ಲಿ ರಕ್ತದಾನ ಶಿಬಿರ

- ಶ್ರೀಮತಿ ಸುಭದ್ರಾಬೆನ್ ಜಯಂತಿಲಾಲ್ ನಗರದಾಸ್‌ಶಾ (ಜೈನ್) ಇವರ ಪ್ರಾರಂಭಿಕ ಆರ್ಥಿಕ ಸಹಕಾರದೊಂದಿಗೆ 1993 ಮೇ 30ರಂದು ರಾಷ್ಟ್ರೋತ್ಥಾನದ ಹೆಮ್ಮೆಯ ಯೋಜನೆಯಾದ ರಕ್ತಕೇಂದ್ರವು ಸ್ಥಾಪನೆಗೊಂಡಿತು.
- ಉಪಯೋಗಿಸಿದ ವೈದ್ಯಕೀಯ ಉಪಕರಣಗಳನ್ನು ಅಗತ್ಯವಿರುವವರಿಗೆ ನೀಡುವ ಮೂಲಕ ಸಣ್ಣ ಪ್ರಮಾಣದಲ್ಲಿ 'ರುಗ್ಣ ಸೇವಾ ಭಂಡಾರ' ಎನ್ನುವ ಹೆಸರಿನಲ್ಲಿ ಆರಂಭವಾದ ಸಂಸ್ಥೆಯು ಇಂದು ರಾಜ್ಯದ ಹೆಮ್ಮೆಯ ರಕ್ತಕೇಂದ್ರವಾಗಿ ಬೆಳೆದುನಿಂತಿದೆ.

## ಉದ್ದೇಶ:

ರೋಗಿಗಳಿಗೆ ಅಗತ್ಯವಾದ ಸುರಕ್ಷಿತ ರಕ್ತವನ್ನು ಸಮಯಕ್ಕೆ ಸರಿಯಾಗಿ ನೀಡುವುದೇ ರಕ್ತಕೇಂದ್ರದ ಉದ್ದೇಶ. ಯಾವುದೇ ರೋಗಿ ರಕ್ತ ಸಿಗದೇ ಬರಿಗೈಯಲ್ಲಿ ಹಿಂದಿರುಗಬಾರದು ಎನ್ನುವ ಧ್ಯೇಯದೊಂದಿಗೆ ರಾಷ್ಟ್ರೋತ್ಥಾನ ರಕ್ತಕೇಂದ್ರವು ಕಾರ್ಯನಿರ್ವಹಿಸುತ್ತಿದೆ.

## ಕ್ರಮಿಸಿರುವ ಮೈಲುಗಲ್ಲುಗಳು:

- 1993 ಮೇ 30ರಿಂದ 2024ರ ಮಾರ್ಚ್ 30ರ ವರೆಗೆ ಒಟ್ಟು 5639 ಶಿಬಿರಗಳನ್ನು ನಡೆಸಲಾಗಿದೆ.
- ಆರಂಭದಿಂದ ಇಲ್ಲಿಯವರೆಗೆ 4,91,014 ಮಂದಿ ರಕ್ತದಾನ ಮಾಡಿದ್ದಾರೆ.
- 10,06,983 ಯೂನಿಟ್ ರಕ್ತ ಸಂಗ್ರಹಿಸಲಾಗಿದೆ.
- 9,74,282 ಯೂನಿಟ್ ರಕ್ತ ವಿತರಿಸಲಾಗಿದೆ.
- 3,71,848 ಮಂದಿಗೆ ರಕ್ತ ವಿತರಿಸಲಾಗಿದೆ.
- 2987 ಮಂದಿ ಎಸ್‌ಡಿಪಿ ದಾನಿಗಳಿದ್ದಾರೆ.

## ಸೇವಾ ಚಟುವಟಿಕೆಗಳು:

- ತಲಸ್ಸೆಮಿಯಾಗೆ ಯೋಜನೆಗೆ ಉಚಿತವಾಗಿ ಪೂರೈಸಿದ ರಕ್ತ – 9414 ಯೂನಿಟ್
- ಉಚಿತ ರಕ್ತ ವಿತರಣೆ – 469 ಯೂನಿಟ್
- ರಿಯಾಯಿತಿ ದರದಲ್ಲಿ ರಕ್ತ ವಿತರಣೆ – 368 ಯೂನಿಟ್

## ವರ್ಷದ ಸಾಧನೆ:

- 297 ಶಿಬಿರಗಳನ್ನು ಆಯೋಜಿಸಲಾಗಿದೆ.
- 21,830 ಮಂದಿ ರಕ್ತದಾನ ಮಾಡಿದ್ದಾರೆ.
- 51,583 ಯೂನಿಟ್ ರಕ್ತ ಸಂಗ್ರಹವಾಗಿದೆ.
- 51,402 ಯೂನಿಟ್ ರಕ್ತವನ್ನು ವಿತರಣೆ ಮಾಡಲಾಗಿದೆ.
- 16,252 ಫಲಾನುಭವಿಗಳಿದ್ದಾರೆ.

## ರಕ್ತಕೇಂದ್ರಕ್ಕೆ ಸಂದ ಪ್ರಶಸ್ತಿ–ಪುರಸ್ಕಾರಗಳು:

- 'ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ'ಯಿಂದ ಅನುಮೋದನೆ ಮತ್ತು ನೆರವು.
- ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 2011–12ನೇ ಸಾಲಿನ 'ಕರ್ನಾಟಕದ ಅತ್ಯುತ್ತಮ ರಕ್ತ ಬ್ಯಾಂಕ್' ಗೌರವ.
- ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಹಾಗೂ ಕರ್ನಾಟಕ ರಾಜ್ಯ ರಕ್ತ ಚಾಲನಾ ಪರಿಷತ್ ವತಿಯಿಂದ 2020–21ನೇ ಸಾಲಿನಲ್ಲಿ 'ಅತಿ ಹೆಚ್ಚು ರಕ್ತ ಸಂಗ್ರಹ' ಮಾಡಿದ್ದಕ್ಕಾಗಿ ಗೌರವ.









- ಎಸ್‌ಡಿಪಿ ದಾನಿಗಳು – 220



## ಉಲ್ಲೇಖನೀಯ ಸಂಗತಿಗಳು:

ಈ ವರ್ಷ ಆಯೋಜಿಸಿದ 297 ರಕ್ತದಾನ ಶಿಬಿರಗಳಲ್ಲಿ

- ಸ್ವಯಂ ಸೇವಾ ಸಂಸ್ಥೆಗಳು – 130
- ಸಾಫ್ಟ್‌ವೇರ್ ಕಂಪೆನಿಗಳು – 58
- ಇತರೇ ಕಂಪೆನಿಗಳು – 36
- ಶಿಕ್ಷಣ ಸಂಸ್ಥೆಗಳು – 60
- ಇತರೇ – 13



## ಮುಂದಿನ ಕಾರ್ಯವಿಸ್ತಾರ:

- ಮುಂದಿನ ಮೂರು ವರ್ಷಗಳಲ್ಲಿ ರಕ್ತದಾನ ಶಿಬಿರವನ್ನು 300ಕ್ಕೆ ಏರಿಸುವುದು
- ರಕ್ತದಾನಿಗಳ ಸಂಖ್ಯೆಯನ್ನು 25,000ಕ್ಕೆ ಏರಿಸುವುದು













## ಶಾ ದಾಮಜಿ ಜಾದವಜಿ ಭೇಡಾ ಮೆಮೋರಿಯಲ್

# ರಾಷ್ಟ್ರೋತ್ಥಾನ ರಕ್ತಕೇಂದ್ರ ಹುಬ್ಬಳ್ಳಿ

scan to watch video



ಜೂನ್ 14: ವಿಶ್ವ ರಕ್ತದಾನಿಗಳ ದಿನದಂದು ರಕ್ತದಾನ ಜಾಗೃತಿ ಜಾಥಾ

- ಹುಬ್ಬಳ್ಳಿಯಲ್ಲಿ ಕಟ್ಟಡ ದಾನಿಗಳಾದ ಶ್ರೀ ವಿರೇಂದ್ರ ಭೇಡಾ ಅವರು ತಮ್ಮ ತಂದೆಯವರ ಸ್ಮರಣಾರ್ಥ ರಕ್ತಕೇಂದ್ರಕ್ಕೆ ಉಚಿತ ಸ್ಥಳಾವಕಾಶ ಮಾಡಿಕೊಟ್ಟಿದ್ದರಿಂದ 'ಶಾ ದಾಮಜಿ ಜಾದವಜಿ ಭೇಡಾ ಮೆಮೊರಿಯಾಲ್ ರಾಷ್ಟ್ರೊತ್ಥಾನ ರಕ್ತಕೇಂದ್ರ' ಹೆಸರಿನಿಂದ 2010ರಲ್ಲಿ ರಕ್ತಕೇಂದ್ರ ಪ್ರಾರಂಭವಾಯಿತು.
- ಪ್ರಾರಂಭದಲ್ಲಿ ಹೋಲ್ ಬ್ಲಡ್ ಮಾತ್ರ ಇತ್ತು. 2017ರಲ್ಲಿ ಇನ್ಫೋಸಿಸ್ ಫೌಂಡೇಷನ್‌ನವರು ನೀಡಿದ ಸಹಾಯದಿಂದ ಸಂಪೂರ್ಣ ರಕ್ತದ ಕಾಂಪೊನೆಂಟ್‌ಗಳನ್ನು ಪ್ರಾರಂಭಿಸಲಾಯಿತು.
- ಮಹಾಮಾರಿ ಕೋವಿಡ್ ಸಮಯದಲ್ಲಿಯೂ ಇನ್ಫೋಸಿಸ್ ಫೌಂಡೇಷನ್‌ನವರು ಬೇಕಾಗುವ ಸಲಕರಣೆ ಮತ್ತು ಯಂತ್ರೋಪಕರಣಗಳ ಕೊಡುಗೆ ನೀಡಿದ್ದಾರೆ.
- ನಂತರದ ದಿನಗಳಲ್ಲಿ ಪುನಃ ಇನ್ಫೋಸಿಸ್ ಸಂಸ್ಥೆಯವರು ರಕ್ತದಾನಕ್ಕೆ ಸುಸಜ್ಜಿತ ಬಸ್ಸನ್ನು ಕೊಡುಗೆ ರೂಪದಲ್ಲಿ ನೀಡಿದರು.



## ಉದ್ದೇಶ:




ರಕ್ತಕೇಂದ್ರದ ಮುಖ್ಯ ಉದ್ದೇಶ ರಕ್ತ ಪಡೆಯುವ ಉದ್ದೇಶದಿಂದ ಬರುವ ರೋಗಿಗಳಿಗೆ ಸಾಧ್ಯವಾದಷ್ಟು ರಕ್ತವನ್ನು ಪೂರೈಸುವ ಪ್ರಯತ್ನ ಮಾಡುವುದು.

## ಕ್ರಮಿಸಿರುವ ಮೈಲುಗಲ್ಲುಗಳು:



- 2017ರಿಂದ ರಕ್ತದ ಎಲ್ಲ ಕಾಂಪೊನೆಂಟ್ಸ್ ಪ್ರತ್ಯೇಕಿಸುವ ಘಟಕ ಪ್ರಾರಂಭವಾಯಿತು.
- ಪ್ರಾರಂಭದಲ್ಲಿ ಬದಲಿ ರಕ್ತವನ್ನು ಪಡೆದು ರಕ್ತವನ್ನು ಪೂರೈಸಲಾಗುತ್ತಿತ್ತು. ಈಗ ಬದಲಿ ರಕ್ತವನ್ನು ಕೇಳದೇ ರಕ್ತವನ್ನು ಪೂರೈಸಲಾಗುತ್ತಿದೆ.



- ರಕ್ತದಾನ ಶಿಬಿರಗಳ ಮೂಲಕವೇ ಅಧಿಕ ರಕ್ತಸಂಗ್ರಹಣೆಗೆ ಒತ್ತು ನೀಡಲಾಗುತ್ತಿದೆ.
- ಆಗಸ್ಟ್–2023ರಿಂದ ಮೊಬೈಲ್ ಯೂನಿಟ್ ವಾಹನದ ಮೂಲಕ ರಕ್ತ ಸಂಗ್ರಹ ಮಾಡಲಾಗುತ್ತಿದೆ.




- ವಯೊವೃದ್ಧರು ಮತ್ತು ತುರ್ತುಚಿಕಿತ್ಸೆ ಮಾಡಿಸಿಕೊಂಡವರಿಗೆ ವ್ಹೀಲ್ ಚೇರ್‌ಗಳನ್ನು ಬಳಸಲು ಉಚಿತವಾಗಿ ನೀಡಲಾಗುತ್ತಿದೆ.
- ರೋಗಿಗಳ ಬಳಕೆಗೆ ಆಕ್ಸಿ ಕಾನ್ಸಂಟ್ರೇಟರ್‌ಗಳನ್ನು ಉಚಿತವಾಗಿ ನೀಡಲಾಗುತ್ತಿದೆ.





## ಕಾರ್ಯಕ್ರಮಗಳು:

- 14 ಜೂನ್ 2023ರಂದು 'ವಿಶ್ವರಕ್ತದಾನಿಗಳ ದಿನ'ದಂದು ರಕ್ತದಾನ ಜಾಗೃತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಎಲ್ಲ ಶಾಲೆ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು, ವಿವಿಧ ಆಸ್ಪತ್ರೆಯ ಸಿಬ್ಬಂದಿಗಳು, ಕಟ್ಟಡ ದಾನಿಗಳಾದ ಶ್ರೀ ವಿರೇಂದ್ರ ಥೇಡಾ, ಮತ್ತು ಡ್ಯಾಪ್ಕೊ ಅಧಿಕಾರಿಗಳು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.
- ಮನಗುಂಡಿಯ ಶ್ರೀ ಶ್ರೀ ಬಸವಾನಂದ ಸ್ವಾಮಿಗಳು ರಕ್ತಕೇಂದ್ರಕ್ಕೆ ಬಂದು 92ನೇ



ಬಾರಿ ರಕ್ತದಾನ ಮಾಡಿದರು. ಅವರಿಗೆ ರಕ್ತಕೇಂದ್ರದ ವತಿಯಿಂದ ಸನ್ಮಾನ ಮಾಡಲಾಯಿತು.



- ಹುಬ್ಬಳ್ಳಿಯ ಸೆಂಟ್ರಲ್ ಕ್ಷೇತ್ರದ ಶಾಸಕರಾದ ಶ್ರೀ ಮಹೇಶ ಟೆಂಗಿನಕಾಯಿ ಅವರ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು.
- 17–03–2024ರಂದು ಸಮಸ್ತ ಬ್ರಾಹ್ಮಣ ಸಮಾಜದ ವತಿಯಿಂದ ರಕ್ತದಾನ ಶಿಬಿರವನ್ನು ಆಯೋಜಿಸಲಾಯಿತು. ಅದರಲ್ಲಿ ರಕ್ತಕೇಂದ್ರದ ಆಡಳಿತಾಧಿಕಾರಿಗಳಾದ ಶ್ರೀ ದತ್ತಮೂರ್ತಿ ಕುಲಕರ್ಣಿ ಅವರು 68ನೇ ಬಾರಿ ರಕ್ತದಾನ ಮಾಡಿದರು.
- ಧಾರವಾಡದ ಅಕ್ಷಯ ಪಾತ್ರದಲ್ಲಿನ ಸಿಬ್ಬಂದಿಗಳಿಗೆ ಮೊದಲ ಬಾರಿಗೆ ರಕ್ತದಾನದ ಜಾಗೃತಿ ಮೂಡಿಸಿ ರಕ್ತದಾನ ಮಾಡಲಾಯಿತು.
- 'ರಾವಣ' ಹೆಸರಿನ ಟಗರು ಹುಟ್ಟುಹಬ್ಬದ ಅಂಗವಾಗಿ ಹುಬ್ಬಳ್ಳಿಯ ನಾಗಶೆಟ್ಟಿಕೊಪ್ಪದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. 40 ಜನರು ರಕ್ತದಾನ ಮಾಡಿದರು.
- ಮೊದಲ ಬಾರಿಗೆ ಹುಬ್ಬಳ್ಳಿಯ ಬಂಕಾಪೂರ ಚೌಕ್ ದರ್ಗಾದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಯಿತು.

## ವರ್ಷಾವಧಿ ಕಾರ್ಯಕಲಾಪಗಳು:

- ಆಗಸ್ಟ್–2023ರಿಂದ ಮೊಬೈಲ್ ಯೂನಿಟ್ ವಾಹನದ ಮೂಲಕವೂ ರಕ್ತ ಸಂಗ್ರಹ ಮಾಡಲಾಗುತ್ತಿದೆ.
- ಪ್ರತಿ ನಿತ್ಯ ಜನಸಂದಣಿ ಇರುವ ಪ್ರದೇಶಗಳಲ್ಲಿ ಮೊಬೈಲ್ ಯೂನಿಟ್ ವಾಹನದ ಮೂಲಕ ರಕ್ತವನ್ನು ಸಂಗ್ರಹಿಸಲಾಗುತ್ತಿದೆ. ಆಗಸ್ಟ್–2023ರಿಂದ ಮಾರ್ಚ್–2024ರ ವರೆಗೆ 1179 ಜನರಿಂದ ರಕ್ತವನ್ನು ಸಂಗ್ರಹಿಸಲಾಗಿದೆ. ಸಾರ್ವಜನಿಕರಿಂದ ಒಳ್ಳೆಯ ಪ್ರತಿಕ್ರಿಯೆ ದೊರಕಿದೆ.

## ಸೇವಾ ಚಟುವಟಿಕೆಗಳು:

- ಆಕ್ಸಿ ಕಾನ್ಸಂಟ್ರೇಟರ್‌ಗಳನ್ನು ಅಗತ್ಯವಿರುವ ರೋಗಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ.
- ನಡೆಯಲಾಗದವರಿಗೆ ಮತ್ತು ಸರ್ಜರಿ ಆದಂತಹ ರೋಗಿಗಳಿಗೆ ಉಪಯೋಗಿಸಲು ವ್ಹೀಲ್ ಚೇರ್‌ಗಳನ್ನು ಉಚಿತವಾಗಿ ನೀಡಲಾಗುತ್ತಿದೆ.
- ರಕ್ತವನ್ನು ಕಡುಬಡವರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.

## ವರ್ಷದ ಸಾಧನೆ:

- 140 ರಕ್ತದಾನ ಶಿಬಿರಗಳಿಂದ ಮತ್ತು ರಕ್ತಕೇಂದ್ರದಲ್ಲಿ ಸೇರಿದಂತೆ 8145 ಜನರಿಂದ ರಕ್ತ ಸಂಗ್ರಹ
- 8145 ಜನರಿಂದ ಸಂಗ್ರಹಿಸಿದ ರಕ್ತದಿಂದ 17,427 ಕಾಂಪೊನೆಂಟ್ಸ್‌ಗಳನ್ನು ಸಿದ್ಧಪಡಿಸಿ 8335 ಜನ ರೋಗಿಗಳಿಗೆ 17,089 ಕಾಂಪೊನೆಂಟ್ಸ್‌ಗಳನ್ನು ವಿತರಿಸಲಾಯಿತು.
- ಮೊಬೈಲ್ ಯೂನಿಟ್ ಬಸ್‌ನಲ್ಲಿ ನಗರದ ಪ್ರಮುಖ ದೇವಸ್ಥಾನ, ಕಾಲೇಜು ಮತ್ತು ಜನರು ಹೆಚ್ಚು ಓಡಾಡುವ ಪ್ರಮುಖ ಸ್ಥಳಗಳಲ್ಲಿ ರಕ್ತವನ್ನು ಸಂಗ್ರಹಿಸಲಾಗುತ್ತದೆ.
- 8145 ರಕ್ತದಾನಿಗಳಿಂದ ರಕ್ತ ಸಂಗ್ರಹ ಮಾಡಲಾಯಿತು.

## ಮುಂದಿನ ಕಾರ್ಯವಿಸ್ತಾರ:

- ಈ ವರ್ಷದಲ್ಲಿ 12,000 ರಕ್ತದಾನಿಗಳಿಂದ ರಕ್ತ ಸಂಗ್ರಹಿಸುವುದು.
- ಆಸ್ಪತ್ರೆಯಿಂದ ರಕ್ತದ ಸ್ಯಾಂಪಲ್ ಮತ್ತು ಲೆಟರನ್ನು ತಂದು ಅವರಿಗೆ ಅಗತ್ಯ ರಕ್ತದ ಕಾಂಪೊನೆಂಟನ್ನು ಪುನಃ ಆಸ್ಪತ್ರೆಗೆ ತಲಪಿಸುವ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ.
- ಮುಂದಿನ ಮೂರು ವರ್ಷಗಳಲ್ಲಿ 180 ರಕ್ತದಾನ ಶಿಬಿರಗಳನ್ನು ಆಯೋಜಿಸುವ ಹಾಗೂ 10,000 ರಕ್ತದಾನಿಗಳನ್ನು ತಲಪುವ ಯೋಜನೆ ಹಾಕಿಕೊಳ್ಳಲಾಗಿದೆ.

# ಸಂರಕ್ಷಾ
# ತಲಸ್ಸೆಮಿಯಾ ಆರೈಕೆ ಕೇಂದ್ರ

scan to watch video



ಮೇ 8: ಸಂರಕ್ಷಾ ಕೇಂದ್ರದಲ್ಲಿ ತಲಸ್ಸೆಮಿಯಾ ದಿನಚಾರಣೆ

ತಲಸ್ಸೆಮಿಯಾ ರೋಗಪೀಡಿತ ಮಕ್ಕಳ ಆರೈಕೆಗಾಗಿ ರಾಷ್ಟ್ರೋತ್ಥಾನ ಪರಿಷತ್ ರೂಪಿಸಿದ ಯೋಜನೆಯೇ 'ಸಂರಕ್ಷಾ' ಆರೈಕಾ ಕೇಂದ್ರ.




## ಉದ್ದೇಶ:

- ದೇಹದಲ್ಲಿ ಹಿಮೋಗ್ಲೋಬಿನ್‌ಯುಕ್ತ ರಕ್ತಕಣಗಳು ಉತ್ಪತಿಯಾಗದಿರುವ ನ್ಯೂನತೆಯೇ ತಲಸ್ಸೆಮಿಯಾ.
- ಮಕ್ಕಳನ್ನು ಪೀಡಿಸುವ ಈ ಕಾಯಿಲೆಗೆ ನಿರಂತರ ರಕ್ತವನ್ನು ಪೂರಣ ಮಾಡುತ್ತಿರಬೇಕು. ಇದು ಆರ್ಥಿಕವಾಗಿ





ಪಾಲಕರಿಗೆ ಹೊರೆಯಾಗಬಹುದು. ಇಂತವರ ಆರೈಕೆಗಾಗಿಯೇ 'ಸಂರಕ್ಷಾ' ಸ್ಥಾಪನೆಯಾಗಿದೆ.

- ಈ ಯೋಜನೆಯಡಿ ತಲಸ್ಸೆಮಿಯಾ ಪೀಡಿತ ಮಕ್ಕಳಿಗೆ ರಾಷ್ಟ್ರೋತ್ಥಾನ ರಕ್ತಕೇಂದ್ರವು ರಕ್ತವನ್ನು ಉಚಿತವಾಗಿ ಪೂರಣ ಮಾಡುತ್ತದೆ.





## ಕ್ರಮಿಸಿರುವ ಮೈಲುಗಲ್ಲುಗಳು:

- ಹೊಸದಾಗಿ ಸೇರ್ಪಡೆಯಾದ 14 ಮಕ್ಕಳು ಸೇರಿ ಒಟ್ಟು 416 ಮಕ್ಕಳು ಸಂರಕ್ಷಾದಲ್ಲಿ ಆರೈಕೆ ಪಡೆಯುತ್ತಿದ್ದಾರೆ.
- ಮಕ್ಕಳಿಗೆ ಒಟ್ಟು 9414 ಯೂನಿಟ್ ರಕ್ತವನ್ನು ಇದುವರೆಗೆ ಪೂರಣ ಮಾಡಲಾಗಿದೆ.

## ಮುಂದಿನ ಕಾರ್ಯವಿಸ್ತಾರ:

- ರಕ್ತಪೂರಣದ ಬದಲಿಗೆ ಪರ್ಯಾಯ ವಿಧಾನದ ಬಗ್ಗೆ ಚಿಂತನೆ

# ಅಗ್ನಿವೇಶ ಆಯುರ್ವೇದ ಅನುಷ್ಠಾನ




ಆಯುರ್ವೇದ ವೈದ್ಯರು ಆಯುರ್ವೇದ ಚಿಕಿತ್ಸೆ ನೀಡಲು ಮುಂದಾಗುವಂತೆ ಪ್ರೇರಿಪಿಸಲು ಸುಮಾರು 30 ವರ್ಷಗಳ ಹಿಂದೆ ರಾಷ್ಟ್ರೋತ್ಥಾನವು ಪ್ರಾರಂಭಿಸಿದ ಆಯುರ್ವೇದ ವೈದ್ಯರುಗಳ ಸಂಘಟನೆ.

1. 27.04.2023ರಂದು ಸಿ.ಎ.ಎಂ.ಸಿ: ಡಾ. ಅನಂತರಾಮನ್ ಎನ್. ಇವರು ಆಯುರ್ವೇದ ಕ್ಲಿನಿಕಲ್ ಪ್ರಾಕ್ಟಿಸ್‌ನಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಸುಮಾರು 70 ವೈದ್ಯರುಗಳು ಈ ಸಿ.ಎ.ಎಂ.ಸಿ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

2. 21.05.2023 ಭಾನುವಾರದಂದು ಕನ್ಯಾಕುಮಾರಿಯ ಶಾರದಾ ಹಾಸ್ಪಿಟಲ್‌ನ ಮೆಡಿಕಲ್ ಡೈರೆಕ್ಟರ್ ಡಾ. ಮಹಾದೇವನ್ ಎಲ್. ಅವರು ಮಾತನಾಡಿದರು. 106 ವೈದ್ಯರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

3. 25.06.2023 ಚರಕ ಜಯಂತಿಯನ್ನು ಆಚರಿಸಲಾಯಿತು. ಡಾ. ಗೌತಮ್ ಕುಮಾರ್ (ಎಂ.ಡಿ. ಆಯುರ್ವೇದ) ಅವರು ಮಾತನಾಡಿದರು. ಸುಮಾರು 80 ವೈದ್ಯರುಗಳು ಈ ಸಿ.ಎ.ಎಂ.ಸಿ. ಕಾರ್ಯಕ್ರಮದಲ್ಲಿ ಭಾಗವಹಿಸಿದರು.

4. 27.07.2023ರಂದು ಮೈಸೂರಿನ ಜೆ.ಎಸ್.ಎಸ್. ಕಾಲೇಜ ಆಫ್ ಆಯುರ್ವೇದದ ಕಾಯಚಿಕಿತ್ಸೆಯ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಡಾ.




ಬೀನಾ (ಎಂ.ಡಿ. ಆಯುರ್ವೇದ) ಅವರು 'ಕ್ಯಾನ್ಸರ್‌ನಲ್ಲಿ ಪಲ್ಲಿಯೇಟಿವ್ ಕೇರ್ ತಡೆಯಲ್ಲಿ ಆಯುರ್ವೇದದ ಪಾತ್ರ'ದ ಕುರಿತಾಗಿ ಮಾತನಾಡಿದರು. ಸುಮಾರು 80 ವೈದ್ಯರುಗಳು ಇದರಲ್ಲಿ ಭಾಗವಹಿಸಿದರು.




5. 17.08.2023ರಂದು ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಸತ್ಯನಾರಾಯಣ ಭಟ್ ಅವರು ವಿಷಮ ರೋಗದಲ್ಲಿನ (ಕ್ರಿಟಿಕಲ್ ಡಿಸೀಸ್) ಕ್ಲಿನಿಕಲ್ ಪ್ರಾಕ್ಟೀಸ್‌ನಲ್ಲಿ 'ಏಕಮೂಲಿಕಾ ಪ್ರಯೋಗ' ಇದರ ಕುರಿತು ಮಾತನಾಡಿದರು. ಈ ಸಿ.ಎ.ಎಂ.ಸಿ. ಕಾರ್ಯಕ್ರಮದಲ್ಲಿ 82 ವೈದ್ಯರುಗಳು ಭಾಗವಹಿಸಿದ್ದರು.
6. 24.09.2023ರಂದು 'ಆಯುರ್ವೇದದ ಮೂಲಕ ನೇತ್ರರೋಗ ನಿರ್ವಹಣೆ; ಒಂದು ಸಮಗ್ರ ಮಾರ್ಗ' ಈ ವಿಷಯದ ಮೇಲೆ ಡಾ. ಶ್ರೀಕಾಂತ ಪಿ. ನಂಬೂದರಿ, ಎಂ.ಎಸ್. (ಆಯುರ್ವೇದ) ಪಿಎಚ್.ಡಿ. (ಶಲಕ್ಯಾ), ಚೀಫ್ ಮೆಡಿಕಲ್ ಆಫೀಸರ್ ಮತ್ತು ಡೈರೆಕ್ಟರ್ ಡಾ. ಅಂಜಲಿ ಎಂ.ವಿ. ಎಂ.ಡಿ. (ಆಯುರ್ವೇದ) ಎಂ.ಆರ್.ಎ.ಪಿಎಚ್.ಡಿ., ಸೀನಿಯರ್ ಮೆಡಿಕಲ್ ಆಫಿಸರ್, ಶ್ರೀಧರೀಯಂ ಆಯುರ್ವೇದ ಐ ಹಾಸ್ಪಿಟಲ್ & ರಿಸರ್ಚ್ ಸೆಂಟರ್, ಎರ್ನಾಕುಲಂ ಇವರುಗಳು ಮಾತನಾಡಿದರು.





7. 26.10.20203 ರಂದು 'ಡರ್ಮಟಾಲಜಿ ಇನ್ ನಟ್‌ಶೆಲ್ ವಿತ್ ಸ್ಪೆಶಲ್ ರೆಫರೆನ್ಸ್ ಟು ಸೋರಿಯಾಸಿಸ್' ಎಂಬ ವಿಷಯದ ಮೇಲೆ ಡಾ. ಶ್ರೀಪ್ರಸಾದ್ ಎಚ್. ಎಸ್. (ಬಿ.ಎ.ಎಮ್.ಎಸ್, ಅಗ್ನಿವೇಶ ಸದಸ್ಯರು) ಇವರು ಮಾತನಾಡಿದರು. ಸಿ.ಎ.ಎಂ.ಸಿ. ಕಾರ್ಯಕ್ರಮದಲ್ಲಿ 45 ವೈದ್ಯರು ಭಾಗವಹಿಸಿದ್ದರು.



8. 30.11.2023ರಂದು 'ವಾತ ವ್ಯಾಧಿಯಲ್ಲಿ ಬಸ್ತಿ ಚಿಕಿತ್ಸೆ' ಎಂಬ ವಿಷಯದ ಮೇಲೆ ಡಾ. ರಂಜನಿ ಕಾರ್ತಿಕ್, ಎಂ.ಡಿ. (ಆಯುರ್ವೇದ), ಡೈರೆಕ್ಟರ್ ಎಸ್. ಎನ್. ಫಾರ್ಮಾ ಮೈಸೂರು, ಇವರು ಮಾತನಾಡಿದರು. 84 ವೈದ್ಯರುಗಳು ಸಿ.ಎ.ಎಂ.ಸಿ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




9. 17.12.2023ರಂದು ಧನ್ವಂತರಿ ಜಯಂತಿ ಮತ್ತು ರಾಜ್ಯಮಟ್ಟದ ಸೆಮಿನಾರ್ ನಡೆಯಿತು. 'ಮಾಂಸವಹ ಸ್ರೋತಾಸ್ ಮತ್ತು ಅದರ ರೋಗಗಳು ಮತ್ತು ಚಿಕಿತ್ಸೆ' ಎಂಬ ವಿಷಯದ ಮೇಲೆ ಚರ್ಚಿಸಲಾಯಿತು.

10. 25.01.2024ರಂದು ಡಾ. ಸುರೇಶ್ ಕುಮಾರ್ ಕೆ, ಮೈಸೂರು, ಇವರು ತಮ್ಮ 30 ವರ್ಷಗಳ ಆಯುರ್ವೇದ ಚಿಕಿತ್ಸೆಯ ಅನುಭವಗಳನ್ನು ಹಂಚಿಕೊಂಡರು. ಸುಮಾರು 45 ವೈದ್ಯರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

11. 29.02.2024ರಂದು ಡಾ. ರಾಘವೇಂದ್ರ ಎನ್, ರಾಘವ ಆಯುರ್ವೇದಿಕ್ ಕೇಂದ್ರ, ಸರಸ್ವತಿಪುರಂ, ಬೆಂಗಳೂರು, ಇವರು 'ವಾತ ವ್ಯಾಧಿಯಲ್ಲಿನ ಚಿಕಿತ್ಸೆಯ ಅನುಭವ'ಗಳನ್ನು ಹಂಚಿಕೊಂಡರು. ಸುಮಾರು 63 ವೈದ್ಯರುಗಳು ಈ ಸಿ.ಎ.ಎಂ.ಸಿ.ಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

12. 28.03.20204ರಂದು ಡಾ. ನಾಗರಾಜ್ ಟಿ.ಎನ್, ಮೈಸೂರು, ನಿವೃತ್ತ ಪ್ರೊಫೆಸರ್; ಇವರು 'ಆಯುರ್ವೇದ ಜನರಲ್ ಪ್ರಾಕ್ಟೀಸ್‌ನಲ್ಲಿ ರಸೌಷಧಿಯ ಪರಿಣಾಮಗಳು' ಎಂಬ ವಿಷಯದ ಮೇಲೆ ಮಾತನಾಡಿದರು. ಸುಮಾರು 60 ವೈದ್ಯರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸ್ವಾಸ್ಥ್ಯಭಾರತೀ




- ಸ್ವಸ್ಥ ಸಮಾಜದ ನಿರ್ಮಾಣದ ಧ್ಯೇಯದೊಂದಿಗೆ 2021ರಲ್ಲಿ ಸ್ವಾಸ್ಥ್ಯಭಾರತೀ ಆರಂಭಗೊಂಡಿತು.
- ವ್ಯಕ್ತಿಯೊಬ್ಬ ತಾನು ಸಂತೋಷವಾಗಿದ್ದು ಬೇರೆಯವರನ್ನೂ ಸಂತೋಷದಿಂದ ಇರಿಸಬೇಕು; ಅದೇ ಅವನ ಜೀವನದ ಉದ್ದೇಶವೂ ಹೌದು. ಸ್ವಾಸ್ಥ್ಯ ಎಂದರೆ ರೋಗ ಇಲ್ಲದಿರುವುದಲ್ಲ.
- ವ್ಯಕ್ತಿಯ ದೈಹಿಕ, ಭಾವನಾತ್ಮಕ, ಬೌದ್ಧಿಕ, ಆಧ್ಯಾತ್ಮಿಕ ಪ್ರಕ್ರಿಯೆಗಳು ಸಹಜವಾಗಿ ನಡೆಯುತ್ತಿರಬೇಕು. ಉತ್ತಮ ನಿದ್ರೆ, ಕಾಲಕಾಲಕ್ಕೆ ಹಸಿವು, ಸರಿಯಾದ ವಿಸರ್ಜನಾಕ್ರಿಯೆ, ಪ್ರಸನ್ನತೆ, ಕೃತಜ್ಞತೆ, ಕಾಳಜಿ, ಪ್ರೀತಿ ಇವೆಲ್ಲವೂ ವ್ಯಕ್ತಿಯ ಸ್ವಾಸ್ಥ್ಯದ ಮಟ್ಟವನ್ನು ಗುರುತಿಸುವ ಮಾಪನಗಳೆನ್ನಬಹುದು.
- ಇಂತಹ ವ್ಯಕ್ತಿಗಳು ಸಮಾಜದಲ್ಲಿ ಹೆಚ್ಚುಹೆಚ್ಚು ಕಂಡುಬಂದಾಗ ಆ ಸಮಾಜವನ್ನು ಸ್ವಸ್ಥ ಸಮಾಜವೆನ್ನಬಹುದು. ಸ್ವಾಸ್ಥ್ಯಭಾರತಿಯು ಈ ಉದ್ದೇಶವನ್ನಿಟ್ಟುಕೊಂಡು ಆರಂಭಗೊಂಡಿದೆ.



## ಉದ್ದೇಶ:

- ಸ್ವಸ್ಥಜೀವನಶೈಲಿಯನ್ನು ರೂಢಿಸಿಕೊಂಡಾಗ ಸ್ವಸ್ಥಸಮಾಜ ನಿರ್ಮಾಣವಾಗುತ್ತದೆ. ಜೀವನಶೈಲಿಯು ಆಹಾರಕ್ರಮ, ನಿದ್ದೆ, ದೈಹಿಕ ಚಟುವಟಿಕೆ, ನಾವು ಬಳಸುವ ದಿನನಿತ್ಯದ ವಸ್ತುಗಳು, ಭಾವನೆಗಳು, ವೃತ್ತಿ, ಹವ್ಯಾಸ, ಚಿಂತನಾಕ್ರಮ, ಆಧ್ಯಾತ್ಮಿಕ ಆಚರಣೆ, ಚಿಂತನೆ ಇವೆಲ್ಲವನ್ನೂ ಒಳಗೊಂಡಿರುತ್ತದೆ.
- ಇವುಗಳಲ್ಲಿ ನಾವು ತಪ್ಪಿದ್ದಲ್ಲಿ ಎಂದು ಹುಡುಕಿ ಸರಿಪಡಿಸಿಕೊಂಡರೆ ರೋಗಗಳನ್ನು ತಡೆಗಟ್ಟಬಹುದು, ಗುಣಪಡಿಸಿಕೊಳ್ಳಬಹುದು, ಜೀವನಗುಣಮಟ್ಟವನ್ನೂ ಹೆಚ್ಚಿಸಿಕೊಳ್ಳಬಹುದು.
- ಈ ಉದ್ದೇಶದೊಂದಿಗೆ ಸ್ವಾಸ್ಥ್ಯಭಾರತಿಯು ಸಮಾಜದ ಎಲ್ಲ ಸ್ತರದ ಜನರಲ್ಲಿ ಸ್ವಾಸ್ಥ್ಯದ ಬಗ್ಗೆ ಅರಿವು ಮೂಡಿಸುವ ಯೋಜನೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

## ಕಾರ್ಯಕ್ರಮಗಳು:

- ಉಪನ್ಯಾಸಗಳು: ರಾಷ್ಟ್ರೋತ್ಥಾನ ಸಂಸ್ಥೆಯ ಪರಿವಾರ ಸಂಸ್ಥೆಗಳಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ಉತ್ತಮ ಜೀವನಶೈಲಿಯ ಕುರಿತು 28 ಉಪನ್ಯಾಸಗಳನ್ನು ಆಯೋಜಿಸಲಾಗಿದೆ.

| ಕ್ರಸಂ | ದಿನಾಂಕ | ವಿಷಯ | ಆಯೋಜನೆ | ಫಲಾನುಭವಿಗಳು |
|---|---|---|---|---|
| 1 | 2023 ಏಪ್ರಿಲ್ 23 | Importence of Desi Gou in our life | ಯೋಗ ವಿಭಾಗ | ಬೇಸಿಗೆ ಶಿಬಿರ ಕೇಶವಶಿಲ್ಪ |
| 2 | 2023 ಏಪ್ರಿಲ್ 23 | What is healthy lifestyle? | ಯೋಗ ವಿಭಾಗ | ಬೇಸಿಗೆ ಶಿಬಿರ ಜಯನಗರ |

| ಕ್ರಸಂ | ದಿನಾಂಕ | ವಿಷಯ | ಆಯೋಜನೆ | ಫಲಾನುಭವಿಗಳು |
|---|---|---|---|---|
| 3 | 2023 ಮೇ 17 | ಜೀವನಶೈಲಿಯ ಮಹತ್ತ್ವ | ರಾಜ್ಯ ಪಠ್ಯಕ್ರಮದ ಶಾಲೆಗಳು | ಶಿಕ್ಷಕರು |
| 4 | 2023 ಜುಲೈ 22 | ಜೀವನಶೈಲಿಯ ಮಹತ್ತ್ವ | ರಾ. ವಿದ್ಯಾಕೇಂದ್ರ ಥಣಿಸಂದ್ರ | ಶಿಕ್ಷಕರು |
| 5 | 2023 ಸಪ್ಟಂಬರ್ 02 | ದಿನಚರ್ಯ ಋತುಚರ್ಯ | ರಾ. ವಿದ್ಯಾಕೇಂದ್ರ ಥಣಿಸಂದ್ರ | ಶಿಕ್ಷಕರು |
| 6 | 2023 ಸಪ್ಟಂಬರ್ 23 | ಆಹಾರ | ರಾ. ವಿದ್ಯಾಕೇಂದ್ರ ಥಣಿಸಂದ್ರ | ಶಿಕ್ಷಕರು |
| 7 | 2023 ಅಕ್ಟೋಬರ್ 23 | ಜೀವನಶೈಲಿಯ ಮೂಲಭೂತ ಅಂಶಗಳು ಗುಣಧರ್ಮ ಮತ್ತು ವೈಯಕ್ತಿಕ ಸಂಬಂಧಗಳ ನಿರ್ವಹಣೆ | ರಾ. ರಕ್ತಕೇಂದ್ರ | ಸಿಬ್ಬಂದಿ |
| 8 | 2023 ಅಕ್ಟೋಬರ್ 27 | ಉತ್ತಮ ಜೀವನಶೈಲಿಯ ಮಹತ್ತ್ವ | CBSE School TOP | ಶಿಕ್ಷಕರು |
| 9 | 2023 ಅಕ್ಟೋಬರ್ 27 | ಉತ್ತಮ ಜೀವನಶೈಲಿಯ ಮಹತ್ತ್ವ | CBSE School TOP | ಶಿಕ್ಷಕರು |
| 10 | 2023 ಅಕ್ಟೋಬರ್ 28 | ಉತ್ತಮ ಜೀವನಶೈಲಿಯ ಮಹತ್ತ್ವ | CBSE School TOP | ಶಿಕ್ಷಕರು |
| 11 | 2023 ಅಕ್ಟೋಬರ್ 28 | ಉತ್ತಮ ಜೀವನಶೈಲಿಯ ಮಹತ್ತ್ವ | CBSE School TOP | ಶಿಕ್ಷಕರು |
| 12 | 2023 ಡಿಸೆಂಬರ್ 23 | Session 4 - Ahaara, Vegadgarana | ರಾ. ವಿದ್ಯಾಕೇಂದ್ರ ಥಣಿಸಂದ್ರ | ಶಿಕ್ಷಕರು |
| 13 | 2024 ಫೆಬ್ರವರಿ 27 | Menstrual hygeine | ಜಯನಗರ ಎಬಿವಿಪಿ | ಸೇವಾವಸತಿ ನಿವಾಸಿಗಳು |
| 14 | 2024 ಫೆಬ್ರವರಿ 29 | Importance of Healthy Lifestyle | ಪ್ರಶಿಕ್ಷಣಭಾರತೀ | ಸರ್ಕಾರಿ ಶಾಲಾ ಶಿಕ್ಷಕರು |
| 15 | 2024 ಮಾರ್ಚ್ 23 | ಋತುಚಕ್ರ, ಮಾನಸಿಕ ಸ್ವಾಸ್ಥ್ಯ | ರಾ. ವಿದ್ಯಾಕೇಂದ್ರ ಥಣಿಸಂದ್ರ | ಶಿಕ್ಷಕರು |
| 16 | 2023 ಆಗಸ್ಟ್ 08 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಗಜೇಂದ್ರನಗರ ನಿವಾಸಿಗಳು |
| 17 | 2023 ಆಗಸ್ಟ್ 10 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಜನತಾಕಾಲೊನಿ ನಿವಾಸಿಗಳು |

| ಕ್ರಸಂ | ದಿನಾಂಕ | ವಿಷಯ | ಆಯೋಜನೆ | ಫಲಾನುಭವಿಗಳು |
|---|---|---|---|---|
| 18 | 2023 ಆಗಸ್ಟ್ 17 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ವಿ.ವಿ. ಗಿರಿ ಕಾಲೊನಿ ನಿವಾಸಿಗಳು |
| 19 | 2023 ಆಗಸ್ಟ್ 22 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ದೊಡ್ಡಣ್ಣನಗರ ಇ ಬ್ಲಾಕ್ ನಿವಾಸಿಗಳು |
| 20 | 2023 ಆಗಸ್ಟ್ 24 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ನೇತಾಜಿ ನಗರ ನಿವಾಸಿಗಳು |
| 21 | 2023 ಆಗಸ್ಟ್ 31 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಹೊಂಬೇಗೌಡ ನಗರ ನಿವಾಸಿಗಳು |
| 22 | 2023 ಸಪ್ಟೆಂಬರ್ 07 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ವೆಂಕಟರಾಮ ನಗರ ನಿವಾಸಿಗಳು |
| 23 | 2023 ಸಪ್ಟೆಂಬರ್ 12 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಕುಂತಿಗ್ರಾಮ ನಿವಾಸಿಗಳು |
| 24 | 2023 ಸಪ್ಟೆಂಬರ್ 14 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಮಂಜುನಾಥ ನಗರ ನಿವಾಸಿಗಳು |
| 25 | 2023 ಸಪ್ಟೆಂಬರ್ 19 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಸುಧಾಮನಗರ ನಿವಾಸಿಗಳು |
| 26 | 2023 ಸಪ್ಟೆಂಬರ್ 25 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಅಂಬೇಡ್ಕರ್ ನಗರ ನಿವಾಸಿಗಳು |
| 27 | 2023 ಸಪ್ಟೆಂಬರ್ 28 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಟ್ಯೂಬ್ ಹಟ್ಸ್ ನಿವಾಸಿಗಳು |
| 28 | 2023 ಸಪ್ಟೆಂಬರ್ 04 | ಮಧುಮೇಹದಲ್ಲಿ ಜೀವನಕ್ರಮ | ಸೇವಾ ವಸತಿ | ಸತ್ಯನಗರ ನಿವಾಸಿಗಳು |

## ಸೇವಾ ಚಟುವಟಿಕೆಗಳು:

- ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಜೀವನಶೈಲಿ ಕ್ಲಿನಿಕನ್ನು ಪ್ರಾರಂಭಿಸಿ ಅಲ್ಲಿಗೆ ಬರುವ ಹೊರರೋಗಿಗಳಿಗೆ, ಒಳರೋಗಿಗಳಿಗೆ, ಆರೋಗ್ಯ ತಪಾಸಣೆಗೆ ಬರುವವರಿಗೆ ಜೀವನಶೈಲಿ ಸಲಹೆ ನೀಡಲಾಗುತ್ತಿದೆ.
- ಇದುವರೆಗೆ 1500ಕ್ಕೂ ಹೆಚ್ಚು ಜನರು ಈ ಮಾರ್ಗದರ್ಶನದ ಪ್ರಯೋಜನ ಪಡೆದಿದ್ದಾರೆ.
- ಜೊತೆಗೆ ಆಸ್ಪತ್ರೆಗೆ ಬರುವವರಿಗೆಲ್ಲರಿಗೂ ಜೀವನಕ್ರಮದ ಕುರಿತಾದ **'ಸ್ವಾಸ್ಥ್ಯ ಕೈಪಿಡಿ'**ಯನ್ನು ಉಚಿತವಾಗಿ ನೀಡಲಾಗುತ್ತಿದೆ.

## ವರ್ಷಾವಧಿ ಕಾರ್ಯಕಲಾಪಗಳು:

- **ಅಧ್ಯಯನ ಮತ್ತು ಮಾಹಿತಿ ಸಂಗ್ರಹ**: ಶಾಸ್ತ್ರೀಯ ಗ್ರಂಥಗಳು ಮತ್ತು ಸಂಶೋಧನಾ ಪ್ರಬಂಧಗಳ ನಿರಂತರ ಅಧ್ಯಯನ ಮತ್ತು ಲಭ್ಯವಿರುವ ಮಾಹಿತಿಗಳನ್ನು ಯೋಜನೆಯ ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವ ಪ್ರಕ್ರಿಯೆ ಎಂದಿನಂತೆ ನಡೆದಿದೆ.

## ಉಲ್ಲೇಖನೀಯ ಸಂಗತಿಗಳು:

- ಜೀವನಶೈಲಿಯ ಬದಲಾವಣೆಯಿಂದ ಹಲವರು ತಮ್ಮ ಆರೋಗ್ಯ ಸಮಸ್ಯೆಗಳಿಗೆ ಔಷಧಿರಹಿತವಾಗಿ ಪರಿಹಾರ ಕಂಡುಕೊಂಡಿದ್ದಾರೆ.
- ಮಧುಮೇಹದಲ್ಲಿ HbA1c 10 ರಿಂದ 7ಕ್ಕೆ ಇಳಿದಿರುವ ಉದಾಹರಣೆಗಳಿವೆ. ಮೂರಕ್ಕೂ ಹೆಚ್ಚು ವರ್ಷಗಳಿಂದ ನಿದ್ರಾಹೀನತೆಯಿಂದ ಬಳಲುತ್ತಿರುವವರು ಹದಿನೈದು ದಿನಗಳ ಜೀವನಶೈಲಿ ಬದಲಾವಣೆಯಿಂದ ಪ್ರತಿ ರಾತ್ರಿ ಸುಮಾರು 7 ಗಂಟೆ ಕಾಲ ಉತ್ತಮ ನಿದ್ರೆ ಹೊಂದುತ್ತಿರುವ ಉದಾಹರಣೆಗಳಿವೆ.
- ಸೇವಾವಸತಿಗಳಲ್ಲಿ ಮಧುಮೇಹಿಗಳಿಗೆ ನೀಡಿದ ಜೀವನಶೈಲಿ ಉಪನ್ಯಾಸಗಳಿಂದಾಗಿ ಹಲವರು ಜೀವನಶೈಲಿಯನ್ನು ಬದಲಾಯಿಸಿಕೊಂಡಿದ್ದು ಕೆಲವರಿಗೆ ಪ್ರಯೋಜನಗಳಾಗಿವೆ.

## ಮುಂದಿನ ಕಾರ್ಯವಿಸ್ತಾರ:

- ಹೆಣ್ಣುಮಕ್ಕಳಿಗೆ ಋತುಚಕ್ರದ ಕುರಿತು ಉಪನ್ಯಾಸ, ಸಂವಾದ ಮತ್ತು ಮಾರ್ಗದರ್ಶನದ ಜೊತೆಗೆ ಅವರು ಎದುರಿಸುತ್ತಿರುವ ಮುಟ್ಟಿನ ಸಮಸ್ಯೆಗಳನ್ನು ಪರಿಹರಿಸಲು ಜೀವನಶೈಲಿಯ ಮಾರ್ಗದರ್ಶನ ಮತ್ತು ಅದರ ಪರಿಣಾಮಗಳ ಅಧ್ಯಯನ ಮಾಡುವ ನಿಟ್ಟಿನಲ್ಲಿ ಕಾರ್ಯ ನಡೆಯುತ್ತಿದೆ.

- **ಶಾಲೆಗಳು:** ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅವರ ವಯೋಮಿತಿಗನುಗುಣವಾಗಿ ಉತ್ತಮ ಜೀವನಕ್ರಮದ ಅಭ್ಯಾಸಗಳನ್ನು ತಿಳಿಹೇಳುವ ಪಠ್ಯವನ್ನು ರಚಿಸುವುದರ ಜೊತೆಗೆ ಶಿಕ್ಷಕರಿಗೂ ಪೋಷಕರಿಗೂ ಜೀವನಕ್ರಮದ ಕುರಿತ ಮಾಹಿತಿಯನ್ನು ವ್ಯವಸ್ಥಿತವಾಗಿ ನೀಡುವ ನಿಟ್ಟಿನಲ್ಲಿ ಯೋಜನೆಯನ್ನು ರೂಪಿಸಲಾಗುತ್ತಿದೆ.
- ಆಸ್ಪತ್ರೆಯಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ಯಾಕೇಜ್‌ಗಳನ್ನು ತಯಾರಿಸುವ ಕುರಿತು ಮತ್ತು ಇತರ ಸಂಸ್ಥೆಗಳಲ್ಲಿ ಜೀವನಶೈಲಿಯ ಉಪನ್ಯಾಸಗಳು ಮತ್ತು ಕಾರ್ಯಾಗಾರಗಳನ್ನು ನಡೆಸುವ ಕುರಿತು ಚಿಂತನೆ ನಡೆದಿದೆ.
- ಉತ್ತಮ ಜೀವನಶೈಲಿಯ ಅನುಸರಣೆಯಿಂದಾಗುವ ಪರಿಣಾಮಗಳ ಅಧ್ಯಯನ ನಡೆಸಲಾಗುವುದು.

# ಮಾಧವ ಸೃಷ್ಟಿ

scan to watch video



- ಘಾಟಿಸುಬ್ರಹ್ಮಣ್ಯ ಕ್ಷೇತ್ರದ ಸಮೀಪ 110 ಎಕರೆ ಪ್ರದೇಶದಲ್ಲಿ ಗೋಶಾಲೆ ಮತ್ತು ಮಾಧವಸೃಷ್ಟಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ಇದು ರಾಷ್ಟ್ರೋತ್ಥಾನದ ಒಂದು ಕನಸಿನ ಯೋಜನೆಯಾಗಿದೆ.
- ಈ ಯೋಜನೆಯ ಪ್ರದೇಶ ಒಂಬತ್ತು ಬೆಟ್ಟಗಳಿಂದ ಕೂಡಿದ್ದು ಪ್ರತಿಯೊಂದು ಬೆಟ್ಟದಲ್ಲೂ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಸಾಂಪ್ರದಾಯಿಕ ವಿಧಾನಗಳ ಮೂಲಕ ಸಮಗ್ರ ಗ್ರಾಮೀಣಾಭಿವೃದ್ಧಿಯ ಕಲ್ಪನೆ ಇಲ್ಲಿ ಸಾಕಾರಗೊಂಡಿದೆ. ಇದನ್ನು 'ಮಾಧವಸೃಷ್ಟಿ' ಎಂದು ನಾಮಕರಣ ಮಾಡಲಾಗಿದೆ.

## ಉದ್ದೇಶ:

ಹಸುವನ್ನು ಕೇವಲ ಹಾಲಿನ ಮೂಲವೆಂದು ಪರಿಗಣಿಸಬಾರದು; ಇದು ರಾಷ್ಟ್ರೋತ್ಥಾನ ಗೋಶಾಲೆಯ ಮೂಲ ಉದ್ದೇಶ.



## ಚಟುವಟಿಕೆಗಳು:

- 2007ರಲ್ಲಿ ಆರಂಭಗೊಂಡ ‘ಮಾಧವಸೃಷ್ಟಿ’ಯಲ್ಲಿ ಗೋಶಾಲೆ ಪ್ರಮುಖ ಆಕರ್ಷಣೆ. ಗೋಪಾಲನೆಗೆ ಯೋಗ್ಯವಾದ ಈ ಪರಿಸರದಲ್ಲಿ ದೇಶೀತಳಿಗಳ ಸಂರಕ್ಷಣೆ, ಸಂವರ್ಧನೆ ಮತ್ತು ಸಂಶೋಧನೆ ಮಾಡಲಾಗುತ್ತಿದೆ.
- ಸದ್ಯ ಸುಮಾರು 600 ಗೋವುಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ.
- ಗೀರ್, ಸಾಹಿವಾಲ್, ಕಾಂಕ್ರೇಜ್, ಥಾರ್ ಪಾರ್ಕರ್, ದೇವನಿ, ಹಳ್ಳಿಕಾರ್, ಮಲೆನಾಡುಗಿಡ್ಡ, ಓಂಗೋಲ್, ಅಮೃತಮಹಲ್ ಹೀಗೆ 9 ಪ್ರಕಾರದ ಭಾರತೀಯ ಗೋತಳಿಗಳನ್ನು ಇಲ್ಲಿ ಸಂಗೋಪನೆ ಮಾಡಲಾಗುತ್ತಿದ್ದು ತಳಿ ಅಭಿವೃದ್ಧಿಗೆ ವಿಶೇಷ ಮಹತ್ತ್ವವನ್ನು ನೀಡಲಾಗುತ್ತಿದೆ.
- 3 ವಿಶೇಷ ತಳಿಗಳ ಸಂವರ್ಧನಾ ಕಾರ್ಯ ನಡೆಯುತ್ತಿದೆ.
- ಎತ್ತು, ಹೋರಿ, ದನ, ಕರು ಹೀಗೆ ಸುಮಾರು 700ಕ್ಕೂ ಅಧಿಕ ಜಾನುವಾರುಗಳಿಗೆ ಆಶ್ರಯ ನೀಡಲಾಗಿದೆ.





- ಅವುಗಳ ಆಹಾರಕ್ಕಾಗಿ ಸುಮಾರು 25 ಎಕರೆ ಪ್ರದೇಶದಲ್ಲಿ ಹುಲ್ಲುಗಳನ್ನು ಬೆಳೆಸಲಾಗುತ್ತಿದೆ.
- ಸುಮಾರು 60 ಜನ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸಲಾಗಿದೆ.
- ದೇಶದಲ್ಲಿ ಮಾದರಿ ಸ್ವಾವಲಂಬಿ ಗೋಶಾಲೆ ನಿರ್ಮಾಣ, ತಳಿ ಅಭಿವೃದ್ಧಿ, ಹೆಚ್ಚು ಹಾಲು ಕೊಡುವ ಭಾರತೀಯ ತಳಿಗಳ ಗೋವು, ಒಳ್ಳೆಯ ನಂದಿ ಮತ್ತು ಎತ್ತುಗಳ ಅಭಿವೃದ್ಧಿ, ಗೋವುಗಳು ಯಾವ ಬಗೆಯಲ್ಲಿ ಮಾನವ ಮತ್ತು ಪರಿಸರದ ರಕ್ಷಣೆಗೆ ಉಪಯೋಗ ಎಂಬುದರ ಪ್ರಾತ್ಯಕ್ಷಿಕೆ ಮತ್ತು ಮನೆಮನೆಗೂ ಗೋಮಾತೆ.
- **ವೃಂದಾವನ ಕೃಷಿ:** ಕೃಷಿಯಲ್ಲಿ ವಿಷಮುಕ್ತ ಮತ್ತು ಗೋಆಧಾರಿತ ಕೃಷಿಮಾದರಿ ನಿರ್ಮಾಣ ಹಾಗೂ ಅದರ ತರಬೇತಿಯನ್ನು ರೈತರಿಗೆ ಮತ್ತು ಆಸಕ್ತರಿಗೆ ನೀಡುವುದು. ಅಂತರ ಬೆಳೆ, ಬಹುಮಹಡಿ ಬೇಳೆ, ಔಷಧಿ ಸಸ್ಯಗಳು, ಇವುಗಳಿಂದ










ಆರ್ಥಿಕ ಅಭಿವೃದ್ಧಿಯನ್ನು ಹೇಗೆ ಸಾಧಿಸಬಹುದು ಎಂಬುದರ ಪ್ರಾತ್ಯಕ್ಷಿಕೆ ಮತ್ತು ತರಬೇತಿ.

- **ವೃಂದಾವನ ಕೃಷಿ ಅರಣ್ಯ:** ಕೃಷಿಕ್ಷೇತ್ರದಲ್ಲಿ ವಿಷಮುಕ್ತ ಪರಿಸರ ನಿರ್ಮಾಣ, ಭೂಮಿಯ ತಾಪಮಾನ ಕಡಿಮೆ ಮಾಡುವುದು, ಮಳೆನೀರು ಕೊಯ್ಲು, ಪಶು–ಪಕ್ಷಿ–ಮಾನವ ಉಳಿವಿಗಾಗಿ ಪಂಚಭೂತಗಳು ಹೇಗೆ ಇರಬೇಕು, ಅವುಗಳನ್ನು ನಾಶಗೊಳಿಸದೇ, ವಿಷಮುಕ್ತಗೊಳಿಸಿ ಯಾವ ರೀತಿ ಉಪಯೋಗ ಪಡೆದುಕೊಳ್ಳಬೇಕು, ಇವುಗಳ ಬಗ್ಗೆ ಸಮಾಜಕ್ಕೆ ಪ್ರಾತ್ಯಕ್ಷಿಕೆ ಮತ್ತು ತರಬೇತಿ ನೀಡುವುದು.

- **ಗವ್ಯೋತ್ಪನ್ನ:** ಮನೆಮನೆಗೆ ಗವ್ಯೋತ್ಪನ್ನ, ಆಹಾರ ಉತ್ಪನ್ನ ತಲಪಿಸುವುದು, ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವುದು, ಅವುಗಳ ಬಳಕೆಗೆ ಪ್ರೋತ್ಸಾಹ ನೀಡುವುದು, ಅವುಗಳ ತಯಾರಿಕೆ ಕುರಿತು ಮನೆಮನೆಗೆ ತರಬೇತಿ ನೀಡುವುದು, ವಿಷಮುಕ್ತ ಪರಿಸರಸ್ನೇಹಿ ನಿತ್ಯೋಪಯೋಗಿ ವಸ್ತುಗಳನ್ನು ಬಳಸುವಂತೆ ಮಾಡುವುದು.

## ಕ್ರಮಿಸಿರುವ ಮೈಲುಗಲ್ಲುಗಳು:

- ಸಗಣಿ ಮತ್ತು ಗೋಮೂತ್ರ ನಿತ್ಯವೂ ದೊರಕುವ ಉತ್ಪನ್ನಗಳಾಗಿದ್ದು, ಅವುಗಳ ಸಮಗ್ರ ಉಪಯೋಗದ ಬಗ್ಗೆ ಸಂಶೋಧನೆ ಮತ್ತು ಪ್ರಕೃತಿಪೂರಕ ಗವ್ಯ ಉತ್ಪನ್ನಗಳ ತಯಾರಿಕೆ ಹಾಗೂ ಅವುಗಳನ್ನು ಪ್ರತಿ ಮನೆಯಲ್ಲಿ ಬಳಸುವ ಉದ್ದೇಶದಿಂದ 'ಮಾಧವಸೃಷ್ಟಿ ಗವ್ಯೋತ್ಪನ್ನ ಘಟಕ'ಗಳನ್ನು ಪ್ರಾರಂಭಿಸಿ ಅದರ ಮೂಲಕ ರೈತರಿಗೆ ಮತ್ತು ಗೋಪಾಲಕರಿಗೆ ಹಾಗೂ ಗೋಶಾಲೆಗಳಿಗೆ ತರಬೇತಿ ನೀಡಲಾಗುತ್ತಿದೆ.




## ಕಾರ್ಯಕ್ರಮಗಳು:

- 19.09.2023ರಂದು ಗಣೇಶೋತ್ಸವವನ್ನು ಆಚರಿಸಲಾಯಿತು.
- 21.03.2023ರಂದು 'ಪ್ರಕೃತಿವಂದನ' ಕಾರ್ಯಕ್ರಮವನ್ನು ಆಚರಿಸಲಾಯಿತು.
- 05.03.2324ರಂದು ದಸರಾಹಬ್ಬವನ್ನು ಆಚರಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್‌ನ ಖಜಾಂಚಿಯರಾದ ಶ್ರೀ ನಾರಾಯಣಜೀ ಅವರು ಆಗಮಿಸಿದ್ದರು.
- 01.08.2023ರಂದು ಸತ್ಯನಾರಾಯಣ ಪೂಜೆಯನ್ನು ನೆರವೇರಿಸಲಾಯಿತು. ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಾ. ದಿನೇಶ್ ಹೆಗ್ಡೆ, ಖಜಾಂಚಿ ಶ್ರೀ ನಾರಾಯಣಜೀ ಹಾಗೂ ಮಾಧವಸೃಷ್ಟಿ ಪ್ರಕಲ್ಪದ ಪ್ರಮುಖರಾದ ರವಿಕುಮಾರ್‌ಜೀ ಅವರು ಉಪಸ್ಥಿತರಿದ್ದರು.
- 10.11.2023ರಂದು ಗೋಮಯದ ದೀಪಗಳನ್ನು ಬೆಳಗುವ ಮೂಲಕ ದೀಪಾವಳಿ ಹಬ್ಬವನ್ನು ಆಚರಿಸಲಾಯಿತು.







- 03.07.2023ರಂದು ಪ್ರತಿವರ್ಷದಂತೆ ಗುರುಪೂಜಾ ಉತ್ಸವವನ್ನು ಆಚರಿಸಲಾಯಿತು. ಸಂಘದ ಪ್ರಮುಖರು ಭಾಗವಹಿಸಿದ್ದರು.
- ಅಯೋಧ್ಯೆಯ ಶ್ರೀರಾಮ ಪ್ರತಿಷ್ಠಾಪನೆಯನ್ನು ಗೋಶಾಲೆಯಲ್ಲಿ ಸಂಭ್ರಮ–ಉಲ್ಲಾಸಗಳೊಂದಿಗೆ ಆಚರಿಸಲಾಯಿತು.

## ತರಬೇತಿ ಕಾರ್ಯಾಗಾರಗಳು:

- 03.03.2024ರಂದು ಮುನೇಂದ್ರಕುಮಾರ್ ಸ್ನೇಹ ಬಳಗ ಸಂಘಟನೆಗೆ ಗೋಶಾಲೆಯಲ್ಲಿ ಗವ್ಯೋತ್ಪನ್ನಗಳ ಬಗೆಗೆ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಯಿತು.
- 18.01.2024ರಂದು World Health Organzation for Animal'sಗಳ ತಂಡ ಹಾಗೂ ವೈದ್ಯಕೀಯ ತಂಡದಿಂದ ಗೋಶಾಲೆಯಲ್ಲಿ ಒಂದು ದಿನದ ಚಿಕಿತ್ಸಾ ಕಾರ್ಯಾಗಾರವನ್ನು ನಡೆಸಲಾಯಿತು.
- 29.03.2024ರಂದು ಗೋವುಗಳಿಗೆ ಹೋಮಿಯೋಪತಿ ಚಿಕಿತ್ಸೆ ಹಾಗೂ ಮಾಹಿತಿ ಶಿಬಿರವನ್ನು ಗೋಶಾಲೆಯಲ್ಲಿ ಆಯೋಜಿಸಲಾಗಿತ್ತು. ಡಾ. ನಿಜಲಿಂಗಪ್ಪ, ಡಾ. ವೈ.ವಿ. ಕೃಷ್ಣಮೂರ್ತಿ ಹಾಗೂ ಡಾ. ಕೆ.ಪಿ. ರಮೇಶ್ ಅವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಕಾರ್ಯಕ್ರಮ ನಡೆಸಿಕೊಟ್ಟರು. ಒಟ್ಟು 50 ಜನ ವಿವಿಧ ಗೋಶಾಲೆಗಳಿಂದ ಹಾಗೂ ರೈತರು ಭಾಗವಹಿಸಿದ್ದರು.

## ವರ್ಷಾವಧಿ ಕಾರ್ಯಕಲಾಪಗಳು:

- ಪಶುಪಾಲನಾ ಮತ್ತು ಪಶುವೈದ್ಯಕೀಯ ಸಂಸ್ಥೆಯ ವತಿಯಿಂದ ಸಬ್ಸಿಡಿ ದರದಲ್ಲಿ ಗೋಶಾಲೆಗೆ ಬೇಕಾದ ಗವ್ಯೋತ್ಪನ್ನಗಳನ್ನು ತಯಾರಿಸುವ ಯಂತ್ರೋಪಕರಣಗಳನ್ನು ನೀಡಿರುತ್ತಾರೆ.
- ಗೋಉತ್ಪನ್ನ ತಯಾರಿಕಾ ಘಟಕವನ್ನು ನಿರ್ಮಾಣ ಮಾಡಿ ಉತ್ತಮವಾದ ಗವ್ಯೋತ್ಪನ್ನಗಳನ್ನು ತಯಾರಿಸಲಾಗುತ್ತಿದೆ.
- **ಬೃಂದಾವನ ಯೋಜನೆ:** ಈ ಅರಣ್ಯಕೃಷಿ ಯೋಜನೆಯಡಿ 12,519 ಸಸಿಗಳನ್ನು ನಿರ್ವಹಿಸಲಾಗುತ್ತಿದ್ದು, ಜಾತಿವಾರು ಸಸಿಗಳನ್ನು ವಿಂಗಡಿಸಲಾಗಿದೆ. 64 ವಿಧದ ಸಸಿಗಳು ಅರಣ್ಯಕೃಷಿ ಯೋಜನೆಯಡಿ ಸಂರಕ್ಷಿಸಲ್ಪಟ್ಟಿವೆ. 23–24ರಲ್ಲಿ 200 ಸಸಿಗಳನ್ನು ನೆಡಲಾಗಿದೆ.

## ಸೇವಾ ಚಟುವಟಿಕೆಗಳು:

- ಹಾಫ್ಟಿಂಗ್ ಸಂಸ್ಥೆಯವರು ಅರಣ್ಯಕೃಷಿ ಯೋಜನೆಯಲ್ಲಿ ಶ್ರಮದಾನ ಮಾಡಿರುತ್ತಾರೆ.
- ಗೋಪಾಲ್ ತಂಡದವರು ಗೋಶಾಲೆಯಲ್ಲಿ ಸೇವಾ ಚಟುವಟಿಕೆ ಮಾಡಿರುತ್ತಾರೆ.

- 28.03.2024ರಂದು ನಿಟ್ಟೆ ಮೀನಾಕ್ಷಿ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿಗಳು ಗೋಶಾಲೆಯಲ್ಲಿ ಬೆಳೆದ ಔಷಧಿ ಸಸ್ಯಗಳ ಕ್ಷೇತ್ರದಲ್ಲಿ ನಡೆದಾಡಲು ಕಲ್ಲುಗಳ ಸಹಾಯದಿಂದ ಪಾದಚಾರಿ ಮಾರ್ಗಗಳನ್ನು ನಿರ್ಮಾಣ ಮಾಡಿದರು.

## ವರ್ಷದ ಸಾಧನೆ:

- 05.04.2023ರಂದು Wireless and Information Technology ಸಂಸ್ಥೆಯ ಸಹಯೋಗದೊಂದಿಗೆ 100/45 ಮಳೆನೀರಿನ ಸಂಗ್ರಹದ ತೊಟ್ಟಿಯ ನಿರ್ಮಾಣಕ್ಕಾಗಿ ಗುದ್ದಲಿಪೂಜೆಯನ್ನು ನೆರವೇರಿಸಲಾಯಿತು. ಈ ಕಾರ್ಯವು 2024ರಲ್ಲಿ ಪೂರ್ಣಗೊಂಡಿದೆ.
- ಗೋಶಾಲೆಗೆ ಉತ್ತಮ ರಸ್ತೆ ಹಾಗೂ ಸೇತುವೆ ನಿರ್ಮಾಣ ಮಾಡಿಸಲಾಗಿದೆ.
- ತಳಿಯ ಅಭಿವೃದ್ಧಿಗಾಗಿ ಕಾಮಧೇನು ನಿಲಯವನ್ನು ಸುಸಜ್ಜಿತವಾಗಿ ವಿಭಾಗಿಸಿ 4 ತಳಿಗಳನ್ನು ಅಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

## ಉಲ್ಲೇಖನೀಯ ಸಂಗತಿಗಳು:


- ಜಾಜಿ ಫಾರ್ಮ್ ಅಂತರಹಳ್ಳಿ, ಇವರು ಮೊದಲು ಸೀಮೆಹಸುಗಳನ್ನು ಸಾಕುತ್ತಿದ್ದರು. ಗೋಶಾಲೆಗೆ ಭೇಟಿನೀಡಿದ ಬಳಿಕ ನಮ್ಮ ದೇಸಿ ಹಸುಗಳ ಬಗ್ಗೆ ಮಾಹಿತಿ ಕಲೆಹಾಕಿ ಗುಜರಾತಿನ ಗೀರ್ ಹಾಗೂ ಪಂಜಾಬಿನ ಸಾಹಿವಾಲ್ ತಳಿಗಳ ಹಸುಗಳನ್ನು ಸಾಕುತ್ತಿದ್ದಾರೆ. ಪ್ರಸ್ತುತ ಇವರು ದೊಡ್ಡಬಳ್ಳಾಪುರ ಹಾಗೂ ಬೆಂಗಳೂರಿಗೆ ಹಾಲು ಮಾರಾಟ ಮಾಡುತ್ತಿದ್ದಾರೆ. ಗೊಬ್ಬರ ಹಾಗೂ ಗೋಮೂತ್ರಗಳನ್ನು ಸ್ಥಳೀಯ ಸಾವಯವ ಕೃಷಿ ಮಾಡುವವರಿಗೆ ನೀಡುತ್ತಿದ್ದಾರೆ.
- ಗೋಶಾಲೆಯಲ್ಲಿ ಉತ್ತಮವಾದ ಬೂಸುಪೋಷಣ ಗೋನಂದಾಜಲ ಇನ್ನಿತರೇ ಗೊಬ್ಬರಗಳನ್ನು ತಯಾರಿಸುತ್ತಿದ್ದು, ದೊಡ್ಡಬೆಳವಂಗಲದ ರೈತರು ತಮ್ಮ ಅಡಿಕೆ ಗಿಡಕ್ಕೆ ಗೋಶಾಲೆಯ ಗೊಬ್ಬರವನ್ನು ಬಳಸಿ ಉತ್ತಮವಾದ ಬೆಳೆ ಬರುತ್ತಿದೆ ಎಂದು ಹೇಳಿದ್ದು, ಇವರು ಸಂಪೂರ್ಣ ಗೋಆಧಾರಿತ ಕೃಷಿಯಲ್ಲಿ ತೊಡಗಿಕೊಂಡಿರುತ್ತಾರೆ.
- ನಾಟಿಹಸುಗಳನ್ನು ಸಾಕಬೇಕು ಎನ್ನುವ ಇಚ್ಛೆ ವ್ಯಕ್ತಪಡಿಸುವ ರೈತರಿಗೆ ನಮ್ಮ ಗೋಶಾಲೆಯಿಂದ ಹಸುಗಳನ್ನು ನೀಡಿದ್ದು, ತಮ್ಮ ಮನೆಯ ಮಕ್ಕಳಿಗೆ ಒಳ್ಳೆಯ ಹಾಲನ್ನು ನೀಡುತ್ತಿದ್ದೇವೆ ಎಂದು ರೈತರು ಹೇಳುತ್ತಿದ್ದಾರೆ. ಈ ಎಲ್ಲ ರೈತರು ರಾಸಾಯನಿಕ ಮುಕ್ತ ಗೋಆಧಾರಿತ ಕೃಷಿಯಲ್ಲಿ ತಮ್ಮನ್ನು ತೊಡಗಿಕೊಂಡಿರುತ್ತಾರೆ.

scan to watch video

# ರಾಷ್ಟ್ರೋತ್ಥಾನ ವಿದ್ಯಾಲಯ ರಾಜ್ಯ ಪಠ್ಯಕ್ರಮ ಶಾಲೆಗಳು



- ಗ್ರಾಮೀಣ ಮತ್ತು ನಗರ ಪ್ರದೇಶಗಳ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉಚಿತ ಅಥವಾ ಕೈಗೆಟಕುವ ಶಿಕ್ಷಣ ಒದಗಿಸುವ ಉದ್ದೇಶದಿಂದ, ರಾಷ್ಟ್ರೋತ್ಥಾನ ಪರಿಷತ್ ರಾಜ್ಯ ಪಠ್ಯಕ್ರಮದ ಹಲವು ಶಾಲೆಗಳನ್ನು ನಡೆಸುತ್ತಿದೆ.
- ಆರಂಭಿಕ ಶಾಲಾ ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಮುಖ್ಯ ಗುರಿಯಾಗಿದೆ.
- ಮಕ್ಕಳ ಸಂಪೂರ್ಣ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಪೂರ್ವ ಪ್ರಾಥಮಿಕದಿಂದ 10ನೇ ತರಗತಿಯವರೆಗೆ ಗುಣಮಟ್ಟದ ಮತ್ತು ಪರಿಣಾಮಕಾರಿ ಶಿಕ್ಷಣವನ್ನು ನೀಡಲಾಗುತ್ತಿದೆ.
- **ಪಂಚಮುಖೀ ಶಿಕ್ಷಣ:** ರಾಷ್ಟ್ರೋತ್ಥಾನದ ಎಲ್ಲ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸವಾಗಬೇಕೆಂಬ ಆಶಯದೊಂದಿಗೆ, ಸಮಾಜದಲ್ಲಿ ಅವರ ಸ್ಥಾನ, ಜವಾಬ್ದಾರಿ, ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವ ಕಲೆ, ಸಮಾಜದಲ್ಲಿ ಇತರರೊಂದಿಗೆ ಬೆರೆತು ನಡೆಯುವ ಶಕ್ತಿ ಹಾಗೂ ರಾಷ್ಟ್ರನಿಷ್ಠ, ಸಮಾಜಹಿತ ಗುಣಗಳನ್ನು ಪಂಚಮುಖೀ ಶಿಕ್ಷಣದ ಮೂಲಕ ನೀಡಿ ವಿದ್ಯಾರ್ಥಿಗಳನ್ನು ಸುಸಂಸ್ಕೃತರನ್ನಾಗಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.




- **ವಿದ್ಯಾರ್ಥಿಗಳ ಸಂಖ್ಯೆ:** 2023–24ರ ಸಾಲಿನ ವಿದ್ಯಾರ್ಥಿಗಳ ಸಂಖ್ಯೆ: 6450 ಮತ್ತು ಬೋಧಕ/ಬೋಧಕೇತರ ಸಿಬ್ಬಂದಿ: 360. ಒಟ್ಟು 10 ಪ್ರೌಢಶಾಲೆಗಳ 2022–23ರ ಸಾಲಿನ 10ನೇ ತರಗತಿಯ ಫಲಿತಾಂಶ – 5 ಶಾಲೆಗಳಲ್ಲಿ ಶೇ. 100 ರಷ್ಟಿದ್ದು, ಉಳಿದ 5 ಶಾಲೆಗಳಲ್ಲಿ ಶೇ. 95 ರಷ್ಟಿದೆ.

## ಉದ್ದೇಶ:

- **ಶಿಕ್ಷಕ:** ವೃತ್ತಿಯನ್ನು ಪ್ರವೃತ್ತಿಯಾಗಿಸಿಕೊಂಡ, ಪಂಚಮುಖೀ ಶಿಕ್ಷಣದ ಜ್ಞಾನವನ್ನು ಮತ್ತು ಅತ್ಯುತ್ತಮ ಬೋಧನಾ ಸಾಮರ್ಥ್ಯವನ್ನು ಹೊಂದಿದ, ಧ್ಯೇಯಕ್ಕೆ ಬದ್ಧರಾದ, ಮಾದರಿ ಶಿಕ್ಷಕರ ನಿರ್ಮಾಣ.

- **ವಿದ್ಯಾರ್ಥಿ:** ಸಂಸ್ಕಾರಯುತ, ಮೌಲ್ಯಯುತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸರ್ವಾಂಗೀಣ

ವಿಕಾಸ ಹೊಂದಿದ ಪ್ರಬುದ್ಧ ವಿದ್ಯಾರ್ಥಿಗಳ ನಿರ್ಮಾಣ.

- **ಪಾಲಕ:** ಮನೆಯನ್ನು ಸಂಸ್ಕಾರ ಕೇಂದ್ರವನ್ನಾಗಿಸಿ, ಮಕ್ಕಳ ಆಸಕ್ತಿಯುತ ಶಿಕ್ಷಣಕ್ಕೆ ನಿರಂತರ ಪ್ರೋತ್ಸಾಹಿಸುವ, ಅನುಕರಣೀಯ ನಡವಳಿಕೆಯನ್ನು ಹೊಂದಿದ, ಸಾಮಾಜಿಕ ಹೊಣೆಯನ್ನು ಕರ್ತವ್ಯವೆಂದು ನಿರ್ವಹಿಸುವ ರಾಷ್ಟ್ರಭಕ್ತ ಪಾಲಕರ ನಿರ್ಮಾಣ.
- **ಸಮಾಜ:** ಸಾಮರಸ್ಯಯುಕ್ತ, ಸುಸಂಘಟಿತ, ಜಾಗೃತ ಸಮಾಜ ನಿರ್ಮಾಣ.

## ಕ್ರಮಿಸಿರುವ ಮೈಲುಗಲ್ಲುಗಳು ಮತ್ತು ಪ್ರಶಸ್ತಿ/ ಪುರಸ್ಕಾರಗಳು:

- ಬೆಂಗಳೂರಿನ ಜೈ ಗೋಪಾಲ್ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ, ಕಲ್ಯಾಣ ನಗರದ 9ನೇ ತರಗತಿಯ ಕು. ಹರೀಶ್ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.
- ಯೋಗಾಸನದಲ್ಲಿ ಕು. ದಿಲೀಪ್, 10ನೇ ತರಗತಿ ಟೀಮ್ ಈವೆಂಟ್ – ರಾಷ್ಟ್ರೀಯ ಮಟ್ಟದಲ್ಲಿ ಚಿನ್ನದ ಪದಕ ಮತ್ತು SGFIಗೆ ಆಯ್ಕೆಯಾಗಿದ್ದಾನೆ.
- ರಾಷ್ಟ್ರೀಯ ಮಟ್ಟದಲ್ಲಿ ನಡೆದ ರಿದಮಿಕ್ ಯೋಗ ಸ್ಪರ್ಧೆಯಲ್ಲಿ ಕು. ಹರಿಣಿ 9ನೇ ತರಗತಿ ಚಿನ್ನದ ಪದಕದೊಂದಿಗೆ SGFIಗೆ ಆಯ್ಕೆಯಾಗಿದ್ದಾಳೆ ಮತ್ತು ಕು. ವಿಘ್ನೇಶ್ 7ನೇ ತರಗತಿ ಕಂಚಿನ ಪದಕವನ್ನು ಪಡೆದಿದ್ದಾನೆ.
- 2023–24ರ ಸಾಲಿನ ಶಿವಮೊಗ್ಗ ಜಿಲ್ಲಾ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ 8ನೇ ತರಗತಿ ವಿದ್ಯಾರ್ಥಿ ಕು. ಸಮರ್ಥ ಕಥಾಗೋಷ್ಠಿಯ ಅಧ್ಯಕ್ಷ ಸ್ಥಾನವಹಿಸಿದ್ದನು.
- 1, 2 ಮತ್ತು 3ನೇ ಸೆಪ್ಟಂಬರ್ 20203ರಂದು ಸೇಡಂನಲ್ಲಿ ನಡೆದ












ವಿದ್ಯಾಭಾರತಿಯ ಪ್ರಾಂತೀಯ ಗಣಿತ–ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವ–2023ರಲ್ಲಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಿಶೋರ ವರ್ಗದಲ್ಲಿ 2 ದ್ವಿತೀಯ ಸ್ಥಾನ, ಬಾಲವರ್ಗದಲ್ಲಿ 1 ದ್ವಿತೀಯ ಸ್ಥಾನ ಪಡೆದಿದ್ದಾರೆ.

## ವಿವಿಧ ಶಾಲೆಗಳಿಂದ ನಡೆಯುತ್ತಿರುವ ಸಾಮಾಜಿಕ ಚಟುವಟಿಕೆಗಳು:

| ಮಾತೃಮಂದಿರ | ಬಾಲಗೋಕುಲ | ಭಜನಾಕೇಂದ್ರ | ಕಲಿಕಾಕೇಂದ್ರ | **ಒಟ್ಟು** |
|---|---|---|---|---|
| 19 | 19 | 9 | 2 | **49** |

## ವರ್ಷಾವಧೀ ಕಾರ್ಯಕಲಾಪಗಳು:

- ಶಿಕ್ಷಕರ ಸಾಮರ್ಥ್ಯವರ್ಧನೆಗಾಗಿ ಪ್ರತಿ ತಿಂಗಳ 2ನೇ ಶನಿವಾರ ವಿಷಯವಾರು ಶಿಕ್ಷಕರ ಬೈಠಕ್ ಮತ್ತು ತರಬೇತಿಗಳನ್ನು ನಡೆಸಲಾಯಿತು.

## ಕಾರ್ಯಕ್ರಮಗಳು:

**ಸರಸ್ವತಿ ಶಿಶುಮಂದಿರ, ಹಗರಿಬೊಮ್ಮನಹಳ್ಳಿ:**

- 31.08.2023ರಂದು ಸರಸ್ವತಿ ಶಿಶುಮಂದಿರದಲ್ಲಿ ರಕ್ಷಾಬಂಧನ ಕಾರ್ಯಕ್ರಮವನ್ನು ಆಚರಿಸಲಾಯಿತು.





- ಪ್ರತಿವರ್ಷದಂತೆ ಮಕ್ಕಳನ್ನು ಪೋಸ್ಟ್ ಆಫೀಸ್, ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅಲ್ಲಿನ ಸಿಬ್ಬಂದಿಗಳಿಗೆ ರಕ್ಷೆಯನ್ನು ಕಟ್ಟಿದರು.

**ವಿವೇಕ ಸ್ಮರಣೆ, ಹಗರಿಬೊಮ್ಮನಹಳ್ಳಿ:**

- ಪ್ರತಿವರ್ಷದಂತೆ ಈ ವರ್ಷವೂ ವಿವೇಕ ಸ್ಮರಣೆ ಕಾರ್ಯಕ್ರಮ 10, 11 ಮತ್ತು 12 ಜನವರಿ 2024ರಂದು 3 ದಿನಗಳ ಕಾಲ ನಡೆಯಿತು.
- ಕಾರ್ಯಕ್ರಮಕ್ಕೆ ನಗರದ ಸಜ್ಜನ ಬಂಧುಗಳು, ಮಾತಾ ಭಗಿನಿಯರು ಶ್ರದ್ಧೆಯಿಂದ ಶುಭ್ರವೇಷಧಾರಿಗಳಾಗಿ ಸಮಯಕ್ಕೆ ಸರಿಯಾಗಿ ಭಾಗವಹಿಸಿದ್ದರು.
- ಬೆಳಿಗ್ಗೆ 6 ಗಂಟೆಗೆ ಸರಿಯಾಗಿ ಶಂಖೋದ್ಘೋಷದೊಂದಿಗೆ, 10 ನಿಮಿಷ ಧ್ಯಾನ, 15 ನಿಮಿಷ ಜಾಗಿಯ ಹಾಡಿನ ಪಠಣ ಹಾಗೂ 20 ನಿಮಿಷ ವಿವೇಕಾನಂದರ ಚಿಂತನೆ ಒಳಗೊಂಡಿರುವ ಕಾರ್ಯಕ್ರಮ ನಡೆಸಲಾಯಿತು.













- 10ರಂದು ಕೂಡ್ಲಿಗಿ ಹಿರೇಮಠದ ಶ್ರೀ ಶ್ರೀ ಪ್ರಶಾಂತ ಸಾಗರ ಸ್ವಾಮೀಜಿ ಹಾಗೂ 11ರಂದು ಬಳ್ಳಾರಿಯ ನಿವೃತ್ತ ಅರ್ಥಶಾಸ್ತ್ರ ಉಪನ್ಯಾಸಕರಾದ ಶ್ರೀ ಶಶಿಕಿರಣ ಗುಡೇಕೋಟೆ ಮತ್ತು 12ರಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕರಾದ ಮಾ॥ ಶ್ರೀ ಸು. ರಾಮಣ್ಣ ಜೀ ಮಾರ್ಗದರ್ಶನ ಮಾಡಿದರು.




**ಚಿಣ್ಣರ ವಿದ್ಯಾಗಣಪತಿ ರಥೋತ್ಸವ, ಹಗರಿಬೊಮ್ಮನಹಳ್ಳಿ:**

- ಪ್ರತಿವರ್ಷದಂತೆ ಮಾಘಮಾಸದ ಸಂಕಷ್ಟಿಯಂದು ವಿದ್ಯಾಕೇಂದ್ರದ ಆವರಣದಲ್ಲಿರುವ ವಿದ್ಯಾಗಣಪತಿ ದೇವಸ್ಥಾನದ ಚಿಣ್ಣರ ರಥೋತ್ಸವವನ್ನು ಆಚರಿಸಲಾಯಿತು.



- ಸರಸ್ವತಿ ಶಿಶುಮಂದಿರದಿಂದ ವಿದ್ಯಾರ್ಥಿನಿಲಯದವರೆಗೆ ಶಿಶುಮಂದಿರದ ಮಕ್ಕಳು ರಥವನ್ನು ಎಳೆದರು. ಗೊಂಬೆ ಕುಣಿತ, ಸಮಾಳ ಇತ್ಯಾದಿ ವಿವಿಧ ವಾದ್ಯಗಳೊಂದಿಗೆ



ನಡೆದ ಈ ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ನಂದಿಪುರದ ಶ್ರೀ ಶ್ರೀ ಚರಂತೇಶ್ವರ ಸ್ವಾಮಿಜಿಯವರು ಸಾನ್ನಿಧ್ಯವಹಿಸಿದ್ದರು.

- ವಿದ್ಯಾಕೇಂದ್ರ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ಭಾಗವಹಿಸಿದ್ದರು. ಸುಮಾರು 2500 ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಅನ್ನಪ್ರಸಾದವನ್ನು ವಿತರಿಸಲಾಯಿತು.

**ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರಿನಲ್ಲಿ**

- 15.08.2023ರಂದು ನಡೆದ ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮಕ್ಕೆ ಪ.ಪೂ.ಶ್ರೀ ಸತ್ಯಾತ್ಮ ತೀರ್ಥರು ಆಗಮಿಸಿ ಮಕ್ಕಳಿಗೆ ಆಶೀರ್ವಚನ ನೀಡಿದರು.










**ಭಾರತಮಾತಾ ಪೂಜನ ಕಾರ್ಯಕ್ರಮಗಳು ಜನವರಿ 2024, ಹಗರಿಬೊಮ್ಮನಹಳ್ಳಿ:**

| ಕ್ರಸಂ | ವಿಭಾಗ | ಮನೆಗಳ ಸಂಖ್ಯೆ | ಪುರುಷರು | ಮಾತೆಯರು | ಮಕ್ಕಳು | ಒಟ್ಟು |
|---|---|---|---|---|---|---|
| 1 | ಕನ್ನಡ ಮಾಧ್ಯಮ | 73 | 333 | 807 | 771 | 1911 |
| 2 | ಆಂಗ್ಲ ಮಾಧ್ಯಮ | 55 | 145 | 574 | 485 | 1204 |
| 3 | ಸಿ.ಬಿ.ಎಸ್.ಇ. | 18 | 93 | 142 | 151 | 386 |
| | **ಒಟ್ಟು** | **146** | **571** | **1523** | **1407** | **3501** |

## ಸೇವಾ ಚಟುವಟಿಕೆಗಳು:

**ರಾಷ್ಟ್ರೋತ್ಥಾನ ವಿದ್ಯಾಲಯ, ದಾವಣಗೆರೆ – ಪೋಷಕರಿಗಾಗಿ ಉಚಿತ ಆರೋಗ್ಯ ತಪಾಸಣೆ:**

- 13.01.2024ರಂದು ಪೋಷಕರಿಗಾಗಿ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.
- ಆರೈಕೆ ಆಸ್ಪತ್ರೆಯ ಮಾಲೀಕರಾದ ಡಾ. ರವಿಕುಮಾರ್‌ರವರ ನೇತೃತ್ವದಲ್ಲಿ ಸುಮಾರು 350 ಜನರಿಗೆ ಉಚಿತ ತಪಾಸಣೆ ಮಾಡಿದರು.





## ತರಬೇತಿ ಕಾರ್ಯಾಗಾರಗಳು:

**ಬುನಾದಿ ಹಂತದ ಶಿಕ್ಷಕಿಯರ ತರಬೇತಿ ವರ್ಗ:**







- 9ರಿಂದ 12 ಅಕ್ಟೋಬರ್ 2023ರ ವರೆಗೆ ರಾಷ್ಟ್ರೋತ್ಥಾನ ವಿದ್ಯಾಲಯ, ಹೊಳೆಹೊನ್ನೂರಿನಲ್ಲಿ 20 ಶಾಲೆಗಳಿಂದ 63 ಜನ ಶಿಕ್ಷಕಿಯರು ಪಾಲ್ಗೊಂಡಿದ್ದರು.
- ವಿಷಯತಜ್ಞರಾಗಿ ಶ್ರೀಮತಿ ಅನ್ನಪೂರ್ಣಕ್ಕ, ಶ್ರೀ ಜಯಶೀಲ, ಶ್ರೀ ಶಿವಶಂಕರ, ಶ್ರೀ ರಾಜಾರಾಮ, ಶ್ರೀ ಮುಕುಂದ, ಶ್ರೀಮತಿ ಸಂಧ್ಯಾ ಹಾಗೂ ಭಗಿನಿ ಶಾಂತಾ ಮಾತಾಜೀ ಇವರುಗಳು ಆಗಮಿಸಿದ್ದರು.
- ಶಿಶು ಶಿಕ್ಷಣದ ಮಹತ್ತ್ವ ಭಾರತೀಯ ಧಾರ್ಮಿಕ ಆಚರಣೆಗಳ ಅರಿವು, ಗಣಿತ ಮತ್ತು ಭಾಷಾ ವಿಕಾಸದ ಕಲಿಕಾ ವಿಧಾನಗಳೂ ಸೇರಿದಂತೆ ಪಂಚಕೋಶಾತ್ಮಕ ವಿಕಾಸದ ಚಟುವಟಿಕೆಗಳ ಕುರಿತು ಮಾರ್ಗದರ್ಶನ ಮಾಡಿದರು.
- ಕೂಡಲಿ ಶೃಂಗೇರಿ ಮಠದ ಶ್ರೀ ಶ್ರೀ

ಅಭಿನವಶಂಕರ ಸ್ವಾಮಿಜೀಯವರು ಭಾರತೀಯ ಶೈಕ್ಷಣಿಕ ಪರಿಕಲ್ಪನೆ ಕುರಿತು ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

**ಆಯ್ದ ಶಿಕ್ಷಕರ ಚಿಂತನ ಬೈಠಕ್:**

- 10, 11 ಮತ್ತು 12 ಆಗಸ್ಟ್ 2023ರ ಮೂರು ದಿನಗಳ ಕಾಲ ಉತ್ತರಕೊಪ್ಪ, ಮುರುಡೇಶ್ವರದಲ್ಲಿ ನಡೆದ ಶಿಕ್ಷಕರ ಚಿಂತನ ಬೈಠಕ್‌ನಲ್ಲಿ 11 ಶಾಲೆಗಳ ಆಯ್ದ 21 ಜನ ಶಿಕ್ಷಕರು ಭಾಗವಹಿಸಿದ್ದರು.
- ಶ್ರೀ ಸೀತಾರಾಮ್ ಗೋಯಲ್‌ರವರ ಆಯ್ದ ಪುಸ್ತಕಗಳು ಮತ್ತು ಹಿಂದೂ ಸೈದ್ಧಾಂತಿಕ ಚಿಂತನೆಗೆ ಪೂರಕವಾದ ಇತರೆ ಪುಸ್ತಕಗಳನ್ನು ಆಯ್ಕೆ ಮಾಡಲಾಗಿತ್ತು. ಭಾಗವಹಿಸಿದ ಶಿಕ್ಷಕರಲ್ಲಿ ಅಧ್ಯಯನ ಪ್ರವೃತ್ತಿ, ಹಿಂದೂ ದೃಷ್ಟಿಕೋನದ ಬೆಳವಣಿಗೆಗೆ ಉಪಯುಕ್ತವಾಗುವಂತೆ ಈ ವರ್ಗವನ್ನು ನಡೆಸಲಾಯಿತು.
- ಶಿಕ್ಷಕರಿಗೆ ಈ ವರ್ಗದಲ್ಲಿ ಒಂದು ದಿನ ವನವಾಸಿಗಳ ಜೀವನ ಪದ್ಧತಿ, ಆಚಾರ–ವಿಚಾರಗಳ ಕುರಿತು ತಿಳಿವಳಿಕೆಗಾಗಿ ಮನೆಸಂಪರ್ಕ ಜೋಡಿಸಲಾಗಿತ್ತು.

**ವ್ಯಕ್ತಿತ್ವ ವಿಕಸನ ಕಾರ್ಯಕ್ರಮ, ಜ್ಞಾನಭಾರತಿ ವಿದ್ಯಾಮಂದಿರ, ಚಿತ್ರದುರ್ಗ:**



- 30/01/2024ರಂದು ಶಾಲೆಗೆ ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ಟಿ.ಎಸ್. ನಾಗಾಭರಣ ಆಗಮಿಸಿ ವ್ಯಕ್ತಿತ್ವ ವಿಕಸನದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.
- 24.02.2024ರಂದು ಕುಟುಂಬ ಪ್ರಬೋಧಿನಿ ಪ್ರಮುಖರಾದ ಶ್ರೀ ಕಜಂಪಾಡಿ ಸುಬ್ರಮಣ್ಯ ಭಟ್‌ರವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು.



**ಆಯ್ದ 6 ಶಾಲೆಗಳ ಶಿಕ್ಷಕರ ಪ್ರಶಿಕ್ಷಣ ವರ್ಗ:**

- 17, 18 ಮತ್ತು 19 ಮೇ 2023, ಬೆಂಗಳೂರಿನ ಸುವರ್ಣಮುಖಿ ಆಶ್ರಮದಲ್ಲಿ ನಡೆದ ಶಿಕ್ಷಕರ ಪ್ರಶಿಕ್ಷಣ ವರ್ಗದಲ್ಲಿ 6 ಶಾಲೆಗಳಿಂದ 117 ಜನ 3ನೇ ತರಗತಿಯಿಂದ 10ನೇ ತರಗತಿಯವರೆಗೆ ಬೋಧನೆ ಮಾಡುವ ಶಿಕ್ಷಕರು ಭಾಗವಹಿಸಿದ್ದರು.



- 15 ಅವಧಿಗಳಲ್ಲಿ ಯೋಜನೆಗೊಂಡ ಈ ಕಾರ್ಯಾಗಾರದಲ್ಲಿ ಶ್ರೀ ದಿನೇಶ್ ಹೆಗ್ಡೆ, ಶ್ರೀ ರವಿಕುಮಾರ್, ಶ್ರೀ ರಾಜಾರಾಮ್, ಶ್ರೀ ಪ್ರಸನ್ನಮೂರ್ತಿ, ಶ್ರೀ ಗಣಪತಿ ಹೆಗಡೆ ಮತ್ತು ಶ್ರೀಮತಿ ಸುವರ್ಣಿನೀ ಕೊಣಾಲೆ ಮುಂತಾದ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಮಾರ್ಗದರ್ಶನ ಮಾಡಿದರು.
- ತರಗತಿ ನಿರ್ವಹಣೆ, ಶಾಲಾ ಪ್ರಾರ್ಥನೆ, ಶಿಕ್ಷಕರ ಕರ್ತವ್ಯಗಳು, ವ್ಯವಸ್ಥಾಕೌಶಲ್ಯ, ಭಾರತೀಯ ಸಂಸ್ಕೃತಿ, ಸ್ವಸ್ಥಜೀವನ ಶೈಲಿ, ಪರಿಷತ್ತಿನ ಧ್ಯೇಯೋದ್ದೇಶಗಳು ಮುಂತಾದ ವಿಷಯಗಳ ಕುರಿತು ಚರ್ಚೆ ಮತ್ತು ಮಾರ್ಗದರ್ಶನ ಮಾಡಲಾಯಿತು.



**ಆಯ್ದಪಾಲಕರ ಅಭ್ಯಾಸವರ್ಗ:**

- ಸೆಪ್ಟಂಬರ್ 2023ರಂದು ದಾವಣಗೆರೆಯಲ್ಲಿ ನಡೆದ ಈ ವರ್ಗದಲ್ಲಿ 12 ಶಾಲೆಗಳಿಂದ 68 ಜನ ಪಾಲಕರು (ಮಾತೆಯರು ಮಾತ್ರ) ಮತ್ತು 14 ಜನ ಶಿಕ್ಷಕರು ಭಾಗವಹಿಸಿದ್ದರು.



- ರಾಷ್ಟ್ರೋತ್ಥಾನ ಪರಿಷತ್‌ನ ವಿವಿಧ ಸಾಮಾಜಿಕ ಚಟುವಟಿಕೆಗಳ ಧ್ಯೇಯೋದ್ದೇಶಗಳನ್ನು ತಿಳಿಸಲಾಯಿತು.
- ಬೈಠಕ್‌ನಲ್ಲಿ ಶಾಲೆ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲಕರು ಹೇಗೆ ತೊಡಗಿಸಿಕೊಳ್ಳಬಹುದು ಎಂಬುದನ್ನು ಚರ್ಚಿಸಲಾಯಿತು.



**ಸೃಷ್ಟಿ ಶಿಬಿರ 2023–24:**

- 8 ಮತ್ತು 9ನೇ ತರಗತಿಯ ಆಯ್ದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಶಿಬಿರವನ್ನು 8 ರಿಂದ 12 ಅಕ್ಟೋಬರ್ 2023, ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಧಾರವಾಡದಲ್ಲಿ ನಡೆಸಲಾಯಿತು.



- 10 ಶಾಲೆಗಳಿಂದ 77 ಬಾಲಕರು, 73 ಬಾಲಕಿಯರು ಒಟ್ಟು 150 ಜನ ಭಾಗವಹಿಸಿದ್ದರು. 14 ಜನ ಶಿಕ್ಷಕ,

ಶಿಕ್ಷಕಿಯರು ಮಾರ್ಗದರ್ಶಕರಾಗಿದ್ದರು.

- ಇಸ್ರೋದ ವಿಜ್ಞಾನಿಯಾದ ಶ್ರೀ ಜಯಸಿಂಹ, ಆಕಾಶವಾಣಿ ಕಲಾವಿದರಾದ ಶ್ರೀ ಶಶಿಧರ ನರೇಂದ್ರ, ಸಾಮಾಜಿಕ ಕಾರ್ಯಕರ್ತರಾದ ಶ್ರೀ ರವೀಂದ್ರ ಮತ್ತು ಶ್ರೀ ಅರುಣಕುಮಾರ್, ಪ್ರಖ್ಯಾತ ಚಿತ್ರಕಲಾವಿದರಾದ ಶ್ರೀ ಸತೀಶ ಯಲ್ಲಾಪುರ, ಅಂಧ ಸಂಗೀತ ಕಲಾವಿದರಾದ ಕು॥ ಶಕ್ತಿಪಾಟೀಲ್ ಮುಂತಾದ ವಿಷಯತಜ್ಞರು ಆಗಮಿಸಿ ಮಕ್ಕಳಿಗೆ ಭವಿಷ್ಯದ ಭಾರತ, ಚಂದ್ರಯಾನ, ಭಾರತೀಯ ಜ್ಞಾನ ಪರಂಪರೆ, ವೇದಗಣಿತ, ನಾಟಕ, ಚಿತ್ರಕಲೆ, ಕಾಗದ ಕಲೆ, ರಂಗೋಲಿ ಇತ್ಯಾದಿ ವಿಷಯಗಳನ್ನು ತಿಳಿಸಿಕೊಟ್ಟರು.
- ಗರಗ ಗ್ರಾಮದಲ್ಲಿ 485 ಮನೆಗಳ ಸರ್ವೇಕ್ಷಣೆ ಮಾಡಲಾಯಿತು. ಇದರಿಂದಾಗಿ ಮಕ್ಕಳಿಗೆ ಗ್ರಾಮಜೀವನದ ವಿವಿಧ ಮುಖಗಳ ಪರಿಚಯವಾಯಿತು.

**ಮಕ್ಕಳ ಸಂತೆ:**

- ಶಾರದಾ ವಿದ್ಯಾ ಮಂದಿರ ಹಗರಿಬೊಮ್ಮನಹಳ್ಳಿಯಲ್ಲಿ 24/02/2024ರಂದು ಒಂದರಿಂದ ಐದನೇ ತರಗತಿಯ ವಿದ್ಯಾರ್ಥಿಗಳಿಗೆ ಜೀವನ ಕೌಶಲ್ಯಗಳಲ್ಲಿ ಒಂದಾದ ವ್ಯವಹಾರಿಕ ಜ್ಞಾನವನ್ನು ಅಭಿವೃದ್ಧಿಪಡಿಸಲು ಮಕ್ಕಳ ಸಂತೆಯನ್ನು ಏರ್ಪಡಿಸಲಾಗಿತ್ತು.
- ಸಂತೆಯಲ್ಲಿ ಮಕ್ಕಳು ವಿವಿಧ ಹಣ್ಣು ತರಕಾರಿಗಳನ್ನು ದಿನಸಿ ಪದಾರ್ಥಗಳು, ಉಪಾಹಾರ ಮತ್ತು ಊಟ ಇತ್ಯಾದಿ ಅಂಗಡಿಗಳನ್ನು ಮಕ್ಕಳು ತೆರೆದಿದ್ದರು.
- ಇದರಲ್ಲಿ ಪಾಲಕರು ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಗ್ರಾಹಕರಾಗಿ ಭಾಗವಹಿಸಿದ್ದರು. ಬಹುತೇಕ ವಿದ್ಯಾರ್ಥಿಗಳು ವ್ಯಾಪಾರದಿಂದ ತಮಗೆ ಆದ ಲಾಭ ಮತ್ತು ಅನುಭವವನ್ನು ಆನಂದದಿಂದ ಹಂಚಿಕೊಂಡರು.

## ವರ್ಷದ ಸಾಧನೆ:

ರಾಷ್ಟ್ರೋತ್ಥಾನ ವಿದ್ಯಾಲಯ, ಧಾರವಾಡದಲ್ಲಿ 22.02.2024 ರಂದು ನೂತನ ಶಾಲಾ ಕಟ್ಟಡದ ಭೂಮಿ ಪೂಜನ ಕಾರ್ಯಕ್ರಮ ನಡೆಯಿತು.

## ಉಲ್ಲೇಖನೀಯ ಸಂಗತಿಗಳು:

ಆಯ್ದ ಪಾಲಕರ ಅಭ್ಯಾಸವರ್ಗದ ಪರಿಣಾಮದಿಂದಾಗಿ ವಿವಿಧ ಶಾಲೆಗಳಲ್ಲಿ ಪಾಲಕರು ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದು ಕಂಡುಬಂದಿದೆ.


# ರಾಷ್ಟ್ರೋತ್ಥಾನ ವಿದ್ಯಾಕೇಂದ್ರ
## ಸಿ.ಬಿ.ಎಸ್.ಇ. ಶಾಲೆಗಳು

scan to watch video




ರಾಷ್ಟ್ರೋತ್ಥಾನ ವಿದ್ಯಾಕೇಂದ್ರ – ಉಡುಪಿಯ ಭೂಮಿಪೂಜಾ ಸಮಾರಂಭ

- 'ಆಧುನಿಕ ಶಿಕ್ಷಣದ ನೆಪದಲ್ಲಿ ವಿದ್ಯಾರ್ಥಿಗಳು ಭಾರತೀಯತೆಯಿಂದ ದೂರವಾಗಬಾರದು' ಇದು ರಾಷ್ಟ್ರೋತ್ಥಾನ ಪರಿಷತ್‌ನ ಕಳಕಳಿ. ಈ ಹಿನ್ನೆಲೆಯಲ್ಲಿಯೇ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿ.ಬಿ.ಎಸ್.ಇ. ಪಠ್ಯಕ್ರಮದ ಶಾಲೆಗಳನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.
- ವಿದ್ಯಾರ್ಥಿಗಳಿಗೆ ಇಂದಿನ ಕಾಲಮಾನಕ್ಕೆ ತಕ್ಕಂತೆ ಆಧುನಿಕ ಕಲಿಕಾ ಪರಿಸರವನ್ನು ಸೃಷ್ಟಿಸಿ, ಅಲ್ಲಿ ಭಾರತೀಯ ಆಚಾರ, ವಿಚಾರ, ಸಂಸ್ಕೃತಿಯೊಂದಿಗೆ ಶಿಕ್ಷಣ ನೀಡುವ ಧ್ಯೇಯದೊಡನೆ ಕಳೆದ ಕೆಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿವೆ.
- ಪ್ರಸ್ತುತ ಒಟ್ಟು 11 ಸಿ.ಬಿ.ಎಸ್.ಇ. ಶಾಲೆಗಳನ್ನು ಬೆಂಗಳೂರು, ದಾವಣಗೆರೆ, ಹಗರಿಬೊಮ್ಮನಹಳ್ಳಿ,




ಧಾರವಾಡ, ಮೈಸೂರು, ಕಲಬುರಗಿ ಹಾಗೂ ಮಂಗಳೂರಿನಲ್ಲಿ ತೆರೆದಿದ್ದು, ಈ ಎಲ್ಲ ಶಾಲೆಗಳಲ್ಲಿ ಸುಮಾರು 15 ಸಾವಿರಕ್ಕಿಂತ ಹೆಚ್ಚಿನ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ.

## ಉದ್ದೇಶ:

- ಮಕ್ಕಳ ಸಮಗ್ರ ವ್ಯಕ್ತಿತ್ವದ ವಿಕಾಸದ ಮೂಲಕ 'ಸ್ವಸ್ಥ-ಸುಸ್ಥಿರ ಸಮಾಜನಿರ್ಮಾಣ'.
- ಪಂಚಮುಖೀ ಶಿಕ್ಷಣದ ಮೂಲಕ ಸಮಗ್ರ ವ್ಯಕ್ತಿತ್ವದ ನಿರ್ಮಾಣ.
- ಪೋಷಕರ ಸಹಭಾಗಿತ್ವದ ಹಾಗೂ ಶಕ್ತಿ ವರ್ಧನೆಯ ಮೂಲಕ ಸಮಾಜದ ಪರಿವರ್ತನೆ.
- ಉತ್ಕೃಷ್ಟ ಮಾದರಿಯ ನಿರ್ಮಾಣ ಮತ್ತು ಅಳವಡಿಕೆ.




## ಪಂಚಮುಖೀ ಶಿಕ್ಷಣ:

- ರಾಷ್ಟ್ರೋತ್ಥಾನದ ಎಲ್ಲ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸವಾಗಬೇಕೆಂಬ ಆಶಯದೊಂದಿಗೆ, ಸಮಾಜದಲ್ಲಿ ಅವರ ಸ್ಥಾನ, ಜವಾಬ್ದಾರಿ, ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವ ಕಲೆ, ಸಮಾಜದಲ್ಲಿ ಇತರರೊಂದಿಗೆ ಬೆರೆತು ನಡೆಯುವ ಶಕ್ತಿ ಹಾಗು ರಾಷ್ಟ್ರನಿಷ್ಠ, ಸಮಾಜಹಿತ ಗುಣಗಳನ್ನು ಪಂಚಮುಖೀ ಶಿಕ್ಷಣದ ಮೂಲಕ ನೀಡಿ ವಿದ್ಯಾರ್ಥಿಗಳನ್ನು ಸುಸಂಸ್ಕೃತರನ್ನಾಗಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

## ಕ್ರಮಿಸಿರುವ ಮೈಲುಗಲ್ಲುಗಳು ಮತ್ತು ಪ್ರಶಸ್ತಿ/ ಪುರಸ್ಕಾರಗಳು:

- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸತ್ತೂರಿನಲ್ಲಿ ಮೊದಲನೆಯ ವರ್ಷದಲ್ಲಿ 228 ವಿದ್ಯಾರ್ಥಿಗಳ ದಾಖಲಾತಿಯಾಗಿದೆ.




- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಕಲಬುರ್ಗಿಯಲ್ಲಿ 285 ವಿದ್ಯಾರ್ಥಿಗಳ ದಾಖಲಾತಿಯಾಗಿದೆ.
- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಅರ್ಕಾವತಿಯಲ್ಲಿ 23–24ನೇ ಸಾಲಿನ ಹತ್ತನೆಯ ತರಗತಿ ಪರೀಕ್ಷೆಯಲ್ಲಿ ಅನನ್ಯ ಅರುಣ್ ನಿಕಂ ಶೇ.98 ಅಂಕ ಗಳಿಸಿದ್ದು, ಉಳಿದ ರಾಷ್ಟ್ರೋತ್ಥಾನ ಶಾಲೆಗಳಿಗಿಂತ ಹೆಚ್ಚು ಅಂಕಗಳನ್ನು ಪಡೆದಿರುವುದು ಶ್ಲಾಘನೀಯವಾಗಿದೆ.
- ವಿದ್ಯಾಭಾರತೀ ಆಯೋಜಿಸಿರುವ ಪೇಪರ್ ಪ್ರೆಸೆಂಟೇಷನ್‌ನಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಅರ್ಕಾವತಿಯ ಗಣಿತ ಶಿಕ್ಷಕಿಯಾದ ಶ್ರೀಮತಿ ಶಿವಶಂಕರಿಯವರು ರಾಷ್ಟ್ರೀಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.
- ರಾಷ್ಟ್ರಮಟ್ಟದ ಇನ್ಸ್ಪೈರ್ ಅವಾರ್ಡ್‌ಗೆ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಧಾರವಾಡದ 11ನೇ ತರಗತಿಯ ವಿದ್ಯಾರ್ಥಿಯಾದ ಕು. ಶಿಶಿರ್ ಜೋಯಿಸ್ ಆಯ್ಕೆಯಾಗಿದ್ದಾನೆ.









- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಬನಶಂಕರಿಯ ಪ್ರಣವ್ ನಾಡಿಗ್ ಖೇಲೋ ಇಂಡಿಯಾ ಯೋಗಾಸನ ಸ್ಪರ್ಧೆಗೆ ಆಯ್ಕೆಯಾಗಿದ್ದಾನೆ.
- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಬನಶಂಕರಿಯ ಎನ್.ಸಿ.ಸಿ. ಕೆಡೆಟ್ ಮಧುಮಿತ ಜನವರಿ 26ರಂದು ನವದೆಹಲಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದಾಳೆ.
- ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಕನ್ನಡ ಶಿಕ್ಷಕಿ ಶ್ರೀಮತಿ ಗಿರಿಜಾ ಅವರಿಗೆ ಕನ್ನಡ ನುಡಿ ಸಿರಿ ಬಳಗದ ವತಿಯಿಂದ 'ಕನ್ನಡ ಸಾಧಕ ಶಿಕ್ಷಕಿ' ಪ್ರಶಸ್ತಿ ದೊರಕಿದೆ.
- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶ್ರೀನಗರದ 'ಬ್ರೈನ್ ಓ ಬ್ರೈನ್ ಅಕಾಡೆಮಿ' ಸಿದ್ಧಾರ್ಥ ನಗರದ ವತಿಯಿಂದ ನಡೆಸಲಾದ ರಾಷ್ಟ್ರೀಯ ಮಟ್ಟದ ಅಬಾಕಸ್ ಸ್ಪರ್ಧೆಯಲ್ಲಿ ಐದನೆ ತರಗತಿಯ ವಿದ್ಯಾರ್ಥಿನಿ ಚಿನ್ನದ ಪದಕದೊಂದಿಗೆ ಚಾಂಪಿಯನ್ ಹಾಗೂ ಒಂದನೆಯ









ತರಗತಿಯ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಅಬಾಕಸ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗಳಿಸಿರುತ್ತಾಳೆ.

- ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ದಾವಣಗೆರೆಯ ಕುನಾಲ್ ಡಿ., ಕೆ. ಕುಮಾರ್, ಖುಷಿ ಎಂ.ಡಿ., ತ್ರಿಷಾ ಎಚ್. ಹಾಗೂ ಆಕಾಶ್ ಆರ್. ರಾಜ್ಯಮಟ್ಟದ ಇನ್ಸ್ಪೈರ್ ಅವಾರ್ಡ್‌ಗೆ ಆಯ್ಕೆಯಾಗಿದ್ದಾರೆ. ಹಾಗೆಯೇ ನಿಧಿ ವಿ. ನವನಿ, ದೇವ್ ಆರ್., ಪ್ರಥನ್ ಕೆ.ಎಂ., ಅಭಿಜನ್ ತನ್ವಿ, ಅನಘಾ ಟಿ.ಆರ್. ಯಂಗ್ ಸೈಂಟಿಸ್ಟ್ ಅವಾರ್ಡ್‌ಗೆ ಆಯ್ಕೆಯಾಗಿದ್ದಾರೆ.





## ಕಾರ್ಯಕ್ರಮಗಳು:

- ಅಕ್ಷರಾಭ್ಯಾಸ
- ಸುತ್ತಮುತ್ತಲಿನ ಶಾಲೆಗಳಿಗೆ ತೆರಳಿ ರಕ್ಷಾಬಂಧನ ಕಾರ್ಯಕ್ರಮ ಮಹತ್ತ್ವ ತಿಳಿಸಿ ಆಚರಣೆ ಮಾಡಲಾಯಿತು.





**ರಾ.ವಿ.ಕೇ. ಸತ್ತೂರು, ಧಾರವಾಡದಲ್ಲಿ**

- ರಾಮೋತ್ಸವ ಹೆಸರಿನ ರಾಷ್ಟ್ರೋತ್ಸವದ ಆಚರಣೆ ಮಾಡಲಾಯಿತು.
- ಕ್ರೀಡೋತ್ಸವ ಆಚರಿಸಲಾಯಿತು.

**ರಾ.ವಿ.ಕೇ. ಅರ್ಕಾವತಿಯಲ್ಲಿ**

- 'ವಿಕಸಿತ ಭಾರತ' ಶೀರ್ಷಿಕೆಯಡಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ಆಚರಣೆ ಮಾಡಲಾಯಿತು.
- 6ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ 'ಕರ್ನಾಟ ಐಸಿರಿ' ರಾಷ್ಟ್ರೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.
- ಒಟ್ಟು ಪ್ರೀ ಕೆ.ಜಿ.ಯಿಂದ ಹತ್ತನೆಯ ತರಗತಿಯವರೆಗೆ 10 ರಾಷ್ಟ್ರೋತ್ಸವಗಳನ್ನು ಹಮ್ಮಿಕೊಳ್ಳಲಾಗಿತ್ತು.
- ಕರ್ನಾಟಕಕ್ಕೆ ಮೈಸೂರು ಒಡೆಯರ ಕೊಡುಗೆ – ರಾಜ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.
- ಎರಡು ದಿನಗಳ ಕಲಾಉತ್ಸವವನ್ನು ಅಚರಿಸಲಾಯಿತು










- ಕಾರ್ತಿಕ ದೀಪೋತ್ಸವವನ್ನು ನಡೆಸಲಾಯಿತು.



- ಸಾಮೂಹಿಕ ಸತ್ಯನಾರಾಯಣಸ್ವಾಮಿ ಪೂಜೆಯನ್ನು ಆಚರಿಸಲಾಯಿತು.

**ರಾ.ವಿ.ಕೇ. ಹಗರಿಬೊಮ್ಮನಹಳ್ಳಿಯಲ್ಲಿ**

- ವಿದ್ಯಾರ್ಥಿನಿಲಯದಿಂದ ಕುಟುಂಬ ಪ್ರಭೋಧನ ಕಾರ್ಯಕ್ರಮ
- ಹೆರಿಟೇಜ್ ಫೆಸ್ಟ್



- ಪ್ರಾಂತೀಯ ಮಾತೃಭಾರತೀ ಸಮಾವೇಶ
- ಸಂವರ್ಧಿನೀ – ಶಾರೀರಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**ರಾ.ವಿ.ಕೇ. ಧಾರವಾಡದಲ್ಲಿ**

- ವಿದ್ಯಾಭಾರತಿ ರಾಷ್ಟ್ರೀಯ ಮಟ್ಟದ ಥ್ರೋಬಾಲ್ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.




- ಜಮಗೋಡಿನ ಸುತ್ತ ಕೃತಿಯ ಲೋಕಾರ್ಪಣೆ ಕಾರ್ಯಕ್ರಮ
- ಆಧ್ಯಾತ್ಮ ಪರ್ವ

- ಬಡಾಖೇಲ್
- ಸೃಜನ್ ಕಾರ್ಯಕ್ರಮ
- ಬಾಹ್ಯಾಕಾಶ ತಂತ್ರಜ್ಞಾನ ಹಾಗೂ ಚಂದ್ರಯಾನ
- 3 ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

**ರಾ.ವಿ.ಕೆ. ಬನಶಂಕರಿಯಲ್ಲಿ**

- ಸೈಕಲ್ ಹಾಗೂ ಕಾಲ್ನಡಿಗೆ ಮೂಲಕ ಜಾಥಾ ನಡೆಸಿ ನಮ್ಮ ನಡಿಗೆ ಪರಿಸರದ ಕಡೆಗೆ ಎಂಬ ಜಾಗೃತಿ ಮೂಡಿಸಲಾಯಿತು.
- 34ನೇ ರಾಷ್ಟ್ರೀಯ ಮಟ್ಟದ ಈಜುಸ್ಪರ್ಧೆಯನ್ನು ಆಯೋಜಿಸಲಾಯಿತು.

**ರಾಷ್ಟ್ರೋತ್ಸವ ಆಚರಣೆ**

- ಪ್ರಿ ಕೆ.ಜಿ.ಯಿಂದ 1ನೇ ತರಗತಿಯ ವರೆಗೆ 'ಸಂಸ್ಕೃತಿ–ಸಂಭ್ರಮ' ಮತ್ತು
- 2ರಿಂದ 5ನೇ ತರಗತಿಯ ವರೆಗೆ 'ಜೈ ಶ್ರೀರಾಮ್' ಹಾಗೂ
- 6ರಿಂದ 12ನೇ ತರಗತಿಯ ವರೆಗೆ 'ಕರ್ನಾಟಕ ಸುವರ್ಣ ಸಂಭ್ರಮ' ಎನ್ನುವ ಶೀರ್ಷಿಕೆಯಡಿಯಲ್ಲಿ ರಾಷ್ಟ್ರೋತ್ಸವಗಳು ನಡೆದವು.



**ರಾ.ವಿ.ಕೇ. ದಾವಣಗೆರೆಯಲ್ಲಿ**

- ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ವತಿಯಿಂದ ಶ್ರೀ ಭಗವದ್ಗೀತಾ ಅಭಿಯಾನ 2023 ಅನ್ನು ನಡೆಸಲಾಯಿತು.



## ತರಬೇತಿ ಕಾರ್ಯಾಗಾರಗಳು:

- ಪ್ರತಿವರ್ಷದಂತೆ ಮೇ, ಜುಲೈ, ಅಕ್ಟೋಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಶಿಕ್ಷಕರ ಪುನಶ್ಚೇತನ ಶಿಬಿರಗಳು ಯಶಸ್ವಿಯಾಗಿ ನಡೆದವು.
- ಆಗಸ್ಟ್ 12ರಂದು ಸಿ.ಬಿ.ಎಸ್.ಇ. ಬೆಂಗಳೂರು ಶಾಲೆಗಳ ಬೋಧಕೇತರ



ಸಿಬ್ಬಂದಿಗಳ ಕಾರ್ಯಾಗಾರ ಆಯೋಜಿಸಲಾಗಿತ್ತು.



- 10.6.23ರಂದು ರಾ.ವಿ.ಕೇ. ದಾವಣಗೆರೆಯಲ್ಲಿ ನಡೆದ ಕಲಾಂತರ್ಗತ ತರಬೇತಿ.
- 15.8.23ರಂದು ರಾ.ವಿ.ಕೇ. ದಾವಣಗೆರೆಯಲ್ಲಿ ನಡೆದ ಲರ್ನಿಂಗ್ ಔಟ್‌ಕಮ್ ತರಬೇತಿ.



- 15.8.23ರಂದು ರಾ.ವಿ.ಕೇ. ರಾಮಮೂರ್ತಿ ನಗರದಲ್ಲಿ ಸಮಾಜ ವಿಜ್ಞಾನ ಶಿಕ್ಷಕರ ರೇಡಿಯೆಂಟ್ ಭಾರತ್ ವ್ಯಯದ ಕಾರ್ಯಾಗಾರ.
- ಪ್ರಶ್ನೆಪತ್ರಿಕೆ ಮಾದರಿ ಮತ್ತು ನೀಲನಕ್ಷೆ ತರಬೇತಿ.



- ವಿದ್ಯಾಭಾರತಿಯಿಂದ ಮೈಸೂರಿನಲ್ಲಿ ಆಯೋಜಿಸಲ್ಪಟ್ಟ ಸಂಸ್ಕೃತ ಶಿಕ್ಷಕರ ಕಾರ್ಯಾಗಾರ ನಡೆಯಿತು.
- 21.12.2023ರಂದು ಗಣಿತ ಶಿಕ್ಷಕರಿಗೆ 'ಸಂಕಲನಾತ್ಮಕ ಪರೀಕ್ಷೆ' ಎಂಬ ವಿಷಯದಡಿ ಶ್ರೀಮತಿ ಶ್ರೀದೇವಿಯವರಿಂದ ತರಬೇತಿ ಕಾರ್ಯಾಗಾರ ನಡೆಯಿತು.
- ಪ್ರಧಾನಾಚಾರ್ಯರಿಗೆ ಸಿ.ಬಿ.ಎಸ್.ಇ. ವತಿಯಿಂದ ಮೂರು ದಿನಗಳ 'learning transfermation' ಕಾರ್ಯಾಗಾರ.

## ಗಣ್ಯರ ಭೇಟಿ:

**ರಾ.ವಿ.ಕೇ. ಬನಶಂಕರಿ ಶಾಲೆ**

- ಸ್ವಾತಂತ್ರ್ಯ ದಿನಾಚರಣೆಗೆ ವಿನೋದ್ ಎಂ. ಸೋಲಬೈ ಅವರು ಆಗಮಿಸಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೊಂದಿಗಿನ ಸಮರ್ಪಣಾಭಾವವನ್ನು ಶ್ಲಾಘಿಸಿದರು.
- ಅಂತರಾಷ್ಟ್ರೀಯ ಯೋಗ ದಿನಾಚರಣೆಯಂದು ಬನಶಂಕರಿ ಶಾಲೆಗೆ ಪೂರ್ಣಿಮಾ ರಘುನಾಥ್

ಅವರು ಆಗಮಿಸಿ 'ವಸುಧೈವ ಕುಟುಂಬಕಂ' ಎನ್ನುವ ಕಾಳಿದಾಸನ ಸೂಕ್ತಿಗೆ ಈ ಸಂಸ್ಥೆ ನೂರಕ್ಕೆ ನೂರು ಪ್ರತಿಶತ ನ್ಯಾಯ ಒದಗಿಸುತ್ತಿದೆ ಎಂದು ಶ್ಲಾಘಿಸಿದರು.

**ರಾ.ವಿ.ಕೇ. ಧಾರವಾಡ**

- ಶ್ರೀ ಬಸವಪ್ರಭು ಜಿರ್ಲಿ, ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕರು (CMDR), ಶ್ರೀ ಎಂ.ಎನ್. ಹೆಗಡೆ – ಶಿಕ್ಷಣ ತಜ್ಞರು, ಶ್ರೀ ಶ್ರೀಪತಿ, ಉಪಾಧ್ಯಕ್ಷರು ವಿದ್ಯಾಭಾರತಿ ಕರ್ನಾಟಕ, ಡಾ. ಜ್ಯೋತಿಶಂಕರ, ಪ್ರಾಧ್ಯಾಪಕರು (KSOU), ಇವರುಗಳು ವಿವಿಧ ಕಾರ್ಯಕ್ರಮಗಳಲ್ಲಿ ಅತಿಥಿಗಳಾಗಿ ಆಗಮಿಸಿದ್ದರು.

**ರಾ.ವಿ.ಕೇ. ಹಗರಿಬೊಮ್ಮನಹಳ್ಳಿ**

- 14.6.23ರಂದು ಅಕ್ಷರಾಭ್ಯಾಸ ಕಾರ್ಯಕ್ರಮಕ್ಕೆ ಕೂಡ್ಲಗಿ ಮಠದ ಸ್ವಾಮಿಜೀಗಳು ಅಗಮಿಸಿದ್ದರು.

**ಜೆ.ಜಿ.ಆರ್.ವಿ.ಕೆ. ರಾಮಮೂರ್ತಿ ನಗರ**

- ಸಂಕಲ್ಪ ದಿನದಂದು ಶ್ರೀ ಜಗಪತಿ ಝಾ, ನಿರ್ದೇಶಕರು ಹಾಗೂ ಯೋಜನಾ ಮುಖ್ಯಸ್ಥರು, ಜೆ.ಆರ್.ಪಿ.–ಸಿ.ಜಿ.ಎಲ್., ಆಗಮಿಸಿದ್ದರು.
- ರಥಸಪ್ತಮಿಯಂದು ಶ್ರೀ ಜಿ.ಎನ್. ಕೃಷ್ಣಮೂರ್ತಿ, ಅಧ್ಯಕ್ಷರು, ಕರ್ನಾಟಕ ಕ್ರೀಡಾ ಸಂಸ್ಥೆ ಇವರು ಆಗಮಿಸಿದ್ದರು.
- ಪ್ರತಿಭಾ ಪ್ರದರ್ಶನ – ರಾಮನ್ ವಿಜ್ಞಾನಿಗಳು, ಚಂದ್ರಯಾನ ಮಿಷನ್, ಅನ್ವೇಷಣೆ – ಡಾ. ನಾರಾಯಣ, ಪದ್ಮಶ್ರೀ ಪುರಸ್ಕೃತರು ಇವರುಗಳು ಕಾರ್ಯಕ್ರಮಕ್ಕೆ ಆಗಮಿಸಿರುತ್ತಾರೆ.

**ರಾ.ವಿ.ಕೇ. ಅರ್ಕಾವತಿ**

- ಸ್ವಾತಂತ್ರ್ಯ ದಿನಾಚರಣೆಗೆ ನಿವೃತ್ತ ವಿಂಗ್ ಕಮಾಂಡರ್ ಎ.ಪಿ. ಚೆಲುವನ್ ಅವರು ಆಗಮಿಸಿದ್ದರು.
- ಕರ್ನಾಟಕ ರಾಜ್ಯೋತ್ಸವಕ್ಕೆ ನಿವೃತ್ತ ವಿಂಗ್ ಕಮಾಂಡರ್ ಭ.ರಾ. ವಿಜಯಕುಮಾರ್ (ಕವಿಗಳು ನಾಟಕಕಾರರು ಹಾಗೂ ಕಲಾವಿದರು) ಅವರು ಆಗಮಿಸಿದ್ದರು.
- ಗಣರಾಜ್ಯೋತ್ಸವಕ್ಕೆ ಜಿ.ಪಿ. ಕ್ಯಾಪ್ಟನ್ ಪ್ರಭಾತ್ ಕುಮಾರ್ ಅವರು ಆಗಮಿಸಿದ್ದರು.
- ಕ್ರೀಡೋತ್ಸವಕ್ಕೆ ಡಾ. ಸಿಂಧು ಭರತ್ (ರಾಷ್ಟ್ರೀಯ ಹಾಕಿ ಆಟಗಾರ್ತಿ) ಆಗಮಿಸಿದ್ದರು.
- ರಾಷ್ಟ್ರೋತ್ಸವಕ್ಕೆ ಅಜಿತ್ ಹನುಮಕ್ಕನವರ್ (ಸಂಪಾದಕರು, ಏಷ್ಯಾನೆಟ್ ಸುವರ್ಣ ನ್ಯೂಸ್) ಅತಿಥಿಗಳಾಗಿ ಆಗಮಿಸಿದ್ದರು.

**ರಾ.ವಿ.ಕೆ. ಶ್ರೀನಗರ, ಮೈಸೂರು**

- ಪೇಜಾವರ ಶ್ರೀಗಳು ಹಾಗೂ ರಾಮಚಂದ್ರ ರಾಜೇ ಅರಸ್ (ಡಿ.ಡಿ.ಪಿ.ಐ) ಮತ್ತು ಡಾ. ಎನ್. ಚಂದ್ರಶೇಖರ್ (ಸಿ.ಇ.ಒ, ಆದಿತ್ಯ ಆಸ್ಪತ್ರೆ) ಇವರುಗಳು ಕಾರ್ಯಕ್ರಮಕ್ಕೆ ಆಗಮಿಸಿದ್ದರು.

**ರಾ.ವಿ.ಕೇ. ದಾವಣಗೆರೆ**

- ಶ್ರೀ ಅಶ್ವಿನಿ ವೈಷ್ಣವ್, ಕೇಂದ್ರ ರೈಲ್ವೆ ಸಚಿವರು
- ಶ್ರೀ ಮನ್ಸುಖ್ ಮಾಂಡವೀಯ, ಕೇಂದ್ರ ಆರೋಗ್ಯ ಸಚಿವರು
- ಶ್ರೀ ಭಾಸ್ಕರ್ ಟಿ.ಎಂ., ಕರ್ನಾಟಕ ಜನಪದ ವಿಶ್ವವಿದ್ಯಾಲಯದ ಕುಲಪತಿಗಳು
- ಶ್ರೀ ಎಸ್.ಎಂ. ಕೌಲಾಪುರೆ, ಎಸ್.ಪಿ., ಲೋಕಾಯುಕ್ತ, ದಾವಣಗೆರೆ
- ಶ್ರೀ ಕಂಬಾರ್, ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿಗಳು

## ವರ್ಷಾವಧೀ ಕಾರ್ಯಕಲಾಪಗಳು:

- ಅಖಂಡ ಭಾರತ ಸಂಕಲ್ಪ ದಿನಾಚರಣೆ
- ಗಣೇಶೋತ್ಸವ
- ಉತ್ಸವ ಭಾರತೀ ಕಾರ್ಯಕ್ರಮಗಳು (ನಾಗರ ಪಂಚಮಿ, ನವರಾತ್ರಿ, ರಥಸಪ್ತಮಿ, ಮಹಾಶಿವರಾತ್ರಿ, ಯುಗಾದಿ, ಮಕರ ಸಂಕ್ರಾಂತಿ, ಹೋಳಿಹಬ್ಬ, ಇತ್ಯಾದಿ)
- ಸಪ್ತಾಹಗಳು: ಹಿಂದಿ ಸಪ್ತಾಹ, ಸಂಸ್ಕೃತ ಸಪ್ತಾಹ, ಸ್ವದೇಶೀ ಸಪ್ತಾಹ, ವಿಜ್ಞಾನ ಸಪ್ತಾಹ, ಗಣಿತ ಸಪ್ತಾಹಗಳನ್ನು ಆಚರಿಸಲಾಯಿತು.
- ಮಹಾನ್ ಸಾಧಕರ ಜಯಂತಿಗಳು.

## ಸೇವಾ ಕಾರ್ಯಕ್ರಮಗಳು:

- ಸುತ್ತಮುತ್ತಲ ಸರ್ಕಾರೀ ಶಾಲೆಗಳಲ್ಲಿ ಯೋಗಶಿಕ್ಷಣ, ಸಂಗೀತ, ಕಥಾವಾಚನ, ನೃತ್ಯ ಇತ್ಯಾದಿ ಹೇಳಿಕೊಡುವುದರ ಮೂಲಕ ಮಕ್ಕಳಲ್ಲಿ ಪಠ್ಯೇತರ ಅಭಿಮಾನ ಮೂಡಿಸಲಾಯಿತು.
- ರಾ.ವಿ.ಕೇ. ಅರ್ಕಾವತಿಯಲ್ಲಿ ಸೇವಾ ಪ್ರಕಲ್ಪದ ಅಡಿಯಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಉಚಿತ ರೋಗ ನಿರ್ಣಯ ಪರೀಕ್ಷೆಯನ್ನು ಮಾಡಿ ಪ್ರಮಾಣಪತ್ರವನ್ನು ನೀಡಲಾಯಿತು. ಹಾಗೂ ರಾಷ್ಟ್ರೋತ್ಥಾನ ಸಾಹಿತ್ಯದ 6 ಹೊಸ ಪುಸ್ತಕಗಳ ಮರು ಬಿಡುಗಡೆ ಮಾಡಲಾಯಿತು.
- ಸೇವಾ ಪ್ರಕಲ್ಪದ ಅಡಿಯಲ್ಲಿ ಸರ್ಕಾರೀ ಶಾಲಾ ಶಿಕ್ಷಕರಿಗೆ 3 ಸುತ್ತಿನ ಪ್ರಶಿಕ್ಷಣ ಭಾರತೀ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.
- ರಾ.ವಿ.ಕೇ. ಧಾರವಾಡದಲ್ಲಿ ಮನೆಪಾಠದಲ್ಲಿ ಏಕಾತ್ಮಕ ಸ್ತೋತ್ರದ ಬೋಧನೆ, ಸರ್ಕಾರೀ ಶಾಲಾ ಮಕ್ಕಳಿಗೆ ಉಚಿತ ನೇತ್ರ ಚಿಕಿತ್ಸೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

# ಪ್ರಶಿಕ್ಷಣಭಾರತಿ
# ಶಿಕ್ಷಕರ ಪ್ರಶಿಕ್ಷಣ ಪ್ರಕಲ್ಪ





- 26–07–2021ರಂದು ಪ್ರಶಿಕ್ಷಣಭಾರತೀ ಪ್ರಕಲ್ಪವು ಪ್ರಾರಂಭವಾಯಿತು.
- ರಾಜ್ಯದ ಎಲ್ಲ ಜಿಲ್ಲೆಗಳ ಪ್ರತಿ ತಾಲ್ಲೂಕುಗಳ ಖಾಸಗಿ ಶಾಲೆಗಳ ಶಿಕ್ಷಕರಿಗೆ ತರಬೇತಿ ಕಾರ್ಯಗಾರಗಳ ಆಯೋಜನೆ ಹಾಗೂ
- ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಪನ್ಯಾಸಗಳ ಆಯೋಜನೆಯು ಈ ಪ್ರಕಲ್ಪದ ಚಟುವಟಿಕೆಗಳು

## ಉದ್ದೇಶ:

- ಶಿಕ್ಷಕರಲ್ಲಿ ಭಾರತೀಯ ಸಂಸ್ಕೃತಿ, ಚಿಂತನೆ ಹಾಗೂ ಜ್ಞಾನ ಪರಂಪರೆಯ ದೃಷ್ಟಿಕೋನವನ್ನು ವಿಕಸಿತಗೊಳಿಸುವುದು ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸ.



## ಕ್ರಮಿಸಿರುವ ಮೈಲುಗಲ್ಲುಗಳು:

- ಪ್ರಶಿಕ್ಷಣ ವರ್ಗಗಳು – 165
- ಶಿಕ್ಷಕರ ಸಂಖ್ಯೆ – 7303
- ಉಪನ್ಯಾಸಗಳು – 183
- ವಿದ್ಯಾರ್ಥಿಗಳ ಸಂಖ್ಯೆ – 22,762
- ಶಾಲೆಗಳ ಸಂಪರ್ಕ – 944
- ಕಾಲೇಜುಗಳ ಸಂಪರ್ಕ– 612
- ಸಂಪನ್ಮೂಲ ವ್ಯಕ್ತಿಗಳ ಜೋಡಣೆ– 135
- ತಾಲ್ಲೂಕು ಸಮಿತಿ ಸದಸ್ಯರ ಜೋಡಣೆ – 359
- ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಹಿರಿಯರ ಭೇಟಿ – 322





## ಕಾರ್ಯಕ್ರಮಗಳು:

- ತಾಲ್ಲೂಕು ಸಮಿತಿ ಸದಸ್ಯರ ಸಮಾವೇಶ
- ಶೈಕ್ಷಣಿಕ ಸಹಮಿಲನ





## ತರಬೇತಿ ಕಾರ್ಯಾಗಾರಗಳು:

- ಜಿಲ್ಲಾ ಸಂಯೋಜಕರ ತರಬೇತಿ ಕಾರ್ಯಾಗಾರ
- ಸಂಪನ್ಮೂಲ ವ್ಯಕ್ತಿಗಳ ಕಾರ್ಯಾಗಾರ
- ಸಂಪನ್ಮೂಲ ವ್ಯಕ್ತಿಗಳ ಚಿಂತನಾ ಬೈಠಕ್
- ಸಂಪನ್ಮೂಲ ವ್ಯಕ್ತಿಗಳ ಆನ್ಲೈನ್ ಉಪನ್ಯಾಸಗಳು

## ವರ್ಷದ ಸಾಧನೆ:

- 165 ಪ್ರಶಿಕ್ಷಣ ವರ್ಗಗಳ ಆಯೋಜನೆಯ ಮೂಲಕ 7303 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.
- 22,762 ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ವಿಚಾರಗಳು ಮತ್ತು ಸಂಕಲ್ಪನಾ – 2047 ಕುರಿತು 183 ಉಪನ್ಯಾಸಗಳನ್ನು ಆಯೋಜಿಸಲಾಗಿದೆ.
- ಸ್ಥಳೀಯವಾಗಿ ಪ್ರಕಲ್ಪದ ಚಟುವಟಿಕೆಗಳೊಂದಿಗೆ 135 ಸಂಪನ್ಮೂಲ ವ್ಯಕ್ತಿಗಳನ್ನು ಜೋಡಿಸಿಕೊಳ್ಳಲಾಗಿದೆ.
- ಚಟುವಟಿಕೆಗಳ ವಿಸ್ತಾರಕ್ಕಾಗಿ











ತಾಲ್ಲೂಕುವಹಿ ಸಮಿತಿಗಳ ರಚನೆಯಾಗಿದ್ದು, 359 ಸದಸ್ಯರು ಪ್ರಕಲ್ಪದ ಚಟುವಟಿಕೆಗಳಿಗೆ ಸಹಕಾರ ನೀಡುತ್ತಿದ್ದಾರೆ.



## ಉಲ್ಲೇಖನೀಯ ಹೇಳಿಕೆಗಳು:

- "ಪ್ರಶಿಕ್ಷಣ ವರ್ಗದಲ್ಲಿ ಅವಧಿಗಳನ್ನು ತೆಗೆದುಕೊಳ್ಳುವ ಸಂಪನ್ಮೂಲ ವ್ಯಕ್ತಿಗಳು ತಮ್ಮ ಸಾಮರ್ಥ್ಯ ವರ್ಧನೆಗಾಗಿ ಹೆಚ್ಚಿನ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ಸಿಕ್ಕಿದೆ"
  **ಶ್ರೀ ಶಿವಪುತ್ರಪ್ಪ,** ಉಪನ್ಯಾಸಕರು
- "ಪ್ರಶಿಕ್ಷಣ ವರ್ಗಗಳಿಂದ ಶಿಕ್ಷಕರ ಗುರುತರ ಜವಾಬ್ದಾರಿ ಏನು ಎಂಬುದರ ಅರಿವು ಉಂಟಾಗಿದೆ"
  **ಶ್ರೀಮತಿ ವಿಶಾಲಾಕ್ಷಿ,** ಶಿಕ್ಷಕರು, ಹಾವೇರಿ







## ಮುಂದಿನ ಕಾರ್ಯ ವಿಸ್ತಾರ:

- 500 ಹೆಚ್ಚುವರಿ ಶಾಲೆಗಳ ಸಂಪರ್ಕ
- 25 ಹೆಚ್ಚುವರಿ ತರಬೇತಿ ಕಾರ್ಯಕ್ರಮಗಳು
- 25 ಹೆಚ್ಚುವರಿ ಸಂಪನ್ಮೂಲ ವ್ಯಕ್ತಿಗಳ ಜೋಡಣೆ
- 500 ಹೆಚ್ಚುವರಿ ಶಿಕ್ಷಕರಿಗೆ ತರಬೇತಿ



# ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪ



- ರಾಷ್ಟ್ರೋತ್ಥಾನ ಸಂಸ್ಥೆಯ ಎಲ್ಲ ಚಟುವಟಿಕೆಗಳು ವ್ಯವಸ್ಥಿತವಾಗಿ ನಡೆಯುತ್ತಿದ್ದು ಸಮಾಜ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.
- ಸಂಸ್ಥೆಯ ಮುಂದಿನ ಯೋಜನೆಗಳು, ಹೊಸ ಚಟುವಟಿಕೆಗಳು, ಸಮಾಜದ ಆಶಯಗಳು ಹಾಗೂ ಸಂಸ್ಥೆಯ ವಿಸ್ತಾರದ ವೇಗದ ಪರಿಣಾಮವಾಗಿ ಹೊಸ ಹೊಸ ಸವಾಲುಗಳು ಎದುರಾಗುತ್ತಿರುತ್ತವೆ.
- ಅವುಗಳನ್ನು ಯಶಸ್ವಿಯಾಗಿ ಎದುರಿಸುವ ನಿಟ್ಟಿನಲ್ಲಿ ಸಂಸ್ಥೆಯ ಎಲ್ಲ ಕಾರ್ಯವಿಧಾನಗಳ ನಿರಂತರ ಸುಧಾರಣೆ ಆಗಬೇಕು ಹಾಗೂ ಸಂಸ್ಥೆಯ ಕಾರ್ಯವೈಖರಿ ವೃತ್ತಿಪರತೆಯತ್ತ ಸಾಗಬೇಕಾಗುತ್ತದೆ.
- ಇವುಗಳನ್ನು ಗಮನಿಸಿ ಮಾರ್ಚ್ 2021ರಲ್ಲಿ ಗುಣಮಟ್ಟ ಮತ್ತು ವ್ಯವಸ್ಥೆ ಪ್ರಕಲ್ಪವನ್ನು ಅಧಿಕೃತವಾಗಿ ಆರಂಭಿಸಲಾಯಿತು.



## ಉದ್ದೇಶ:

- ಪ್ರಕಲ್ಪದ ಮೂಲ ಉದ್ದೇಶ ಸಂಸ್ಥೆಯ ಕಾರ್ಯಕರ್ತರಿಗೆ ಸಂಸ್ಥೆ ಹಾಗೂ ಪ್ರಕಲ್ಪ ವ್ಯವಸ್ಥೆಯ ನಿರಂತರ ಸುಧಾರಣೆ ವಿಷಯದಲ್ಲಿ ಬೆಂಬಲ ಹಾಗೂ ಮಾರ್ಗದರ್ಶನ ಕೊಡುವುದು.
- ಇದು ರಾಷ್ಟ್ರೋತ್ಥಾನ ಪರಿಷತ್ ಹಾಗೂ ಅಂಗಸಂಸ್ಥೆಗಳ ಎಲ್ಲ ಪ್ರಕಲ್ಪ ಮತ್ತು ಶಾಲೆಗಳನ್ನು ಒಳಗೊಂಡಿದೆ.

## ಪ್ರಸ್ತುತ ವರ್ಷ 2023–24ಕ್ಕೆ ಮಾಡಿಕೊಂಡ ಯೋಜನೆ ಮತ್ತು ಕಾರ್ಯಸಾಫಲ್ಯ:

| ಚಟುವಟಿಕೆಗಳು | ಗುರಿ | ಕಾರ್ಯಸಾಫಲ್ಯ |
|---|---|---|
| ಸಂಸ್ಥೆಮಟ್ಟದ ಹಾಗೂ ಗುರುತಿಸಿರುವ ಪ್ರಕಲ್ಪಗಳ SOPಗಳನ್ನು ಸಿದ್ಧಪಡಿಸುವುದು | 6 ಪ್ರಕಲ್ಪಗಳು | 6 ಪ್ರಕಲ್ಪಗಳು |
| ಪ್ರಕಲ್ಪ ಕೈಪಿಡಿ ಸಿದ್ಧಪಡಿಸುವುದು | 35 | 32 |
| ಉನ್ನತಿ – ಶಾಲೆಗಳ ಪ್ರಕ್ರಿಯೆ ಸುಧಾರಣೆ ಯೋಜನೆ (ಕಾರ್ಯ ವಿಧಾನಗಳ ಮೌಲ್ಯಮಾಪನ) | 4 ಆಂತರಿಕ<br>8 ಬಾಹ್ಯ | 4 ಆಂತರಿಕ<br>4 ಬಾಹ್ಯ |
| CBSE SQAA Self-assessment | 3 | 6 |
| ಫಲಾನುಭವಿಗಳ ಸಂತೃಪ್ತಿ ಸಮೀಕ್ಷೆ | 4 ಪ್ರಕಲ್ಪಗಳು | 5 ಪ್ರಕಲ್ಪಗಳು |
| ಸಿದ್ಧಪಡಿಸಿದ SOPಗಳ ಅರಿವು ಹಾಗೂ ಅನುಷ್ಠಾನ ತರಬೇತಿ | 14 | 16 |

| ಚಟುವಟಿಕೆಗಳು | ಗುರಿ | ಕಾರ್ಯಸಾಫಲ್ಯ |
|---|---|---|
| ಪ್ರಕಲ್ಪ ವ್ಯವಸ್ಥೆ ಆಡಿಟ್ ಮಾಡುವುದು (Process Audits) | 40 Internal Audits | 48 Internal Audits |
| ಗುಣಮಟ್ಟಕ್ಕೆ ಸಂಬಂಧಿಸಿದ ಮಾಪನಗಳನ್ನು ಗುರುತಿಸುವುದು | 8 | 8 |
| ಪ್ರೊಸೆಸ್ ಆಟೋಮೇಷನ್ (Process Automation) | 3 ಪ್ರಕ್ರಿಯೆಗಳು | 3 ಪ್ರಕ್ರಿಯೆಗಳು |

## ತರಬೇತಿ ಕಾರ್ಯಾಗಾರಗಳು:

- **ಆಂತರಿಕ ಲೆಕ್ಕಪತ್ರ ತರಬೇತಿ**: ವಿವಿಧ ಪ್ರಕಲ್ಪಗಳಿಂದ ಆಯ್ದ 77 ಕಾರ್ಯಕರ್ತರಿಗೆ ಆಂತರಿಕ ಲೆಕ್ಕಪತ್ರ ತರಬೇತಿ ನೀಡಲಾಗಿದೆ.
- **ಶಾಲಾ ಗುಣಮಟ್ಟ ಮೌಲ್ಯಮಾಪಕರ ತರಬೇತಿ:** (SMF-SESQ): ರಾಷ್ಟ್ರೋತ್ಥಾನ ವಿದ್ಯಾಲಯ ಮಮ್ಮಿಗಟ್ಟಿ, ಶಾರದಾ ವಿದ್ಯಾಮಂದಿರ ಹಗರಿಬೊಮ್ಮನಹಳ್ಳಿ ಹಾಗೂ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಮೈಸೂರು, ಶ್ರೀನಗರ ಶಾಲಾ ಕೋರ್ ಟೀಮ್ ಸದಸ್ಯರಿಗೆ ವಿದ್ಯಾಭಾರತೀ SESQ - ಸ್ವಯಂ ಮೌಲ್ಯಮಾಪನ ಮಾಡುವ ವಿಧಾನವನ್ನು ಕುರಿತು ತರಬೇತಿ ನೀಡಲಾಯಿತು.
- SOP Awareness and Process Trainings: ವಿವಿಧ ರಾಷ್ಟ್ರೋತ್ಥಾನ ಪ್ರಕಲ್ಪಗಳಲ್ಲಿ SOP Awareness ವಿವಿಧ ಪ್ರಮುಖ ಪ್ರಕ್ರಿಯೆ (process)ಗಳ ತರಬೇತಿ ನೀಡಲಾಯಿತು. 16 ತಂಡಗಳಲ್ಲಿ 800ಕ್ಕೂ ಹೆಚ್ಚು ಕಾರ್ಯಕರ್ತರಿಗೆ SOPಗಳ ಮಹತ್ತ್ವ ಹಾಗೂ ವಿವಿಧ ಕಾರ್ಯವಿಧಾನಗಳ ಬಗ್ಗೆ ತರಬೇತಿ ನೀಡಲಾಯಿತು.








## ವರ್ಷದ ಸಾಧನೆ:

- **ಮುಗಿಲು** – ರಾಷ್ಟ್ರೋತ್ಥಾನ ಪರಿಷತ್ ಇಂಟರನೆಟ್ ವೆಬ್‌ಸೈಟ್ ನಿರ್ವಹಣೆ: ರಾಷ್ಟ್ರೋತ್ಥಾನದ ಒಟ್ಟು 42 ಪ್ರಕಲ್ಪಗಳಿಗೆ ಸಂಬಂಧಿಸಿದ ಸುಮಾರು 290ಕ್ಕೂ ಹೆಚ್ಚು SOPಗಳು ಸಿದ್ಧವಾಗಿವೆ ಹಾಗೂ ಇದರ ನಿರ್ವಹಣೆ ಮುಗಿಲು ಇಂಟರ್ನೆಟ್‌ನಲ್ಲಿ ಆಗುತ್ತಿದೆ.
- **ವಾಡಿಕೆಯ ಆಂತರಿಕ ಪ್ರಕ್ರಿಯೆಯ ಪರಿಶೋಧನೆ** (Regular Internal Process Audit): ತರಬೇತಿ ಪಡೆದ ಕಾರ್ಯಕರ್ತರಿಂದ ಬೆಂಗಳೂರು ಸೇರಿದಂತೆ ಬಹುತೇಕ ಎಲ್ಲ ಸ್ಥಳಗಳಲ್ಲಿ ಇರುವ ರಾಷ್ಟ್ರೋತ್ಥಾನ ಪ್ರಕಲ್ಪಗಳ ಪರಿಶೋಧನೆ ಮಾಡಲಾಗಿದೆ. ಒಟ್ಟಾರೆ 48 ಆಂತರಿಕ ಆಯವ್ಯಯ ವರದಿ ಆಗಿದೆ. 22–23ರ ಸಾಲಿಗೆ ಹೋಲಿಸಿದರೆ ಸುಮಾರು 4 ಪಟ್ಟು ಹೆಚ್ಚು ಆಂತರಿಕ ಗುಣಮಟ್ಟ ಪರಿಶೋಧನೆ ಮಾಡಲಾಗಿದೆ.
- **ಫಲಾನುಭವಿಗಳ ಸಮೀಕ್ಷೆ:** ಯೋಗ ಪ್ರಕಲ್ಪ, ರಕ್ತಕೇಂದ್ರ, ಸಾಹಿತ್ಯ ಹಾಗೂ ರಾಷ್ಟ್ರೋತ್ಥಾನ ವಿದ್ಯಾಲಯ JGRV ಪ್ರಕಲ್ಪಗಳಲ್ಲಿ ಪ್ರತಿಕ್ರಿಯಾ (Feedback) ಸಮೀಕ್ಷೆ ಮಾಡಲಾಗಿದೆ.
- **ಶಾಲಾ ಗುಣಮಟ್ಟ ಸಂವರ್ಧಕ ವ್ಯವಸ್ಥೆ** (SESQ (System for Enrichment of School Quality) Assessments): ವಿದ್ಯಾಭಾರತೀ ಮಾನಕ ಪರಿಷತ್ SESQ ಸ್ಟ್ಯಾಂಡರ್ಡ್‌ಗೆ ಅನುಗುಣವಾಗಿ ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಯ ಕಾರ್ಯಕರ್ತರಿಗೆ ತರಬೇತಿ ಹಾಗೂ ಆಯ್ದ 4 ಶಾಲೆಗಳ ವ್ಯವಸ್ಥೆಯ ಸ್ವಯಂ ಮೌಲ್ಯಮಾಪನ ಮತ್ತು ಬಾಹ್ಯ ಮೌಲ್ಯಮಾಪನ ಮಾಡಲಾಗಿದೆ.
- ಪ್ರಕಲ್ಪ ಕೈಪಿಡಿ: 30ಕ್ಕೂ ಹೆಚ್ಚು ಪ್ರಕಲ್ಪಗಳು ಕೈಪಿಡಿ ಸಿದ್ಧಪಡಿಸಿವೆ.










## ಉಲ್ಲೇಖನೀಯ ಸಂಗತಿಗಳು:

IQA Management & Audit Reporting **ಅಪ್ಲಿಕೇಷನ್:** ಆಂತರಿಕ ಗುಣಮಟ್ಟ ಪರಿಶೋಧನೆಯ (Internal Quality Audits) ಯೋಜನೆ ಮತ್ತು ಪರಿಶೋಧನಾ ವರದಿಗಳ (Audit Reports) ನಿರ್ವಹಣೆ ಮಾಡಲು ಸಾಫ್ಟವೇರ್‌ಗಳ ಬಳಕೆ.





## ವರ್ಷಾವಧೀ ಕಾರ್ಯಕಲಾಪಗಳು:

- ಸಂಘಟನೆಯ ರಚನೆ, Organization Structure ಪಾತ್ರ ಹಾಗೂ ಜವಾಬ್ದಾರಿಗಳ ದಾಖಲಾತಿ
- ಕಾರ್ಯವಿಧಾನಗಳ ಚಟುವಟಿಕೆಗಳ ದಾಖಲೆ ಸಿದ್ಧಪಡಿಸುವುದು (Standard Operating Procedures)
- ಎಲ್ಲ ಪ್ರಕಲ್ಪಗಳ ಚಟುವಟಿಕೆಗಳ ಆಂತರಿಕ ತಪಾಸಣೆ ಹಾಗೂ ಕಾರ್ಯವಿಧಾನಗಳ ಮೌಲ್ಯಮಾಪನ (Internal process audits and assessments)
- ದಾಖಲೆಗಳ ನಿಯಂತ್ರಣ ಹಾಗೂ ಭಂಡಾರ ರಚನೆ (Document Repository)
- ಕಾರ್ಯಕರ್ತರಲ್ಲಿ ಗುಣಮಟ್ಟದ ಅರಿವು ಹೆಚ್ಚಿಸುವುದು.
- ಗುಣಮಟ್ಟಕ್ಕೆ ಸಂಬಂಧಿಸಿದ ಮಾಪನಗಳನ್ನು ಗುರುತಿಸುವುದು.
- ವ್ಯವಸ್ಥೆ ಅನುಷ್ಠಾನ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ತರಬೇತಿ.
- ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆಗಳ ಕಾರ್ಯ ಅಭಿವೃದ್ಧಿ.
- ಫಲಾನುಭವಿಗಳ ಸಮೀಕ್ಷೆ.

# ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ

**ರಾಜರಾಜೇಶ್ವರೀ ನಗರ, ಬೆಂಗಳೂರು**

scan to watch video



ರಾಷ್ಟ್ರೋತ್ಥಾನ ಆಸ್ಪತ್ರೆಗೆ ಗಣ್ಯಮಾನ್ಯರ ಭೇಟಿ

- ವೈದ್ಯಕೀಯ ಸೌಲಭ್ಯವು ಜನಸಾಮಾನ್ಯರಿಗೆ ಸುಲಭವಾಗಿ, ಕೈಗೆಟಕುವ ದರದಲ್ಲಿ ಲಭಿಸಬೇಕು.
- ಈ ಧ್ಯೇಯವನ್ನಿಟ್ಟುಕೊಂಡು ಡಿಸೆಂಬರ್ 5, 2022ರಂದು ರಾಷ್ಟ್ರೋತ್ಥಾನದ ಜಯದೇವ ಮೆಮೋರಿಯಲ್ ರಾಷ್ಟ್ರೋತ್ಥಾನ ಆಸ್ಪತ್ರೆ & ಸಂಶೋಧನಾ ಕೇಂದ್ರ ಪ್ರಕಲ್ಪವು ಪ್ರಾರಂಭಗೊಂಡಿತು.

## ಧ್ಯೇಯ:

- ಸಮಗ್ರ ಚಿಕಿತ್ಸಾ ವಿಧಾನದ ಮೂಲಕ ಮಾದರಿ ಕೇಂದ್ರವಾಗುವುದು: ಆಧುನಿಕ ವೈದ್ಯ, ಆಯುರ್ವೇದ, ಯೋಗ, ಹೋಮಿಯೋಪತಿ, ಹೀಗೆ ವಿವಿಧ ಪ್ರಕಾರಗಳ ಪ್ರಯೋಜನಗಳನ್ನು ಸಂಯೋಜಿಸಿ ಚಿಕಿತ್ಸೆ ಕೊಡುವುದು.
- ಜನರ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ನೈತಿಕ ವೈದ್ಯಕೀಯ ಅಭ್ಯಾಸ ಮತ್ತು ಸಂಶೋಧನೆ: ಅಗತ್ಯವಿರುವಷ್ಟೇ ಪರೀಕ್ಷೆ, ಚಿಕಿತ್ಸೆ, ಔಷಧೋಪಚಾರ, ಇತ್ಯಾದಿ.
- ಸ್ವಸ್ಥ–ಸುಸ್ಥಿರ ಸಮಾಜನಿರ್ಮಾಣಕ್ಕಾಗಿ ಜೀವನಶೈಲಿಯ ಬಗ್ಗೆ ಅರಿವು ಮೂಡಿಸಲು ಶಿಕ್ಷಣ: ಜೀವನಶೈಲಿ ಕ್ಲಿನಿಕ್ ಮೂಲಕ



- ಸಹಾನುಭೂತಿಯೊಂದಿಗೆ ಆರೈಕೆ ನೀಡಲು ಪ್ರೇರಿತ ಮತ್ತು ಮೌಲ್ಯ ಆಧಾರಿತ ತಂಡದ ನಿರ್ಮಾಣ

## ಕ್ರಮಿಸಿರುವ ಮೈಲುಗಲ್ಲುಗಳು:

ಆರಂಭಗೊಂಡ ಒಂದು ವರ್ಷದಲ್ಲೇ ಆಸ್ಪತ್ರೆಯಲ್ಲಿ ವಿಶ್ವದರ್ಜೆಯ ಸುಸಜ್ಜಿತ ಸೌಕರ್ಯಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ

1. ಒಳರೋಗಿಗಳ ಸೌಲಭ್ಯ
2. ಟ್ರಾಮಾ ಕೇರ್
3. ಫಾರ್ಮಾ ಸೌಲಭ್ಯ
4. ಎಂಡೋಸ್ಕೋಪಿ
5. ಸಂಶೋಧನಾ ಸೌಲಭ್ಯ
6. ರೆಡಿಯಾಲಜಿ ಸೇವೆ
7. ಡಯಾಲಿಸಿಸ್ ಯೂನಿಟ್
8. ಆಂಬ್ಯುಲೆನ್ಸ್

**ವಿಶೇಷ ಸೇವೆಗಳು:**

1. ಜನರಲ್ ಮೆಡಿಸಿನ್
2. ಜನರಲ್ ಸರ್ಜರಿ
3. ಗ್ಯಾಸ್ಟ್ರೋ ಸೈನ್ಸ್
4. ಆಬ್ಸ್ಟೆಟ್ರಿಕ್ಸ್ & ಗೈನಕಾಲಜಿ
5. ಪಿಡಿಯಾಟ್ರಿಕ್ಸ್ & ನಿಯೋನಾಟಾಲಜಿ
6. ಸೈಕಿಯಾಟ್ರಿ
7. ಆರ್ಥೋಪೆಡಿಕ್
8. ನ್ಯೂರೋ ಸೈನ್ಸ್
9. ಕಾರ್ಡಿಯಾಕ್ ಸೈನ್ಸ್
10. ಪಲ್ಮನಾಲಜಿ
11. ಎಂಡೋಕ್ರಿನಾಲಜಿ
12. ಆಂಕಾಲಜಿ
13. ಆಪ್ತಲ್ಮಾಲಜಿ
14. ಡೆಂಟಲ್ ಸೈನ್ಸ್
15. ಆಯುರ್ವೇದ
16. ಹೋಮಿಯೋಪತಿ
17. ಯೋಗ & ನ್ಯಾಚುರೋಪತಿ
18. ಇ.ಎನ್.ಟಿ.

**ಬೆಡ್‌ಗಳ ಸಂಖ್ಯೆ:**

1. ಜನರಲ್ ವಾರ್ಡ್ – 19 ಬೆಡ್
2. ಅರೆಖಾಸಗಿ – 72 ಬೆಡ್ (ಸೆಮಿ ಪ್ರೈವೇಟ್)
3. ತುರ್ತು ಚಿಕಿತ್ಸಾ ಘಟಕ (ಎಮರ್ಜೆನ್ಸಿ ವಾರ್ಡ್) – 11 ಬೆಡ್
4. ಖಾಸಗಿ ಘಟಕ (ಪ್ರೈವೇಟ್ ವಾರ್ಡ್) – 17 ಬೆಡ್
5. ಮೇಜರ್ ಆಪರೇಷನ್ ಥಿಯೇಟರ್ – 4
6. ಮೈನರ್ – 1
7. ಡಯಾಲಿಸಿಸ್ – 8 ಬೆಡ್
8. ಸಿಟಿ & ಇತರೇ ಡಯಾಗ್ನೋಸ್ಟಿಕ್ ಸೇವೆ
9. ಎಂಐಸಿಯು – 11 ಬೆಡ್
10. ಎಸ್‌ಐಸಿಯು – 4 ಬೆಡ್
11. ಸಿಸಿಯು – 5 ಬೆಡ್
12. ಪಿಐಸಿಯು – 4 ಬೆಡ್
13. ಎನ್‌ಐಸಿಯು – 8 ಬೆಡ್
14. ವಿಐಪಿ ಸ್ಯೂಟ್ – 2
15. ಆಂಬ್ಯುಲೆನ್ಸ್ – 2
16. ಕ್ಲಿನಿಕ್ ಆನ್ ವೀಲ್ಸ್ – 1

**ಅಂಕಿಅಂಶಗಳು:**

1. ಒಟ್ಟು ಹೊರರೋಗಿಗಳು – 20,000+
2. ಒಳರೋಗಿಗಳು – 1600+

## ಕಾರ್ಯಕ್ರಮಗಳು:

- **ವೈದ್ಯರ ದಿನ:** 1 ಜುಲೈ 2023ರಂದು ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ವೈದ್ಯರ ದಿನವನ್ನು ಆಚರಿಸಲಾಯಿತು. ಎನ್.ಎಂ.ಸಿ. ಮೆಡಿಕಲ್ ಅಸೆಸ್‌ಮೆಂಟ್ & ರೇಟಿಂಗ್ ಬೋರ್ಡ್‌ನ ಅಧ್ಯಕ್ಷರಾದ ಡಾ. ಬಿ. ಎನ್. ಗಂಗಾಧರ್, ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ನ ಕುಲಪತಿಗಳಾದ ಡಾ. ಎಂ. ಕೆ. ರಮೇಶ್ ಹಾಗೂ ಎಸ್–ವ್ಯಾಸ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ. ಆರ್. ರಾಮಕೃಷ್ಣ ಅವರು ರಾಷ್ಟ್ರೋತ್ಥಾನ ಆಸ್ಪತ್ರೆಯ ವೈದ್ಯರುಗಳನ್ನುದ್ದೇಶಿಸಿ ಮಾತನಾಡಿದರು.
- ಜೂನ್ 21ರಂದು ಅಂತಾರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು.








- ಒಬ್ಸ್ಟೆಟ್ರಿಕ್ಸ್ & ಪಿಡಿಯಾಟ್ರಿಕ್ಸ್ ಮೇಲೆ 'ಮಹಿಳೆ ಮತ್ತು ಮಕ್ಕಳ ಆರೋಗ್ಯದಲ್ಲಿ ತಡೆಗಟ್ಟುವ ತಂತ್ರಗಳು' ಸಿ.ಎಂ.ಇ.ಯನ್ನು ನಡೆಸಲಾಯಿತು. ಡಾ. ಲತಾ ವೆಂಕಟರಾಮನ್, ಡಾ. ಸ್ವರ್ಣರೇಖಾ ಭಟ್, ಡಾ. ಆನಂದ ಶಂಕರ್, ಡಾ. ಶೈಲಾ ಇವರುಗಳು ಸಿ.ಎಂ.ಇ.ಯನ್ನು ಉದ್ಘಾಟಿಸಿದರು.
- ರಾಷ್ಟ್ರೋತ್ಥಾನ ಆಸ್ಪತ್ರೆಯಲ್ಲಿ ಎಲ್ಲ ಹಬ್ಬಗಳನ್ನೂ ಸಡಗರ ಸಂಭ್ರಮಗಳಿಂದ ಆಚರಿಸಲಾಯಿತು.
- ಆರೋಗ್ಯದ ವಿಷಯವಾಗಿ ಮಾತುಕತೆ ಸಂವಾದ ನಡೆಸಲಾಯಿತು.
- ವಾರ್ಷಿಕ ದಿನಾಚರಣೆಯನ್ನು ನಡೆಸಲಾಯಿತು.






## ತರಬೇತಿ ಕಾರ್ಯಾಗಾರಗಳು:

- ಚಾಣಕ್ಯ ಯುನಿವರ್ಸಿಟಿ, ಯುವಕ ಸಂಘ ಮತ್ತು ಗುಡ್ ಶಫರ್ಡ್ ವಿದ್ಯಾರ್ಥಿಗಳಿಗೆ ಬೇಸಿಕ್ ಲೈಫ್ ಸಪೋರ್ಟ್ ತರಗತಿಗಳು ಮತ್ತು ಆನ್–ಹ್ಯಾಂಡ್ ತರಬೇತಿಯನ್ನು ನೀಡಲಾಯಿತು.



## ವರ್ಷಾವಧೀ ಕಾರ್ಯಕಲಾಪಗಳು:

- ಬೆಂಗಳೂರಿನ ಪ್ರತಿ ಸೇವಾವಸತಿಗಳಲ್ಲೂ ಪ್ರತಿದಿನ 'ಕ್ಲಿನಿಕ್ ಆನ್ ವೀಲ್ಸ್' ನಡೆಸಲಾಗುತ್ತಿದೆ. 4000+ ಇದರ ಫಲಾನುಭವಿಗಳಿದ್ದಾರೆ.



## ಸೇವಾ ಚಟುವಟಿಕೆಗಳು:

- ಶಾಲಾ ಮಕ್ಕಳ ಆರೋಗ್ಯ ಕಾಳಜಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಜ್ಞಾನಾಕ್ಷಿ ವಿದ್ಯಾಲಯ ಮತ್ತು ಲಲಿತ್ ಕ್ಯಾಸಲ್ ಇಂಟರ್‌ನ್ಯಾಶನಲ್ ಶಾಲೆಗಳಲ್ಲಿ 2 ಆರೋಗ್ಯ ಜಾಗೃತಿ ಅವಧಿಗಳನ್ನು ನಡೆಸಲಾಗಿದೆ.
- ಹಸಿರು ಪರಿಸರ ಜಾಗೃತಿ ಅಭಿಯಾನದ ನಿಮಿತ್ತ ಬಿಬಿಎಂಪಿ ಸಹಯೋಗದೊಂದಿಗೆ ಸ್ವಚ್ಛ ಅಭಿಯಾನವನ್ನು ನಡೆಸಲಾಗಿದೆ.
- 75 ಸ್ಥಳಗಳಲ್ಲಿ ಉಚಿತ ಮೆಡಿಕಲ್ ಕ್ಯಾಂಪ್ ನಡೆಸಲಾಗಿದ್ದು, 14,000+ ಫಲಾನುಭವಿಗಳಿದ್ದಾರೆ. ಅನಾಥಾಲಯ, ವೃದ್ಧಾಶ್ರಮ ಮತ್ತು ರಾಜರಾಜೇಶ್ವರಿ ನಗರದ ಸುತ್ತಮುತ್ತಲಿನ ಸ್ಥಳಗಳಲ್ಲಿ ನಡೆಸಲಾಗಿದೆ.
- ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

## ವರ್ಷದ ಸಾಧನೆ:

- ಆಸ್ಪತ್ರೆ ಉದ್ಘಾಟನೆಗೊಂಡ ಮೊದಲ ತಿಂಗಳಲ್ಲೇ 2500 ರೋಗಿಗಳಿಗೆ ಸೇವೆ ಒದಗಿಸಲಾಗಿದೆ.
- ಜನವರಿ 2023ರಲ್ಲಿ ಐಪಿ (ಒಳರೋಗಿಗಳ ವಿಭಾಗ) ಆರಂಭಿಸಿದ್ದು ಒಂದೇ ತಿಂಗಳಲ್ಲಿ 100+ ಒಳರೋಗಿಗಳಿಗೆ ಪ್ರವೇಶ ಒದಗಿಸಲಾಗಿದೆ.
- ಇಲ್ಲಿಯವರೆಗೆ 500+ ಮೇಜರ್ ಹಾಗೂ ಮೈನರ್ ಸರ್ಜರಿ ನಡೆಸಲಾಗಿದೆ.
- ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಬೇರೆಬೇರೆ ಸ್ಥಳಗಳಲ್ಲಿ ಉಚಿತ ಮೆಡಿಕಲ್ ಕ್ಯಾಂಪ್ ನಡೆಸಲಾಗಿದ್ದು, ಇದರಲ್ಲಿ ಅನಾಥಾಲಯ, ವೃದ್ಧಾಶ್ರಮ, ಮನೆಗಳು ಹಾಗೂ ಶಾಲೆಗಳನ್ನೊಳಗೊಂಡು 14,000 ಮಂದಿ ಇದರ ಫಲಾನುಭವಿಗಳಾಗಿದ್ದಾರೆ.



- ಕಾರ್ಮಿಕವರ್ಗದ ಲಾಭಕ್ಕಾಗಿ 'ಇವನಿಂಗ್ ಒಪಿಡಿ' ಸೇವೆ ಆರಂಭಿಸಲಾಗಿದೆ. ಸದ್ಯ ಜನರಲ್ ಮೆಡಿಸಿನ್, ಚರ್ಮರೋಗ ವಿಭಾಗ, ಪಲ್ಮನಾಲಜಿ, ಆರ್ಥೋಪೆಡಿಕ್, ಕಾರ್ಡಿಯಾಲಜಿ, ಪಿಡಿಯಾಟ್ರಿಕ್ಸ್, ಗೈನಿಕಾಲಜಿ & ಆಬ್ಸ್ಟೆಟ್ರಿಕ್ಸ್, ಮಾನಸಿಕ ರೋಗಿಗಳ ವಿಭಾಗಗಳ ಒಪಿಡಿ ಆರಂಭಗೊಂಡಿವೆ.
- ಅನೋ–ರೆಕ್ಟಲ್, ಹರ್ನಿಯಾ, ಲಿವರ್ ಕ್ಲಿನಿಕ್‌ಗಳು ವಾರಕ್ಕೊಮ್ಮೆ ಹಾಗೂ ಸಂಡೆ ಕ್ಲಿನಿಕ್‌ಗಳಂಥ ವಿಶೇಷ ಸೇವೆಗಳನ್ನು ಒದಗಿಸಲಾಗುತ್ತಿದೆ.
- ಆಗಸ್ಟ್ 18 2023ರಂದ ಕೀಮೋಥೆರಪಿ ವಾರ್ಡ್ ಹಾಗೂ ಐಪಿ ಫಾರ್ಮಸಿಯನ್ನು ಆರಂಭಿಸಲಾಗಿದೆ.
- ಆಗಸ್ಟ್ 2023ರಿಂದ ರೇಡಿಯಾಲಜಿ ಮತ್ತು ಸಂಶೋಧನಾ ವಿಭಾಗಗಳು ಆಸ್ಪತ್ರೆಯದ್ದೇ ಭಾಗವಾಗಿ ಕಾರ್ಯನಿರ್ವಹಿಸುತ್ತಿವೆ.
- 'ಕ್ಲಿನಿಕ್ ಫಾರ್ ಡಯಾಬಿಟೀಸ್' ಅನ್ನು ಫೆಬ್ರುವರಿ 2024ರಲ್ಲಿ ಆರಂಭಿಸಲಾಗಿದೆ.
- 'ಕ್ಲಿನಿಕ್ ಫಾರ್ ಮೆನೋಪಾಸ್' ಅನ್ನು ಮಾರ್ಚ್ 2024ರಲ್ಲಿ ಆರಂಭಿಸಲಾಗಿದೆ.
- 'ಫ್ರೀ ಮೆಡಿಕಲ್ ಕ್ಯಾಂಪ್'ಗಳನ್ನು ಸ್ಥಳೀಯರಿಗಾಗಿ ಆರಂಭಿಸಲಾಗಿದೆ.

- ಕಾರ್ಮಿಕರಿಗಾಗಿ 'ಸಂಡೆ ಸ್ಪೆಶಾಲಿಟಿ ಕನ್ಸಲ್ಟೇಶನ್' ಅನ್ನು ಆರಂಭಿಸಲಾಗಿದೆ.
- ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಆಂತರಿಕ ನೀತಿ ಸಮಿತಿಯನ್ನು ರಚಿಸಲಾಗಿದೆ.
- ಎರಡು ತಿಂಗಳಿನಿಂದ ಡಯಾಲಿಸಿಸ್ ಕೇಂದ್ರವು ರೋಗಿಗಳ ಹೆಚ್ಚಳವನ್ನು ಗಮನಿಸಿ ನಾಲ್ಕು ಶಿಫ್ಟ್‌ನಲ್ಲಿ ಕಾರ್ಯವನ್ನು ನಡೆಸಲಾರಂಭಿಸಿದೆ.
- ಸ್ವಾಸ್ಥ್ಯಭಾರತಿಯು ರೋಗಿಗಳಿಗೆ ಆರೋಗ್ಯಕರ ಜೀವನಶೈಲಿಯ ಕುರಿತಾಗಿ ಶಿಕ್ಷಣ ನೀಡಲಾರಂಭಿಸಿದೆ.

## ಉಲ್ಲೇಖನೀಯ ಸಂಗತಿಗಳು:

- ರಾಷ್ಟ್ರೋತ್ಥಾನ ಆಸ್ಪತ್ರೆಯು ಆರಂಭಗೊಂಡ ಒಂದೇ ವರ್ಷದಲ್ಲಿ ಎನ್.ಎ.ಬಿ.ಎಚ್. ಮಾನ್ಯತೆ ಪಡೆದಿದ್ದು, ಇದು ಹೆಗ್ಗಳಿಕೆಯ ಸಂಗತಿಯಾಗಿದೆ.

## ಉಲ್ಲೇಖನೀಯ ಹೇಳಿಕೆಗಳು:

- ರಾಷ್ಟ್ರೋತ್ಥಾನ ಆಸ್ಪತ್ರೆಯು ಆರ್.ಆರ್. ನಗರ ಸುತ್ತಮುತ್ತಲಿನ ಜನರಿಗೆ ಒಂದು ವರದಾನವಾಗಿದೆ. ವೈದ್ಯಕೀಯ ತುರ್ತಿಗಾಗಿ ಈ ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳಿಗೆ ಹಾಗೂ ಅವರ ಉಸ್ತುವಾರಿಯವರಿಗೆ ಇಲ್ಲಿ ತೋರುವ ಕಾಳಜಿ ಸಮಾಧಾನ ತರುತ್ತಿದೆ. ಅತ್ಯುತ್ತಮ ವೈದ್ಯರು, ಸಿಬ್ಬಂದಿ ಹಾಗೂ ಸಾಧನಗಳನ್ನು ಆಸ್ಪತ್ರೆ ಹೊಂದಿದೆ. ಆಸ್ಪತ್ರೆಯಲ್ಲಿನ ಸ್ವಚ್ಛತೆ ಮನಸ್ಸಿಗೆ ಸಮಾಧಾನ ಕೊಡುವಂತಿದೆ. ವೈದ್ಯರು ಹಾಗೂ ನರ್ಸ್‌ಗಳು ಸಹನೆಯಿಂದ ಎಲ್ಲವನ್ನೂ ತಿಳಿಸುತ್ತಾರೆ. ಜೇಬಿಗೂ ಹೊರೆಯಾಗದಂತಿದೆ ಹಾಗೂ ಅನವಶ್ಯಕ ಔಷಧಿಗಳನ್ನೂ ಕೊಡುವುದಿಲ್ಲ.
  **– ಶ್ರೀಮತಿ ಚೈತ್ರಾ ರಂಗಸ್ವಾಮಿ**
- ಈ ಭಾಗದಲ್ಲೇ ಅತ್ಯುತ್ತಮ ಆಸ್ಪತ್ರೆಗಳಲ್ಲಿ ಒಂದಾಗಿದೆ. ತುಂಬ ಸ್ವಚ್ಛವಾಗಿದೆ. ಇಲ್ಲಿ ಚಿಕಿತ್ಸೆಯು ನಮ್ಮ ಜೇಬಿಗೂ ಹೊರೆಯಾಗುವಂತಿಲ್ಲ. ವೈದ್ಯರುಗಳು ತುಂಬ ಚೆನ್ನಾಗಿದ್ದು ರೋಗಿಗಳ ಜೊತೆಗಿನ ಅವರ ಸಂವಹನ ಶ್ಲಾಘನೀಯ. ಎಲ್ಲ ಸಿಬ್ಬಂದಿಗಳೂ ಸ್ನೇಹಮಯಿಗಳು ಮತ್ತು ಸಹಕರಿಸುತ್ತಾರೆ. ಇಲ್ಲಿ ಬಹಳಷ್ಟು ಪರೀಕ್ಷಾ ಪ್ಯಾಕೇಜ್ ಉಳಿದ ಆಸ್ಪತ್ರೆಗೆ ಹೋಲಿಸಿದರೆ ಕಡಿಮೆ ದರದಲ್ಲಿದ್ದು ನಾನು ಬಹಳಷ್ಟು ಮಂದಿಗೆ ಶಿಫಾರಸು ಮಾಡುತ್ತೇನೆ. **– ಶ್ರೀಮತಿ ವಾಣಿ ಮಂಜು**

scan to watch video


# TAPAS ತಪಸ್

reach the unreached



10ನೇ ಬ್ಯಾಚಿನ ವಿದ್ಯಾರ್ಥಿಗಳ ಸಂಕಲ್ಪ ಸಮಾರಂಭ (ತಪಸ್ ಯೋಜನೆಯಲ್ಲಿನ ಅಭ್ಯಾಸದ ಕೊನೆಯಲ್ಲಿ)

- ತಪಸ್, ರಾಷ್ಟ್ರೋತ್ಥಾನದ ಮಹತ್ವಾಕಾಂಕ್ಷೆಯ ಯೋಜನೆ 2012–13ರಲ್ಲಿ ವಿದ್ಯಾರ್ಥಿಗಳಿಗಾಗಿ ಆರಂಭವಾಯಿತು.
- ಪ್ರತಿವರ್ಷ 10ನೇ ತರಗತಿಯಲ್ಲಿ ತೇರ್ಗಡೆ ಹೊಂದಿದ ಆರ್ಥಿಕವಾಗಿ ಸಬಲರಲ್ಲದ 45 ವಿದ್ಯಾರ್ಥಿಗಳನ್ನು ಎರಡು ಹಂತದ ಪರೀಕ್ಷೆ, ಮನೆ ಭೇಟಿ ಹಾಗೂ ವಸತಿ ಶಿಬಿರಗಳ ಮೂಲಕ ಆಯ್ಕೆ ಮಾಡಿ, ಉಚಿತ ವಸತಿಯ ಜೊತೆಗೆ 2 ವರ್ಷ ಪಿಯು ಶಿಕ್ಷಣ, ಐಐಟಿ–ಜೆಇಇ ಹಾಗೂ ಎನ್ಐಟಿ ಪ್ರವೇಶ ಪರೀಕ್ಷೆಗಳಿಗೆ 'ಬೇಸ್' ಸಂಸ್ಥೆಯ ಸಹಯೋಗದೊಂದಿಗೆ ತರಬೇತಿ ನೀಡಲಾಗುವುದು.






## ಉದ್ದೇಶ:

- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ಮಕ್ಕಳಿಗೆ ಐಐಟಿ–ಎನ್‌ಐಟಿಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವುದು.





## ಕ್ರಮಿಸಿರುವ ಮೈಲುಗಲ್ಲುಗಳು ಹಾಗೂ ಪ್ರಶಸ್ತಿ/ ಪುರಸ್ಕಾರಗಳು:

- ಇದುವರೆಗೆ 10 ತಂಡಗಳಲ್ಲಿ 362 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗೆ ಶಿಕ್ಷಣ ಪಡೆದಿದ್ದಾರೆ.
- 36 ವಿದ್ಯಾರ್ಥಿಗಳು ದೇಶದ ಹತ್ತು ಐಐಟಿಗಳಲ್ಲಿ ಪ್ರವೇಶ ಪಡೆದಿದ್ದಾರೆ.
- 92 ವಿದ್ಯಾರ್ಥಿಗಳು ಎನ್‌ಐಟಿಯಲ್ಲಿ ಪ್ರವೇಶ ಪಡೆದಿದ್ದಾರೆ.
- ಮುಂಬಯಿ ಐಐಟಿ ಸಮೀಕ್ಷಾ ತಂಡವು ತಪಸ್‌ನ ಕಾರ್ಯವನ್ನು ಸಂಪೂರ್ಣ ಅವಲೋಕಿಸಿ ಮೆಚ್ಚುಗೆ ವ್ಯಕ್ತಪಡಿಸಿದೆ.

## ವರ್ಷಾವಧೀ ಕಾರ್ಯಕಲಾಪಗಳು:

- ತಪಸ್‌ನ 50ಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿಗಳ ಮನೆಯ ಭೇಟಿ ಮಾಡಲಾಗಿದೆ.
- 2024–25ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 25ರಂದು ನಡೆಸಿದ ಪ್ರವೇಶ ಪರೀಕ್ಷೆಗೆ 4217 ಹಾಗೂ








ಜನವರಿ 26ಕ್ಕೆ 1546 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

- 2024–25ನೇ ವರ್ಷದ ಪ್ರವೇಶಕ್ಕೆ ಸಂಬಂಧಿಸಿದಂತೆ 274 ವಿದ್ಯಾರ್ಥಿಗಳ ಮನೆ ಸಂಪರ್ಕ ಮಾಡಲಾಗಿದೆ.
- 12.4.2024 ರಿಂದ 19.4.2024ರ ವರೆಗೆ ನಡೆಸುವ ಅಂತಿಮ ಸುತ್ತಿನ ಆಯ್ಕೆ ಶಿಬಿರಕ್ಕೆ 170 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಹಾಜರಾದವರು – 156
- ಅಂತಿಮವಾಗಿ ಆಯ್ಕೆಯಾದವರು 45





## ಕಾರ್ಯಕ್ರಮಗಳು:

- ವರ್ಷದಲ್ಲಿ ಬರುವ ಎಲ್ಲ ಧಾರ್ಮಿಕ ರಾಷ್ಟ್ರೀಯ ಹಬ್ಬಗಳನ್ನು ಸಂಭ್ರಮೋಲ್ಲಾಸದಿಂದ ಆಚರಿಸಲಾಯಿತು.
- ತಪಸ್‌ನಲ್ಲಿ ಓದುತ್ತಿರುವ ಎರಡೂ ವರ್ಷದ ಮಕ್ಕಳ ತಾಯಂದಿರಿಗಾಗಿ 'ಮಾತೃಸಂಗಮ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಇದರಲ್ಲಿ ಕುಟುಂಬ ಪ್ರಬೋಧನ, ಮಕ್ಕಳ ಆರೈಕೆ, ತಾಯಿಯ ಜವಾಬ್ದಾರಿ, ಕುಟುಂಬ/ ಸಂಬಂಧಗಳ ನಿರ್ವಹಣೆ, ಸಾಮಾಜಿಕ ಜವಾಬ್ದಾರಿ ಇತ್ಯಾದಿ ಮಾಹಿತಿಗಳ ಹಂಚಿಕೊಳ್ಳಲಾಯಿತು.




- ತಪಸ್‌ನ ಹಳೆಯ ವಿದ್ಯಾರ್ಥಿಗಳಿಗಾಗಿ 'ಹಿರಿಯ ವಿದ್ಯಾರ್ಥಿಗಳ ಸಮಾವೇಶ'ವನ್ನು ಏರ್ಪಡಿಸಲಾಗಿತ್ತು. ಹಿರಿಯ ವಿದ್ಯಾರ್ಥಿಗಳು ತಮ್ಮ ಅನುಭವ ಹಂಚಿಕೊಂಡಿದ್ದಲ್ಲದೇ, ಹಾಲಿ ವಿದ್ಯಾರ್ಥಿಗಳಿಗೆ ತಮ್ಮ ಸಲಹೆ ಮತ್ತು ಮಾಹಿತಿಗಳ ವಿನಿಮಯ ಮಾಡಿಕೊಂಡರು.
- ಖ್ಯಾತ ಭೌತಶಾಸ್ತ್ರಜ್ಞ ಹಾಗೂ ಜೆಇಇ ಪಠ್ಯಪುಸ್ತಕದ ಲೇಖಕರಾದ ಡಾ॥ ಎಚ್. ಸಿ. ವರ್ಮಾ ಅವರು ಓದುವ ಹವ್ಯಾಸದ ಬಗ್ಗೆ ಮಾರ್ಗದರ್ಶನ ಮಾಡಿದರು.
- ಎನ್‌ಸಿಇಆರ್‌ಟಿ ಪಠ್ಯಪುಸ್ತಕದ ಲೇಖಕಿ ಪ್ರೊ॥ ವರದಾ ನಿಕಲ್ಜೆ ಅವರು ಇಂಗ್ಲಿಷ್ ಭಾಷೆಯ ಬಳಕೆ ಮತ್ತು ಕಲಿಕೆಯ ಬಗ್ಗೆ ಪ್ರೇರಣೆ ನೀಡಿದರು.

## ತರಬೇತಿ ಕಾರ್ಯಾಗಾರಗಳು:

- ಕುಪ್ಪಳ್ಳಿಯ ಕುವೆಂಪು ಪ್ರತಿಷ್ಠಾನದಲ್ಲಿ 3 ದಿನಗಳ ವ್ಯಕ್ತಿತ್ವ ವಿಕಸನ ಶಿಬಿರ ನಡೆಸಲಾಯಿತು.
- ಅದೇ ಸಮಯ ಸಮಯದಲ್ಲಿ ರಂಭಾಪುರಿ ಮಠ, ಶೃಂಗೇರಿ, ಬೇಲೂರು, ಹಳೆಬೀಡು ವೀಕ್ಷಿಸಲಾಯಿತು.
- ಶಿಬಿರದಲ್ಲಿ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ವಿಚಾರಗಳನ್ನು ತಿಳಿಸಲಾಯಿತು.
- ದೇಶಭಕ್ತಿ, ಭಾರತದ ಇತಿಹಾಸ, ಸಂಸ್ಕೃತಿ, ಸ್ವಾತಂತ್ರ್ಯ ಗಳಿಸಿದ ಹಿನ್ನೆಲೆಯ ಘಟನೆಗಳ ಬಗ್ಗೆ ವಿಚಾರ ವಿನಿಮಯ ನಡೆಸಲಾಯಿತು.
- ರಾ.ಸ್ವ. ಸಂಘವು ನಡೆಸಿದ ಪ್ರಾಥಮಿಕ ಶಿಕ್ಷಾವರ್ಗದಲ್ಲಿ ತಪಸ್‌ನ 46 ವಿದ್ಯಾರ್ಥಿಗಳು ಭಾಗವಹಿಸಿದರು.

## ವರ್ಷದ ಸಾಧನೆ:

- ತಪಸ್‌ನ 4 ವಿದ್ಯಾರ್ಥಿಗಳ ಐಐಟಿಗೆ ಹಾಗೂ 11 ವಿದ್ಯಾರ್ಥಿಗಳು ಎನ್‌ಐಟಿಗೆ ಪ್ರವೇಶ ಪಡೆದಿದ್ದಾರೆ.

## ಉಲ್ಲೇಖನೀಯ ಸಂಗತಿಗಳು:

- ತಪಸ್‌ನ 6 ವಿದ್ಯಾರ್ಥಿಗಳು ಐಐಟಿ/ ಎನ್‌ಐಟಿಯಲ್ಲಿ ಶಿಕ್ಷಣ ಮುಗಿಸಿ ವಿದೇಶದಲ್ಲಿ ವೃತ್ತಿ ಹಾಗೂ ಉನ್ನತ ಶಿಕ್ಷಣ ಮಾಡುತ್ತಿದ್ದಾರೆ.

saadhana ಸಾಧನಾ


reach the unreached

scan to watch video




5ನೇ ಬ್ಯಾಚಿನ ವಿದ್ಯಾರ್ಥಿನಿಯರ ಸಂಕಲ್ಪ ಸಮಾರಂಭ (ಸಾಧನಾ ಯೋಜನೆಯಲ್ಲಿನ ಅಭ್ಯಾಸದ ಕೊನೆಯಲ್ಲಿ)

- ಸಾಧನಾ, ರಾಷ್ಟ್ರೋತ್ಥಾನದ ಮಹತ್ತ್ವಾಕಾಂಕ್ಷೆಯ ಯೋಜನೆಯು 2017–18ರಲ್ಲಿ ವಿದ್ಯಾರ್ಥಿನಿಯರಿಗಾಗಿ ಪ್ರಾರಂಭಗೊಂಡಿತು.
- ಪ್ರತಿವರ್ಷ 45 ಹೆಣ್ಣುಮಕ್ಕಳಿಗೆ ಪಿಯು ಶಿಕ್ಷಣದ ಜೊತೆಗೆ ನೀಟ್ ಪ್ರವೇಶ ಪರೀಕ್ಷೆಗೆ ಬೇಸ್ ಸಹಯೋಗದೊಂದಿಗೆ ವಸತಿಸಹಿತ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತದೆ.





## ಉದ್ದೇಶ:

- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ವಿದ್ಯಾರ್ಥಿನಿಯರಿಗೆ ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸುವುದು ಹಾಗೂ




ಶಿಕ್ಷಕರಾಗಬಯಸುವವರಿಗೆ ತರಬೇತಿ ನೀಡುವುದು.

- 2022–23ನೇ ಸಾಲಿನಿಂದ ಸಾಧನಾದಲ್ಲಿ ಶಿಕ್ಷಕರಾಗಬಯಸುವ ಮಕ್ಕಳಿಗೆ ಉಚಿತ 'ಸಾಧನಾ–ಶಿಕ್ಷಣ' ಯೋಜನೆಯನ್ನು ಪ್ರಾರಂಭಿಸಲಾಗಿದೆ. ಎರಡು ವರ್ಷಗಳ ಪಿಯು ಶಿಕ್ಷಣದ ಜೊತೆಗೆ ಶಿಕ್ಷಣವೃತ್ತಿಗೆ ಬೇಕಾದ ಪ್ರಶಿಕ್ಷಣವನ್ನು ನೀಡುವುದು ಇದರ ಉದ್ದೇಶ.
- 45 ಮಕ್ಕಳಿಗೆ 6 ವರ್ಷಗಳ ಉಚಿತ ಶಿಕ್ಷಣ.




## ಕ್ರಮಿಸಿರುವ ಮೈಲಿಗಲ್ಲುಗಳು:

- ಇದುವರೆಗೆ 5 ತಂಡಗಳಲ್ಲಿ 250 ವಿದ್ಯಾರ್ಥಿನಿಯರು ಇದರ ಉಪಯೋಗ ಪಡೆದಿದ್ದಾರೆ.
- 70 ವಿದ್ಯಾರ್ಥಿನಿಯರು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದಿರುತ್ತಾರೆ.

## ವರ್ಷಾವಧೀ ಕಾರ್ಯಕಲಾಪಗಳು:

- ಸಾಧನಾದ ನೂರಕ್ಕೂ ಹೆಚ್ಚು ಹಿರಿಯ ವಿದ್ಯಾರ್ಥಿನಿಯರ ಮನೆ ಭೇಟಿ ಮಾಡಲಾಗಿದೆ.
- 2024–25ನೇ ಸಾಲಿನ ಪ್ರವೇಶಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 25ರಲ್ಲಿ





ನಡೆದ ಪ್ರವೇಶ ಪರೀಕ್ಷೆಯಲ್ಲಿ ಸುಮಾರು 7774 ಹಾಗೂ ಜನವರಿ 26ಕ್ಕೆ 1691 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದಾರೆ.

- 2024–25ನೇ ವರ್ಷದ ಹೊಸ ಪ್ರವೇಶಕ್ಕೆ ಸಂಬಂಧಿಸಿದಂತೆ 424 ಮಕ್ಕಳ ಮನೆ ಸಂಪರ್ಕ ಮುಗಿದಿದೆ.
- 11.4.2024 ರಿಂದ 16.4.2024 ರವರೆಗೆ ನಡೆಯಲಿರುವ ಅಂತಿಮ ಆಯ್ಕೆ ಶಿಬಿರಕ್ಕೆ 270 ವಿದ್ಯಾರ್ಥಿನಿಯರು ಆಯ್ಕೆಗೊಂಡಿದ್ದಾರೆ. ಹಾಜರಿ – 256






## ಕಾರ್ಯಕ್ರಮಗಳು:

- ಮೈಸೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಆರ್.ಐ.ಇ.ನ (RIE- Regional Institute of Education, Mysore) ಮುಖ್ಯಪ್ರಾಧ್ಯಾಪಕರಾದ ಡಾ॥ ಸುಜಾತರವರು ಆಗಮಿಸಿ, ಮಕ್ಕಳಿಗೆ ಪ್ರತಿಷ್ಠಿತ ಸಂಸ್ಥೆಗೆ ಸೇರುವ ರೀತಿ, ಅದರಿಂದ ಶಿಕ್ಷಣ ಪಡೆದ ನಂತರ ಆಗುವ ಪ್ರಯೋಜನಗಳು ಹಾಗೂ ಓದುವ ರೀತಿ, ಯೋಜನೆ ಇತ್ಯಾದಿಗಳ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು.



## ತರಬೇತಿ ಕಾರ್ಯಾಗಾರಗಳು:

- ಹೆಬ್ರಿಯ ಅಮೃತಭಾರತಿ ಶಾಲೆಯಲ್ಲಿ 4 ದಿನಗಳ 'ವ್ಯಕ್ತಿತ್ವ ವಿಕಸನ ಶಿಬಿರ' ಆಯೋಜನೆ ಮಾಡಲಾಗಿತ್ತು.



## ವರ್ಷದ ಸಾಧನೆ:

- 2022–23 ತಂಡದ 16 ಮಕ್ಕಳು ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದಾರೆ.




## ಉಲ್ಲೇಖನೀಯ ಸಂಗತಿಗಳು:

- ಕು॥ ರಿತ್ವಿಜಾ ದೇವೇಗೌಡ, ಮೂಲತಃ ಮಂಡ್ಯ ಜಿಲ್ಲೆಯ ಪುಟ್ಟ ಗ್ರಾಮದವಳಾಗಿ, ದೇಶದ ಪ್ರತಿಷ್ಠಿತ ಮಿಲಿಟರಿ ವೈದ್ಯಕೀಯ ಕಾಲೇಜಾದ AFMC – Armed Forces Medical Collegeಗೆ ಕರ್ನಾಟಕದಿಂದ ಏಕೈಕ ವಿದ್ಯಾರ್ಥಿನಿಯಾಗಿ ಆಯ್ಕೆಯಾಗಿರುವ ನಮ್ಮ ಸಾಧನಾ ವಿದ್ಯಾರ್ಥಿನಿಯಾಗಿದ್ದಾಳೆ.

# ಸೇವಾ ವಸತಿ ಪ್ರಕಲ್ಪ

scan to watch video



ಸ್ವ-ಸಹಾಯ ಗುಂಪುಗಳ ಮಹಿಳಾ ಸಮಾವೇಶದ ದೃಶ್ಯ

- ಬೆಂಗಳೂರಿನ ಶೆ. 10ರಷ್ಟು ಜನ ಕೊಳಗೇರಿಯಲ್ಲಿ ವಾಸಿಸುತ್ತಿದ್ದು, 600ಕ್ಕೂ ಅಧಿಕ ಕೊಳಗೇರಿಗಳಿವೆ.
- ಚಿಕ್ಕಚಿಕ್ಕ ಗಲ್ಲಿಯಂಥ ಪ್ರದೇಶಗಳಲ್ಲಿ ವಾಸಿಸುವ ಅವರು ಎದುರಿಸುವ ಸಮಸ್ಯೆಯೂ ನೂರಾರು.
- ಈ ಕೊರತೆಯನ್ನು ತುಂಬಲು ರಾಷ್ಟ್ರೋತ್ಥಾನ ಪರಿಷತ್ 200 ಸೇವಾವಸತಿಗಳಲ್ಲಿ ಶೈಕ್ಷಣಿಕ ಸೇವಾ ಚಟುವಟಿಕೆಗಳನ್ನು ಹಾಗೂ 20 ಸೇವಾವಸತಿಗಳಲ್ಲಿ ಸಮಗ್ರ ವಿಕಾಸಕ್ಕೆ ಪೂರಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಸ್ವಸ್ಥ-ಸುಸ್ಥಿರ ಸಮಾಜನಿರ್ಮಾಣ ಕಾರ್ಯಕ್ಕೆ ಕೈಜೋಡಿಸುತ್ತಿದೆ.

## ಉದ್ದೇಶ:

ಸೇವಾವಸತಿಗಳಲ್ಲಿ ಶಿಕ್ಷಣ, ಸ್ವಾವಲಂಬನೆ, ಆರೋಗ್ಯ ಮತ್ತು ಸಂಸ್ಕಾರ ಸಂಬಂಧಿತ ಚಟುವಟಿಕೆಗಳ ಮೂಲಕ ಆ ಕ್ಷೇತ್ರಗಳಲ್ಲಿನ ಕೊರತೆಗಳನ್ನು ನೀಗಿಸುವುದು ಮತ್ತು ಆ ಮೂಲಕ ಅಲ್ಲಿನ ಜನರನ್ನು ಸಶಕ್ತರನ್ನಾಗಿಸುವುದು ಪ್ರಕಲ್ಪದ ಉದ್ದೇಶವಾಗಿದೆ.




## ಕ್ರಮಿಸಿರುವ ಮೈಲುಗಲ್ಲುಗಳು:



- ಮಹಿಳಾ ಸ್ವಸಹಾಯ ಗುಂಪುಗಳ ಸಮಾವೇಶಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಭವತಾರಿಣಿ ಆಶ್ರಮದ ಮಾತಾ ವಿವೇಕಮಯೀ ಸೇವಾವಸತಿಗಳ ಮಹಿಳೆಯರ ಏಳಿಗೆಗಾಗಿ ರಾಷ್ಟ್ರೋತ್ಥಾನ ಪರಿಷತ್ ನಡೆಸುತ್ತಿರುವ ಕಾರ್ಯದ ಬಗ್ಗೆ ಪ್ರಶಂಸಿಸಿದರು.
- ಮಧುಮೇಹ ತಪಾಸಣಾ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಔಷಧಿ ಪಡೆದ ನಿರ್ಗತಿಕ ವಯೋವೃದ್ಧರು ತಮ್ಮ ಜೀವ ಉಳಿಸಿದ ರಾಷ್ಟ್ರೋತ್ಥಾನ ಪರಿಷತ್ ಚೆನ್ನಾಗಿ ಬೆಳೆಯಲಿ ಎಂದು ಹಾರೈಸುತ್ತಿದ್ದಾರೆ.



## ಕಾರ್ಯಕ್ರಮಗಳು:



- 10ನೇ ತರಗತಿ ವಿದ್ಯಾರ್ಥಿಗಳಿಗಾಗಿ 10th Sure Pass ಕೋಚಿಂಗ್ ಕೇಂದ್ರಗಳು
- ಬೀದಿ ನಾಟಕಗಳ ಮೂಲಕ ಪರಿಸರ ಸಂರಕ್ಷಣೆ ಕಾರ್ಯಕ್ರಮಗಳು
- 70 ಶಾಲೆಗಳಲ್ಲಿ ಮೌಲ್ಯಶಿಕ್ಷಣ ತರಗತಿಗಳು

- ಸೇವಾವಸತಿ ಮಹಿಳೆಯರಿಗೆ ಉಚಿತ ಹೊಲಿಗೆ ತರಬೇತಿಯಂತ್ರ ವಿತರಣೆ
- ಕ್ಲಸ್ಟರ್ ಮಟ್ಟದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಸಮಾವೇಶ
- ಮಹಾನಗರ ಮಟ್ಟದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಸಮಾವೇಶ
- ಸೇವಾವಸತಿ ಮಕ್ಕಳಿಗೆ ಸ್ವರ್ಣಬಿಂದು ಪ್ರಾಶನ
- ಬೆಂಗಳೂರಿನ ಸಿದ್ದಾಪುರ ಬಳಿಯ ಹೊಂಬೇಗೌಡ ಸೇವಾವಸತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಚಿತ ಸಂಚಾರಿ ಚಿಕಿತ್ಸಾಲಯಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ 'ಕುಲಪತಿಗಳಾದ ಡಾ. ರಮೇಶ್ ಉಪಸ್ಥಿತರಿದ್ದರು.



- ರಾಷ್ಟ್ರೋತ್ಥಾನ ಆಸ್ಪತ್ರೆಯ ಸಹಯೋಗದಲ್ಲಿ ಸೇವಾವಸತಿಗಳಿಗೆ ಉಚಿತ ಸಂಚಾರಿ ಚಿಕಿತ್ಸಾಲಯ ಆರಂಭ



- ಸೇವಾವಸತಿ ಮಕ್ಕಳಿಗೆ ಬೇಸಿಗೆ ಶಿಬಿರಗಳು
- 7 ಆಯ್ದ ಸೇವಾವಸತಿಗಳಲ್ಲಿ 5 ಚಟುವಟಿಕೆಗಳ SOP Auditing ನಡೆಸಲಾಗಿದೆ.
- ಕಾಲೇಜು ವಿದ್ಯಾರ್ಥಿ ಬಳಗಗಳ ಮೂಲಕ ಅವರಲ್ಲಿ ಮೌಲ್ಯಗಳ ವಿಕಾಸಗೊಳಿಸುವ ತರಗತಿಗಳ ಚಾಲನೆ



## ತರಬೇತಿ ಕಾರ್ಯಾಗಾರಗಳು:

- ಉದ್ಯೋಗ ಮತ್ತು ತರಬೇತಿ ಯೋಜನೆಯಲ್ಲಿ ಸೇವಾವಸತಿ ಯುವಕರಿಗೆ ಟೊಯೋಟಾ ಕಂಪೆನಿಯಿಂದ ಉದ್ಯೋಗ ನೀಡಿಕೆ ಕಾರ್ಯಕ್ರಮ
- ವ್ಯಾಸಂಗಕೇಂದ್ರಗಳ ಶಿಕ್ಷಕಿಯರಿಗೆ ಮಾಸಿಕ ತರಬೇತಿ



- ಸೇವಾವಸತಿ ಕ್ಲಸ್ಟರ್‌ಗಳ ಸಂಯೋಜಕರಿಗೆ 2 ದಿನಗಳ ವ್ಯಕ್ತಿತ್ವ ವಿಕಸನ ಕಾರ್ಯಾಗಾರ
- ಕಾಲೇಜು ವಿದ್ಯಾರ್ಥಿ ಬಳಗಗಳ ಪ್ರಮುಖರಿಗೆ ತಂಡ ನಿರ್ವಹಣೆಯ ತರಬೇತಿ
- ಬಾಲಗೋಕುಲ, ಕಿಶೋರ ಬಳಗಗಳ ಸಂಚಾಲಕರಿಗೆ ತರಬೇತಿ
- ಸ್ವಸಹಾಯ ಗುಂಪುಗಳ ಪದಾಧಿಕಾರಿಗಳ ಪ್ರಶಿಕ್ಷಣ ವರ್ಗ
- ಸೇವಾವಸತಿಗಳ ಸಂಯೋಜಕರಿಗೆ ಆಪ್ತ ಸಲಹಾ (Counselling) ತರಬೇತಿ
- ಸೇವಾವಸತಿಗಳ ಕಿಶೋರಿಯರಿಗೆ Adolescent Awareness ತರಬೇತಿ



## ಸೇವಾ ಚಟುವಟಿಕೆಗಳು:

- ಸೇವಾವಸತಿ ಪ್ರಕಲ್ಪವು ಸೇವಾವಸತಿಗಳಲ್ಲಿ ಸೇವಾ ಚಟುವಟಿಕೆಗಳನ್ನು ಮಾತ್ರ ನಡೆಸದೇ, ಸ್ಥಾನೀಯ ಉತ್ಸವ, ಜಾತ್ರೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ.
- ಸತ್ಯನಗರ, ದೊಡ್ಡಣ್ಣನಗರ, ತಂಗಮಲೈನಗರಗಳ ದೇವಸ್ಥಾನಗಳಲ್ಲಿ ಸ್ವಚ್ಛತೆ, ಪಾದರಕ್ಷೆ ಕೌಂಟರ್ ಇವೇ ಮೊದಲಾದ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದೆ.
- ವಿದ್ಯಾಪೀಠ ಪ್ರದೇಶದಲ್ಲಿರುವ ಮಂಜುನಾಥ ಕಾಲೋನಿಯಲ್ಲಿ 60 ಮಹಿಳಾ ಪೌರಕಾರ್ಮಿಕರಿಗೆ ಗೌರೀಬಾಗಿನ ನೀಡಲಾಯಿತು.



Bhagyamma
582 marks



Harshini
576 marks



## ವರ್ಷದ ಸಾಧನೆ:

- ಕೃಷ್ಣ ಜನ್ಮಾಷ್ಟಮಿ ನಿಮಿತ್ತ 200 ಸೇವಾವಸತಿಗಳಲ್ಲಿ ನಡೆದ ಉತ್ಸವದ ಮೆರವಣಿಗೆಗಳಲ್ಲಿ 4000ಕ್ಕೂ ಅಧಿಕ ಮಕ್ಕಳು ಕೃಷ್ಣ–ರಾಧೆ ವೇಷಧರಿಸಿ ಪಾಲ್ಗೊಂಡರು.



- ವ್ಯಾಸಂಗಕೇಂದ್ರಗಳ ಮಕ್ಕಳಿಗೆ ನಿತ್ಯದ ದಿನಚರಿಯೊಂದನ್ನು ನೀಡಲಾಗಿದೆ. ಅದರಲ್ಲಿ ಅವರು ದಿನನಿತ್ಯ ಪಾಲಿಸಬೇಕಾದ ಅಂಶಗಳಿವೆ. ಪ್ರಸ್ತುತ 2023–24ರಲ್ಲಿ 896 (1165) ವಿದ್ಯಾರ್ಥಿಗಳು ದಿನಚರಿ ಅಳವಡಿಸಿಕೊಂಡಿದ್ದಾರೆ.

- ಸ್ವಸಹಾಯ ಗುಂಪುಗಳು ಉತ್ಕೃಷ್ಟ ಮಾದರಿಯಾಗಲು 12 ಅಂಶಗಳ ಮಾರ್ಗಸೂಚಿಯನ್ನು ನೀಡಲಾಗಿದೆ. ಪ್ರಸ್ತುತ ಇರುವ 204 ಸ್ವಸಹಾಯ ಗುಂಪುಗಳಲ್ಲಿ 62 ಗುಂಪುಗಳು 12 ಮಾರ್ಗಸೂಚಿಗಳನ್ನು ಅಳವಡಿಸಿಕೊಂಡಿವೆ.

- 204 ಸ್ವಸಹಾಯ ಗುಂಪುಗಳಲ್ಲಿ 1 ಕೋಟಿಗೂ ಅಧಿಕ ಹಣವನ್ನು ಉಳಿತಾಯ ಮಾಡಿವೆ.

- 12 ಸೇವಾವಸತಿಗಳಲ್ಲಿ ಆರೋಗ್ಯಸೇವೆ ನೀಡುತ್ತಿರುವ ಸಂಚಾರಿ ಚಿಕಿತ್ಸಾಲಯವು 2023–24ರಲ್ಲಿ 4000ಕ್ಕೂ ಅಧಿಕ ರೋಗಿಗಳಿಗೆ ಚಿಕಿತ್ಸೆ ನೀಡಿದೆ. ಅದರ ಫಲವಾಗಿ ವೆಂಕಟರಾಮನಗರ, ಹೊಂಬೇಗೌಡಸ್ಲಂ, ವೆಂಕಟೇಶ್ವರ ಸ್ಲಂನ ಹಲವು ರೋಗಿಗಳು ದೀರ್ಘಕಾಲೀನ ಆರೋಗ್ಯ ಸಮಸ್ಯೆಗಳಿಂದ ಗುಣಮುಖರಾಗುತ್ತಿದ್ದಾರೆ

- ಕೇಂದ್ರ ಸರ್ಕಾರದ ಮುದ್ರಾ ಯೋಜನೆಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ನೀಡಲಾಗುವ 10,000 ರೂಗಳ ಸಾಲವನ್ನು 710 ಜನರಿಗೆ ಸಿಗಲು ಸಹಾಯ ಮಾಡಲಾಗಿದೆ.

- **ಆಪ್ತ ಸಲಹಾ ತರಬೇತಿ:** ಆಪ್ತ ಸಲಹಾ ಕೇಂದ್ರದ ಸಹಕಾರದೊಂದಿಗೆ ಫೆಬ್ರವರಿ ಮಾರ್ಚ್ ತಿಂಗಳುಗಳಲ್ಲಿ ಪ್ರಕಲ್ಪದ ಸಂಯೋಜಕರಿಗೆ ಆಪ್ತ ಸಲಹೆ ನೀಡುವ ತರಬೇತಿ ನೀಡಲಾಯಿತು. ಮುಂದಿನ ದಿನಗಳಲ್ಲಿ ಸೇವಾವಸತಿಗಳಲ್ಲಿ ಆಪ್ತ ಸಲಹಾ ಕೇಂದ್ರಗಳನ್ನು ತೆರೆಯಲಾಗುವುದು.

- **ಸ್ವಾಸ್ಥ್ಯಭಾರತೀ:** ಸೇವಾವಸತಿಯ












ಕಿಶೋರಿಯರು ಸ್ವಸ್ಥ ಜೀವನಶೈಲಿ ಅಳವಡಿಸಿಕೊಳ್ಳಲು ಸ್ವಾಸ್ಥ್ಯಭಾರತಿಯ ಸಹಕಾರದೊಂದಿಗೆ ವಿಶೇಷ ಪ್ರಯೋಗವೊಂದನ್ನು ಪ್ರಾರಂಭಿಸಲಾಗಿದೆ. ಕಿಶೋರಿಯರಿಗೆ ನಿತ್ಯ ಅನುಸರಿಸಬೇಕಾದ ಆಹಾರ, ವ್ಯಾಯಾಮ ಇತ್ಯಾದಿಗಳನ್ನು ತಿಳಿಸಲಾಗುತ್ತದೆ.

- 2023–24ರಲ್ಲಿ ಸ್ವಾವಲಂಬನ ಕೇಂದ್ರಗಳ ಮೂಲಕ ತರಬೇತಿ ಪಡೆದು ಸ್ವಾವಲಂಬಿಗಳಾದವರ ಸಂಖ್ಯೆ

| ಚಟುವಟಿಕೆ | ತರಬೇತಿ ಪಡೆದವರ ಸಂಖ್ಯೆ | ಸ್ವಾವಲಂಬಿಗಳಾದವರ ಸಂಖ್ಯೆ | ಉದ್ಯೋಗ ಪಡೆದವರ ಸಂಖ್ಯೆ |
|---|---|---|---|
| **ಹೊಲಿಗೆ ತರಬೇತಿ ಕೇಂದ್ರ** | 685 | 276 | 65 |
| **ಕಂಪ್ಯೂಟರ್ ತರಬೇತಿ ಕೇಂದ್ರ** | 350 | 8 | 27 |
| **ಬ್ಯೂಟಿಷಿಯನ್ ತರಬೇತಿ ಕೇಂದ್ರ** | 173 | 112 | 14 |

## ಉಲ್ಲೇಖನೀಯ ಸಂಗತಿಗಳು:

- 2023–24ರ ಸಾಲಿನಲ್ಲಿ 10th Sure Pass ಕೋಚಿಂಗ್ ನಡೆಯುವ 13 ಕೇಂದ್ರಗಳಲ್ಲಿ 288 ವಿದ್ಯಾರ್ಥಿಗಳು ಹಾಜರಾಗಿದ್ದರು. ಅವರಲ್ಲಿ 271 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡಾ 94 ಫಲಿತಾಂಶ ಬಂದಿದೆ.
- ಪ್ರಕಲ್ಪದ ವತಿಯಿಂದ ನಡೆಯುತ್ತಿರುವ ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದ,

ಆರ್ಥಿಕವಾಗಿ ಹಿಂದುಳಿದ 62 ಮಹಿಳೆಯರಿಗೆ ಹೊಲಿಗೆಯಂತ್ರಗಳನ್ನು ನೀಡಲಾಯಿತು. ಆ ಎಲ್ಲಾ ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ.

- ರಾಷ್ಟ್ರೋತ್ಥಾನ ಆಸ್ಪತ್ರೆಯ ಸಹಕಾರದೊಂದಿಗೆ 12 ಸೇವಾವಸತಿಗಳಿಗೆ ಸಂಚಾರಿ ಚಿಕಿತ್ಸಾಲಯದ ಸೇವೆ ದೊರಕುತ್ತಿದೆ.
- ಹೆಚ್ಚಿನ ಬಡ್ಡಿಯ ಲಕ್ಷಾಂತರ ರೂಗಳ ಸಾಲದಿಂದ ಮಹಿಳಾ ಸ್ವಸಹಾಯ ಗುಂಪುಗಳ 236 ಸದಸ್ಯರು ಹೊರಬಂದಿದ್ದಾರೆ.
- ಉಚಿತ ಮಧುಮೇಹ ತಪಾಸಣಾ ಕೇಂದ್ರಗಳ ಮೂಲಕ 18 ಸೇವಾವಸತಿಗಳ 756 ರೋಗಿಗಳಿಗೆ ಚಿಕಿತ್ಸೆ ಮತ್ತು ಔಷಧಿ ನೀಡಲಾಗುತ್ತಿದೆ. ಆ ಮೂಲಕ ಅವರ ಆರೋಗ್ಯ ಸುಧಾರಿಸುತ್ತಿದೆ.
- ವ್ಯಾಸಂಗ ಕೇಂದ್ರದ ಚಟುವಟಿಕೆಯಿಂದಾಗಿ ಮಕ್ಕಳ ಶಾಲಾ ಹಾಜರಾತಿ ಹೆಚ್ಚಾಗಿದೆ.
- ವೃತ್ತಿ ತರಬೇತಿ ಕೇಂದ್ರಗಳ ಮೂಲಕ 600ಕ್ಕೂ ಹೆಚ್ಚು ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ.







## ಉಲ್ಲೇಖನೀಯ ಹೇಳಿಕೆಗಳು:

- ವ್ಯಾಸಂಗಕೇಂದ್ರಕ್ಕೆ ಬರುತ್ತಿರುವ ವಿದ್ಯಾರ್ಥಿಗಳಲ್ಲಿ ಗುರು–ಹಿರಿಯರಿಗೆ ಗೌರವ ಕೊಡುವುದು ಕೆಟ್ಟ ಮಾತುಗಳನ್ನಾಡದೇ ಇರುವುದು ಕಾಣಿಸುತ್ತಿದೆ ಎಂದು ಸೇವಾವಸತಿಯ ಹಿರಿಯರು ಹೇಳುತ್ತಿದ್ದಾರೆ.
- ರಾಷ್ಟ್ರೋತ್ಥಾನ ನಡೆಸುವ ವೃತ್ತಿ ತರಬೇತಿ ಕೇಂದ್ರದಲ್ಲಿ ನಡೆಯುವ ಹೊಲಿಗೆ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು ನಾವೀಗ ಸ್ವಾವಲಂಬಿಗಳಾಗಿ ಬದುಕುತ್ತಿದ್ದೇವೆಂದು ತರಬೇತಿ ಪಡೆದ ಮಹಿಳೆಯರು ಹೇಳುತ್ತಿದ್ದಾರೆ.

# ರಾಷ್ಟ್ರೋತ್ಥಾನ ಸಾಹಿತ್ಯ ಹಾಗೂ ಉತ್ಥಾನ ಮಾಸಪತ್ರಿಕೆ

scan to watch video




ರಾ.ಸ್ವ.ಸಂ.ದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಕನ್ನಡ ಪುಸ್ತಕ ಹಬ್ಬಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ

'ರಾಷ್ಟ್ರೋತ್ಥಾನ ಸಾಹಿತ್ಯ'ವು 1965ರಲ್ಲಿ ಪ್ರಾರಂಭವಾಯಿತು. ರಾಷ್ಟ್ರೋತ್ಥಾನ ಸಾಹಿತ್ಯದಿಂದ ಪ್ರಕಟವಾದ ಮೊದಲ ಪುಸ್ತಕ – ರಣವೀಳ್ಯ.

## ಧ್ಯೇಯ (Mission):

- ಸಮಾಜದಲ್ಲಿ ಸತ್ಸಂಸ್ಕಾರ*ಗಳನ್ನು ಮೂಡಿಸುವ ಸಾಮಾಜಿಕ ಚಿಂತನಪ್ರಧಾನವಾದ, ರಾಷ್ಟ್ರೀಯ–ವೈಚಾರಿಕ–ಇತಿಹಾಸ–ವಿಶ್ಲೇಷಣಾತ್ಮಕ ಸದಭಿರುಚಿಯ ಸಾಹಿತ್ಯವನ್ನು ವಿವಿಧಪ್ರಕಾರ*ಗಳಲ್ಲಿ ಪ್ರಕಟಿಸುವುದು.
- ನಮ್ಮ ಪ್ರಕಟನೆಗಳ ಜೊತೆಗೆ ಸಮಾಜದ ಸ್ವಾಸ್ಥ್ಯಕ್ಕೆ ಪೂರಕವೆನಿಸುವ ಅನ್ಯಾನ್ಯ ಪ್ರಕಟನೆಗಳನ್ನು ಜನರಿಗೆ ತಲಪಿಸುವುದು.
- ಸದಭಿರುಚಿಯ ಸಾಹಿತ್ಯಪ್ರಸಾರ ಹಾಗೂ ಪ್ರಚಾರಕ್ಕಾಗಿ ಕಾಲಕಾಲಕ್ಕೆ ವಿಚಾರಸಂಕಿರಣ, ಸಾಹಿತ್ಯಗೋಷ್ಠಿಗಳು, ಕಮ್ಮಟಗಳು, ಪುಸ್ತಕ ಪ್ರದರ್ಶನಗಳು ಮೊದಲಾದ ವಿವಿಧ ರೀತಿಯ ಚಟುವಟಿಕೆಗಳನ್ನು ನಾನಾ ಸ್ಥಳಗಳಲ್ಲಿ ಆಯೋಜಿಸುವುದು.
- ಭಾಷೆ ಹಾಗೂ ಸಾಹಿತ್ಯಕ್ಷೇತ್ರಗಳಲ್ಲಿ ಸಮಾಜಹಿತಕ್ಕೆ ಪೂರಕವಾಗಿ ಕೆಲಸಮಾಡುವವರ,



ಬರೆಯುವವರ ಸಂಖ್ಯಾತ್ಮಕ ಹಾಗೂ ಗುಣಾತ್ಮಕ ವೃದ್ಧಿಗಾಗಿ ವಿವಿಧ ತರಬೇತಿಗಳು, ಕಾರ್ಯಕ್ರಮಗಳನ್ನು ಆಯೋಜಿಸುವುದು.


## ಕ್ರಮಿಸಿರುವ ಮೈಲುಗಲ್ಲುಗಳು ಮತ್ತು ಪ್ರಶಸ್ತಿ/ ಪುರಸ್ಕಾರಗಳು:

- ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಆರೋಗ್ಯ, ವ್ಯಕ್ತಿಚಿತ್ರ, ಜೀವನಚರಿತ್ರೆ, ಆರ್ಥಿಕತೆ, ಪರಿಸರ, ವಿಜ್ಞಾನ, ಗಣಿತ, ವ್ಯಕ್ತಿತ್ವವಿಕಾಸ, ಹೀಗೆ ಹತ್ತು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪುಸ್ತಕಗಳು ನಿರಂತರವಾಗಿ ಪ್ರಕಟವಾಗತೊಡಗಿದವು.
- ಮಕ್ಕಳ ಸಾಹಿತ್ಯ ಲೋಕದಲ್ಲಿ ಹೊಸ ಶಕೆ ಪ್ರಾರಂಭಿಸಿದ ಕೀರ್ತಿ ರಾಷ್ಟ್ರೋತ್ಥಾನ ಸಾಹಿತ್ಯದ 'ಭಾರತ–ಭಾರತಿ ಪುಸ್ತಕ ಸಂಪದ'ಕ್ಕೆ ಸಲ್ಲುತ್ತದೆ. ಈ ಮಾಲಿಕೆಯಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲ ಪ್ರಾಂತ್ಯಗಳಿಗೂ ಸೇರಿದ ರಾಷ್ಟ್ರೀಯ ಮಹಾಪುರುಷರನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಲಾಗಿದೆ.










- ‘ರಾಷ್ಟ್ರೋತ್ಥಾನ ಸಾಹಿತ್ಯ’, ‘ಸಾಹಿತ್ಯ ಸಿಂಧು ಪ್ರಕಾಶನ’ ಹಾಗೂ ‘ಭಾರತ–ಭಾರತಿ ಪುಸ್ತಕ ಸಂಪದ’ಗಳ ಮೂಲಕ ಇದುವರೆಗೆ ಸುಮಾರು 1,100ಕ್ಕೂ ಅಧಿಕ ಪ್ರಕಟನೆಗಳು ಹೊರಬಂದಿವೆ.
- ಭಾರತ–ಭಾರತಿ ಪುಸ್ತಕ ಸಂಪದದ ಪ್ರಕಟನೆಗಳು ಇದುವರೆಗೆ ಸುಮಾರು ಎರಡು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಿ ಐತಿಹಾಸಿಕ ದಾಖಲೆ ಸೃಷ್ಟಿಯಾಗಿದೆ.
- ‘ತೋರ್ ಬೆರಳು’, ‘ಅಜೇಯ’, ‘ಅದಮ್ಯ’, ‘ಶತಮಾನದ ತಿರುವಿನಲ್ಲಿ ಭಾರತ’, ‘ಗಾಂಧೀಯ ಅರ್ಥಶಾಸ್ತ್ರ’ಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳು ದೊರೆತಿವೆ.
- ‘ಉತ್ಕರ್ಷಪಥ’ ಕೃತಿಗೆ ‘ಸಿದ್ಧವನಹಳ್ಳಿ ಕೃಷ್ಣಶರ್ಮಾ ಸ್ಮಾರಕ ಗ್ರಂಥ ಪುರಸ್ಕಾರ’
- ‘ಸಾಮಾಜಿಕ ಕ್ರಾಂತಿಸೂರ್ಯ ಡಾ॥ ಬಾಬಾಸಾಹೇಬ್ ಅಂಬೇಡ್ಕರ್’ ಕೃತಿಗೆ – ಉತ್ಕೃಷ್ಟ ಅನುವಾದಕ್ಕಾಗಿ – ಕುವೆಂಪು ಭಾಷಾಭಾರತಿಯ ಪುರಸ್ಕಾರ ದೊರೆತಿದೆ.








- ರಾಷ್ಟ್ರೋತ್ಥಾನ ಸಾಹಿತ್ಯದ ಇದುವರೆಗಿನ ಕಾರ್ಯವನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು 'ಅಂಕಿತ ದತ್ತಿ ಪುರಸ್ಕಾರ'ವನ್ನು ನೀಡಿದೆ.

## ಕಾರ್ಯಕ್ರಮಗಳು:

- 2023–24ರ ಸಾಲಿನಲ್ಲಿ ಪ್ರಕಟವಾದ ಒಟ್ಟು ಪುಸ್ತಕಗಳು 7. 3 ಕೃತಿಗಳ ಲೋಕಾರ್ಪಣ ಕಾರ್ಯಕ್ರಮಗಳನ್ನು ನಡೆಸಲಾಗಿದೆ.
- **ಮಾತುಕತೆ**: ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆಯುತ್ತಿರುವ ಲೇಖಕರೊಂದಿಗೆ ಮತ್ತು ಹಿರಿಯ ಸಾಹಿತಿಗಳೊಂದಿಗೆ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, 2023–24ರ ಸಾಲಿನಲ್ಲಿ ಒಟ್ಟು 12 ಸಂವಾದ ಕಾರ್ಯಕ್ರಮಗಳು ನಡೆದಿವೆ.
- 3 ಕರಡು ತಿದ್ದುಪಡಿ ಕಾರ್ಯಾಗಾರಗಳನ್ನು ನಡೆಸಲಾಗಿದೆ.










## ವರ್ಷಾವಧೀ ಕಾರ್ಯಕಲಾಪಗಳು:

### ಬೆಂಗಳೂರಿನಲ್ಲಿ ನಡೆದ ಕನ್ನಡ ಪುಸ್ತಕ ಹಬ್ಬದ ವರದಿ:

- 2023ರ ನವೆಂಬರ್ 1ರಂದು ಪ್ರಸಿದ್ಧ ನಟ, ಕಲಾವಿದ ಶ್ರೀ ಸುಚೇಂದ್ರಪ್ರಸಾದ್ ಅವರು ಪುಸ್ತಕ ಹಬ್ಬವನ್ನು ಉದ್ಘಾಟಿಸಿದರು; ಮುಖ್ಯ ಅತಿಥಿಗಳಾಗಿ 'ವಿಜಯ ಕರ್ನಾಟಕ'ದ ಸಂಪಾದಕರಾದ ಶ್ರೀ ಸುದರ್ಶನ್ ಚನ್ನಂಗಿಹಳ್ಳಿ ಮತ್ತು 'ಪ್ರಜ್ಞಾಪ್ರವಾಹ'ದ ರಾಷ್ಟ್ರೀಯ ಸಹ-ಸಂಯೋಜಕರಾದ ಶ್ರೀ ರಘುನಂದನ್ ಅವರು ಆಗಮಿಸಿದ್ದರು.
- ಅಂದು ಸಂಜೆಯ ಕಾರ್ಯಕ್ರಮದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರಾದ ಡಾ. ಗುರುರಾಜ ಕರಜಗಿ ಅವರು 'ಸಂಸ್ಕೃತಿ' ಪುಸ್ತಕವನ್ನು ಲೋಕಾರ್ಪಣೆ ಮಾಡಿದರು; 'ಕನ್ನಡಪ್ರಭ' ಮತ್ತು 'ಸುವರ್ಣ ಸುದ್ದಿವಾಹಿನಿ'ಯ ಪ್ರಧಾನ ಸಂಪಾದಕರಾದ ಶ್ರೀ ರವಿ ಹೆಗಡೆಯವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು.
- ನವೆಂಬರ್ 4ರಂದು 'ಕನ್ನಡ ರಂಗಭೂಮಿ












ಮತ್ತು ರಾಷ್ಟ್ರೀಯತೆ' ವಿಷಯವಾಗಿ ಶ್ರೀ ಅಡ್ಡಂಡ ಕಾರ್ಯಪ್ಪ ಹಾಗೂ 'ಭಾರತೀಯತೆಯ ಸತ್ತ್ವ' ಕುರಿತು ಡಾ. ಅಜಕ್ಕಳ ಗಿರೀಶ್ ಭಟ್ ಅವರು ಮಾತನಾಡಿದರು.




- ನವೆಂಬರ್ 5ನೇ ತಾರೀಕು ನಿವೃತ್ತ ಭೂವಿಜ್ಞಾನಿ, ಪ್ರಸಿದ್ಧ ವಿಜ್ಞಾನಲೇಖಕರಾದ ಡಾ. ಟಿ. ಆರ್. ಅನಂತರಾಮು ಹಾಗೂ ಸಂಸ್ಕೃತಿ ಚಿಂತಕರೂ ಅಂಕಣಕಾರರೂ ಆದ ಡಾ. ಆರತಿ ವಿ. ಬಿ. ಅವರೊಂದಿಗೆ ಸಂವಾದ ಕಾರ್ಯಕ್ರಮಗಳು ನಡೆದವು.




- ನವೆಂಬರ್ 11ರಂದು ಶ್ರೀ ಅಜಿತ್ ಹನಮಕ್ಕನವರ್ ಅವರು 'ಪುಟ್ಟ ಇಸ್ರೇಲ್ ಕಲಿಸುವ ದಿಟ್ಟತನದ ಪಾಠಗಳು' ವಿಷಯವಾಗಿ ಮಾತನಾಡಿದರೆ, ಐವರು ಯುವ ಮಿತ್ರರಾದ ಪ್ರೊ. ಚೇತನ್, ಶ್ರೀ ಸುದೀಪ್, ಕು. ಸ್ಫೂರ್ತಿ ಮುರಳೀಧರ್, ಕು. ಚಂದನಾ ವೆಂಕಟೇಶ್, ಶ್ರೀ ಕಿರಣಕುಮಾರ್ ವಿವೇಕವಂಶಿ ಇವರುಗಳು 'ನಾನೇಕೆ ಓದುತ್ತೇನೆ?' ಎಂಬ ಕುರಿತು ಚರ್ಚೆಯನ್ನು ನಡೆಸಿಕೊಟ್ಟರು.




- ನವೆಂಬರ್ 12ರಂದು ಬೆಂಗಳೂರಿನ ರಾಮಕೃಷ್ಣ ಮಠದ ಅಧ್ಯಕ್ಷರಾದ ಪೂ.

ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ಅವರು 'ಸಾಹಿತ್ಯ ಸಾನ್ನಿಹಿತ್ಯ' ಪುಸ್ತಕ ಲೋಕಾರ್ಪಣೆ ಮಾಡಿದರು; ಶ್ರೀ ದಿವಾಕರ ಹೆಗಡೆ ಅವರು ಪುಸ್ತಕವನ್ನು ಪರಿಚಯಿಸಿದರು.

- ಅಂದು ಸಾಯಂಕಾಲ 'ಕನ್ನಡ ಕವಿಗಳು ಕಂಡ ಭಾರತ' ವಿಷಯವಾಗಿ ಡಾ. ಬಿ. ವಿ. ವಸಂತಕುಮಾರ್ ವಿಶೇಷ ಉಪನ್ಯಾಸ ನೀಡಿದರು; ವಿಜಯವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ. ಕೆ. ಎನ್. ಚನ್ನೇಗೌಡರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

- ನವೆಂಬರ್ 18ರಂದು 'ಏಕರೂಪ ನಾಗರಿಕ ಸಂಹಿತೆ: ಸಾಧ್ಯತೆ–ಸವಾಲುಗಳು' ವಿಷಯವಾಗಿ ಪ್ರೊ. ಎ. ಷಣ್ಮುಖ ಅವರು ವಿಶೇಷ ಉಪನ್ಯಾಸ ನೀಡಿದರು. ಬಹುಶ್ರುತ ವಿದ್ವಾಂಸರಾದ ಡಾ. ಶತಾವಧಾನಿ ಆರ್. ಗಣೇಶ್ ಅವರೊಂದಿಗೆ 'ವ್ಯಾಸಂಗದ ಹವ್ಯಾಸ' ವಿಷಯವಾಗಿ ಸಂವಾದ ನಡೆಯಿತು.

- ನವೆಂಬರ್ 19ರಂದು 'ಕನ್ನಡ ಚಳವಳಿ: ನಡೆದುಬಂದ ದಾರಿ' ವಿಷಯವಾಗಿ ಶ್ರೀ ಚಲುವಾದಿ ಜಗನ್ನಾಥ ಅವರಿಂದ ವಿಶೇಷ ಉಪನ್ಯಾಸ ನಡೆಯಿತು.

- ನವೆಂಬರ್ 24, 25 – ಎರಡು ದಿಗಳ ಕಾಲ ನಾಲ್ಕು ವಿಶೇಷ ಉಪನ್ಯಾಸಗಳು ನಡೆದಿದ್ದು, ಪೂಜ್ಯ ಸಿದ್ಧೇಶ್ವರ ಸ್ವಾಮಿಗಳನ್ನು ಕುರಿತು ಶ್ರೀ ಸಂಗಮೇಶ್ ಪೂಜಾರ್, ಸ್ವ. ರಂಗಾ ಹರಿ ಅವರನ್ನು ಕುರಿತು ಶ್ರೀ ವಿ. ನಾಗರಾಜ್, 'ಕನ್ನಡದ ವಿಶಿಷ್ಟ ಕೃತಿ – ಶಾಸನ ಪದ್ಯಮಂಜರಿ' ಕುರಿತು ಡಾ. ಕೆ. ಆರ್. ಗಣೇಶ್, 'ಕುವೆಂಪು ಕನ್ನಡಕ್ಕೆ ಒಲಿದು ಒಂದು ಶತಮಾನ' ಕುರಿತು ಡಾ. ಜಿ. ಬಿ. ಹರೀಶ್ ಮಾತನಾಡಿದರು.

- ಡಿಸೆಂಬರ್ 2ರಂದು 'ನವೋತ್ಥಾನದ ಅಧ್ವರ್ಯು: ಸ್ವಾಮಿ ದಯಾನಂದ ಸರಸ್ವತಿ' ವಿಷಯವಾಗಿ ಡಾ. ರೋಹಿಣಾಕ್ಷ ಶಿರ್ಲಾಲು ಮಾತನಾಡಿದರು. ಅದೇ ದಿನ 'ಹೊಸಕಾಲದ ಮಾಧ್ಯಮಗಳು: ಸಾಧ್ಯತೆ–ಸವಾಲುಗಳು' ವಿಷಯವಾಗಿ ಶ್ರೀ ಡಿ. ಎಂ. ಘನಶ್ಯಾಮ ಮತ್ತು ಶ್ರೀ ರಮೇಶ ದೊಡ್ಡಪುರ ಸಂವಾದ ನಡೆಸಿದರು.

- ಡಿಸೆಂಬರ್ 3ರಂದು ಬೆಳಗ್ಗೆ, 'ಸನಾತನ ಧರ್ಮ ಮತ್ತು ವಚನ ಸಾಹಿತ್ಯ' ವಿಷಯವಾಗಿ ಡಾ. ಜ್ಯೋತಿ ಶಂಕರ್ ಅವರು ವಿಶೇಷ ಉಪನ್ಯಾಸ ನೀಡಿದರು.

- ವಾರದ ದಿನಗಳಲ್ಲಿ, ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿದ್ದು, ಬೆಂಗಳೂರಿನಲ್ಲಿರುವ ಮೂರು ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳ ವಿದ್ಯಾರ್ಥಿಗಳು ಮತ್ತು ರಾಷ್ಟ್ರೋತ್ಥಾನ ಸಂಗೀತ ನೃತ್ಯ ಕಲಾಕೇಂದ್ರದ ವಿದ್ಯಾರ್ಥಿಗಳು ಈ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕೆಂಪೇಗೌಡ ನಗರದಲ್ಲಿರುವ ಸದ್ಗುರು ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದಲೂ 'ದಾಸರಪದ ಗಾಯನ' ಕಾರ್ಯಕ್ರಮ ನಡೆದಿದೆ.

- ಡಿಸೆಂಬರ್ 3ರಂದು ನಡೆದ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಎಂ. ಪಿ. ಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದು, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಡಿ. ವಿ. ಪರಶಿವಮೂರ್ತಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅಂದು ಕಾರ್ಯಕ್ರಮದಲ್ಲಿ, ದಾವಣಗೆರೆಯ ಸಾಹಿತ್ಯ ಪರಿಚಾರಕರಾದ ಶ್ರೀ ಉಮೇಶ್

ಅವರನ್ನು ಗೌರವಿಸಲಾಯಿತು. ಕನ್ನಡ ಪುಸ್ತಕ ಹಬ್ಬದ ನಿಮಿತ್ತ ನಡೆಸಲಾದ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು. ಆಯ್ದ ಶಾಲೆಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಿಸಲಾಯಿತು.

- 'ಕನ್ನಡ ಪುಸ್ತಕ ಹಬ್ಬ'ದಲ್ಲಿ ಒಟ್ಟು 12 ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು.
- ಪ್ರತಿ ಶನಿವಾರ ಭಾನುವಾರಗಳಂದು ಸಾಹಿತ್ಯ–ಸಂಸ್ಕೃತಿ–ರಾಷ್ಟ್ರೀಯತೆ–ಮಾಧ್ಯಮ ಮೊದಲಾದ ವಿಷಯಗಳನ್ನು ಕುರಿತು ಕಾರ್ಯಕ್ರಮಗಳು ನಡೆದಿವೆ.

## ವರ್ಷದ ಸಾಧನೆ:

- ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಪೂರ್ಣಪ್ರಮಾಣದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ನಡೆದಿದೆ.
- ರಾಜ್ಯದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಸಂಘಟನೆಗಳು, ಶಾಲೆಗಳು ಆಯೋಜಿಸಿದ್ದ 40ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ, ಸಮ್ಮೇಳನಗಳಲ್ಲಿ ಸಾಹಿತ್ಯ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಗಿದೆ.

## ಉಲ್ಲೇಖನೀಯ ಸಂಗತಿಗಳು:

- ಪುಸ್ತಕಗಳ ಮಾರಾಟದ ದೃಷ್ಟಿಯಿಂದಲೂ ಓದುಗರಿಂದ ಉತ್ತಮ ಸ್ಪಂದನೆ ದೊರೆತಿದೆ. ರಾಷ್ಟ್ರೋತ್ಥಾನ ಸಾಹಿತ್ಯದ ಪ್ರಕಟನೆಗಳಲ್ಲದೆ ಡಿವಿಜಿ, ಎಸ್. ಎಲ್. ಭೈರಪ್ಪ, ಶಿವರಾಮ ಕಾರಂತ, ಕುವೆಂಪು, ಪೂರ್ಣಚಂದ್ರ ತೇಜಸ್ವಿ, ಅನಕೃ, ದೇವುಡು, ತರಾಸು, ಕೆ. ಎನ್. ಗಣೇಶಯ್ಯ, ಜೋಗಿ, ವಸುಧೇಂದ್ರ, ಕೆ. ಎಸ್. ನಾರಾಯಣಾಚಾರ್ಯ, ಸುಧಾ ಮೂರ್ತಿ ಸೇರಿದಂತೆ ಹಲವರು ಪ್ರಸಿದ್ಧ ಲೇಖಕರ ಪುಸ್ತಕಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ.
- ರಾಷ್ಟ್ರೋತ್ಥಾನ ಸಾಹಿತ್ಯದ ಪುಸ್ತಕಗಳಲ್ಲದೇ, ಬೇರೆ ಬೇರೆ ಪ್ರಕಾಶಕರ, ಲೇಖಕರ ಪುಸ್ತಕಗಳಿಗೂ ವಿಶೇಷ ರಿಯಾಯಿತಿ ನೀಡುತ್ತಿರುವುದಕ್ಕೆ ಓದುಗರು ಸಂತಸ ವ್ಯಕ್ತಪಡಿಸುತ್ತಿದ್ದಾರೆ. ಕೆಲವರಂತೂ, 'ಮೂಲ ಪ್ರಕಾಶಕರೂ ನೀಡದ ರಿಯಾಯಿತಿ ನೀಡುತ್ತಿದ್ದೀರಿ' ಎಂದು ನಮ್ಮ ಬೆನ್ನು ತಟ್ಟಿದ್ದಾರೆ.
- ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದಲ್ಲಿ ಪುಸ್ತಕಗಳಿದ್ದವು. 'ಭಾರತ–ಭಾರತಿ ಪುಸ್ತಕ ಸಂಪದ'ದ ಎಂಟುನೂರಕ್ಕೂ ಹೆಚ್ಚು ಪುಸ್ತಕಗಳಲ್ಲದೇ, ಬೇರೆ ಬೇರೆ ಪ್ರಕಾಶಕರ ನೂರಾರು ವೈವಿಧ್ಯಮಯ ಪುಸ್ತಕಗಳನ್ನು ಪ್ರದರ್ಶಿಸಲಾಗಿತ್ತು. ಆ ವೈವಿಧ್ಯವನ್ನು ಕಂಡು ಮಕ್ಕಳೂ ಸಂಭ್ರಮಿಸಿದ್ದಾರೆ.
- ಪ್ರತಿದಿನ ಪುಸ್ತಕ ಹಬ್ಬಕ್ಕೆ ಭೇಟಿ ನೀಡುವವರಿಗಾಗಿ 'ಲಕ್ಕಿ ಡ್ರಾ'ದ ವ್ಯವಸ್ಥೆ ಮಾಡಲಾಗಿತ್ತು. ಅದರಲ್ಲಿ ವಿಜೇತರಾದವರಿಗೆ 'ಪುಸ್ತಕ ಬಹುಮಾನ' ನೀಡಲಾಗಿದೆ. ಪುಸ್ತಕ ಹಬ್ಬದ ಪ್ರಯುಕ್ತ

ಮಕ್ಕಳಿಗೆ ಗಾಯನ ಸ್ಪರ್ಧೆಯನ್ನೂ, ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ನಡೆಸಲಾಗಿದೆ.

- 33 ದಿನಗಳ ಪುಸ್ತಕ ಪ್ರದರ್ಶನ ಮತ್ತು ಮಾರಾಟ.
- ಕನ್ನಡದ ಹಿಂದಿನ ತಲೆಮಾರಿನ, ಹಿರಿಯ ತಲೆಮಾರಿನ ಲೇಖಕರ ಪುಸ್ತಕಗಳ ಜೊತೆಗೆ ಹೊಸಬರ ಪುಸ್ತಕಗಳಿಗೂ ಪ್ರದರ್ಶನದಲ್ಲಿ ಪ್ರಾಮುಖ್ಯ ನೀಡಲಾಗಿದೆ.
- ಪುಸ್ತಕ ಹಬ್ಬದಲ್ಲಿ 2 ಪುಸ್ತಕ ಬಿಡುಗಡೆ, 5 ಸಂವಾದಗಳು, 12 ವಿಶೇಷ ಉಪನ್ಯಾಸ ಕಾರ್ಯಕ್ರಮಗಳು.
- ಶೇ. 50ರ ವರೆಗೂ ವಿಶೇಷ ರಿಯಾಯಿತಿ.
- 16 ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದಿವೆ.

## ಉತ್ಥಾನ ಮಾಸಪತ್ರಿಕೆ:

ಸದಭಿರುಚಿಯ ಮಾಸಪತ್ರಿಕೆ ಉತ್ಥಾನವು 1965ರಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನಿಂದ ಆರಂಭವಾಯಿತು. ಅಲ್ಲಿಂದೀಚೆಗೆ ರಾಷ್ಟ್ರೋತ್ಥಾನ ಪರಿಷತ್‌ನೊಂದಿಗೆ ಉತ್ಥಾನ ಮಾಸಪತ್ರಿಕೆಯೂ ದಿನೆದಿನೇ ಬೆಳೆಯುತ್ತಿದ್ದು ಸದಭಿರುಚಿಯ ಲೇಖನಗಳು, ಕಥೆ, ಕವನಗಳನ್ನು ಮನೆಮನೆಗೂ ತಲಪಿಸುವಲ್ಲಿ ಯಶಸ್ವಿಯಾಗುತ್ತಿದೆ.



## ಉದ್ದೇಶ:

ಸದಭಿರುಚಿಯ ಬರಹಗಳ ಮೂಲಕ ಸ್ವಸ್ಥ–ಸುಸ್ಥಿರ ಸಮಾಜ ನಿರ್ಮಾಣ



## ವರ್ಷದ ಸಾಧನೆ:

- 12 ಸಂಚಿಕೆಗಳನ್ನು ತರಲಾಗಿದೆ.
- 2 ವಿಶೇಷ ಸಂಚಿಕೆಗಳನ್ನು ಹೊರತಲಾಗಿದೆ.
- ಕಥಾಸ್ಪರ್ಧೆಗೆ ಒಟ್ಟು 356 ಕಥೆಗಳು ಬಂದಿದ್ದವು.
- ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ 313 ಕಾಲೇಜಿನಿಂದ 793 ವಿದ್ಯಾರ್ಥಿಗಳು ಭಾಗವಹಿಸಿದ್ದರು.
- 310 ಸಾರ್ವಜನಿಕ ಗ್ರಂಥಾಲಯಗಳಿಗೆ ತಲಪಲಾಗಿದೆ.

**Rashtrotthana Parishat**

93/1, Keshava Shilpa, Kempegowda Nagara
Bengaluru - 560 004, KA

Contact: 080-2661 2730/ 31/ 32/ 94482 84602
Email: info@rashtrotthana.org

**www.rashtrotthana.org**

FB & Instagram: rashtrotthanaparishath
Twitter: rashtrotthana_p
YouTube: Rashtrotthana
LinkedIn: rashtrotthana-parishat

ರಾಷ್ಟ್ರೋತ್ಥಾನ ಪರಿಷತ್